
ಕರ್ನಾಟಕ ಸರ್ಕಾರ

## ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಧಾರವಾಡ,

## ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಧಾರವಾಡ









# -: ಸವಿ ಸಿಂಚನ :-

## ವಿಷಯ : ಸಮಾಜ ವಿಜ್ಞಾನ

### ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಲು ವಿದ್ಯಾರ್ಥಿಸ್ನೇಹಿ ಅಧ್ಯಯನ ಸಂಪನ್ಮೂಲ

**ಸಹಕಾರ**

ಉಪನಿರ್ದೇಶಕರು (ಆಡಳಿತ) ಹಾಗೂ (ಅಭಿವೃದ್ಧಿ)

ಶಿಕ್ಷಣಾಧಿಕಾರಿಗಳು, ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು ವಿಷಯ ಪರಿವೀಕ್ಷಕರು ಮತ್ತು ಸಮಾಜ ವಿಜ್ಞಾನ ವಿಷಯ ಪರಿವಾರ

ಕರ್ನಾಟಕ ಸರಕಾರ

**ಜಿಲ್ಲಾಡಳಿತ ಧಾರವಾಡ**



ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ

ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ.

**ಶ್ರೀಮತಿ ದಿವ್ಯಪ್ರಭು ಜಿ.ಆರ್.ಜೆ.** ಭಾ.ಆ.ಸೇ

# ಆಶಯ

ಪ್ರಿಯ ವಿದ್ಯಾರ್ಥಿಗಳೇ,

ಈ ಸಂದೇಶವು ನಿಮ್ಮಲ್ಲಿ ಶ್ರದ್ಧೆಯಿಂದ ಓದುವ ಮತ್ತು ಆತ್ಮವಿಶ್ವಾಸದಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಎದುರಿಸಿ ಉತ್ತಮ ಫಲಿತಾಂಶವನ್ನು ಪಡೆಯುವ ಶಕ್ತಿಯನ್ನು ತುಂಬುತ್ತದೆ ಎಂದು ನಾನು ಭಾವಿಸುತ್ತೇನೆ.

ಧಾರವಾಡ ಜಿಲ್ಲೆಯ ಶಿಕ್ಷಣ ತಜ್ಞರೆಲ್ಲ ಸೇರಿಕೊಂಡು, "ಮಿಷನ್ ವಿದ್ಯಾಕಾಶಿ" ಎಂಬ ಪರೀಕ್ಷಾ ಫಲಿತಾಂಶ ಸುಧಾರಣಾ ಯಶಸ್ಸಿನ ಓಟಕ್ಕೆ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಾದ ತಮ್ಮನ್ನೆಲ್ಲ ಸಿದ್ಧಗೊಳಿಸಲು ಸನ್ನದ್ಧರಾಗಿದ್ದಾರೆ. ನಿಮ್ಮಲ್ಲಿ ಪ್ರತಿಯೊಬ್ಬರೂ ಪ್ರತಿಭೆ, ಸಾಮರ್ಥ್ಯ ಮತ್ತು ಕನಸುಗಳನ್ನು ಹೊಂದಿದ್ದೀರಿ, ಅದು ಸಾಕಾರಗೊಳ್ಳಲು ಕಾಯುತ್ತಿದೆ. ನಿಮ್ಮ ಉತ್ತಮ ಭವಿಷ್ಯಕ್ಕೆ ಮತ್ತು ಮಹೋನ್ನತ ಗುರಿಯ ಸಾಧನೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯು ಮಹತ್ವದ ಘಟ್ಟವಾಗಿದೆ. ಈ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಲು ನಿರಂತರ ಅಧ್ಯಯನದ ಅವಶ್ಯಕತೆ ಇದೆ. ಹಾಗಾದರೆ ದಿನನಿತ್ಯದ ನಮ್ಮ ಅಧ್ಯಯನ ಹೇಗಿರಬೇಕು? ಎಂಬ ಪ್ರಶ್ನೆಯು ಪ್ರತಿಯೊಬ್ಬರನ್ನೂ ಕಾಡಿರುತ್ತದೆ. ಈ ಕುರಿತಂತೆ ಮಹಾತ್ಮಾ ಗಾಂಧೀಜಿಯವರು 'ನಾವು ಏನನ್ನು ಓದುತ್ತೇವೆಯೋ ಅದರ ಬಗ್ಗೆ ಚಿಂತಿಸಬೇಕು, ಅದನ್ನು ಜೀರ್ಣಿಸಿಕೊಳ್ಳಬೇಕು ಹಾಗೂ ಅದು ನಮ್ಮ ದಿನನಿತ್ಯ ಜೀವನದ ಒಂದು ಅವಿಭಾಜ್ಯ ಅಂಗವಾಗಿರಬೇಕು' ಎಂದು ಹೇಳಿದ್ದನ್ನು ಮೆಲುಕು ಹಾಕುತ್ತಾ ಪ್ರತಿ ದಿನ ತರಗತಿಯಲ್ಲಿ ಶಿಕ್ಷಕರು ತಿಳಿಸುವ ವಿಷಯಗಳನ್ನು ಸರಿಯಾಗಿ ಮನನ ಮಾಡಿಕೊಂಡು ಪುನಃ ಪುನಃ ದೃಢೀಕರಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುತ್ತಿರುವ ಎಲ್ಲ ವಿದ್ಯಾರ್ಥಿಗಳೂ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಲು ಸರಳವಾಗಿ ಮತ್ತು ಸುಲಭವಾಗಿ ತಿಳಿಯುವಂತೆ ಪೂರಕ ಸಾಹಿತ್ಯವನ್ನು ಸಂಪನ್ಮೂಲ ಶಿಕ್ಷಕರ ಸಹಕಾರದೊಂದಿಗೆ ಸಿದ್ಧಪಡಿಸಲಾಗಿರುತ್ತದೆ. ವಿದ್ಯಾರ್ಥಿಗಳು ಈ ಕಲಿಕಾ ಸಂಪನ್ಮೂಲವನ್ನು ಸದುಪಯೋಗಪಡಿಸಿಕೊಂಡು ಉತ್ತಮವಾದ ಫಲಿತಾಂಶವನ್ನು ಪಡೆಯಲಿ ಮತ್ತು ರಾಜ್ಯದಲ್ಲಿ ಧಾರವಾಡ ಜಿಲ್ಲೆಯ ಪ್ರತಿಶತ ಫಲಿತಾಂಶವೂ ಕೂಡ ಹೆಚ್ಚಾಗಲಿ ಎಂದು ಶುಭ ಹಾರೈಸುತ್ತೇನೆ.

**ಶ್ರೀಮತಿ ದಿವ್ಯಪ್ರಭು ಜಿ.ಆರ್.ಜೆ.** ಭಾ.ಆ.ಸೇ

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು,

ಧಾರವಾಡ ಜಿಲ್ಲೆ, ಧಾರವಾಡ.

# ಕರ್ನಾಟಕ ಸರಕಾರ

## ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಧಾರವಾಡ



## ಮುನ್ನುಡಿ

ಪ್ರತಿಯೊಂದು ಮಗು ಗುಣಾತ್ಮಕ ಶಿಕ್ಷಣವನ್ನು ಪಡೆದು ಭವಿಷ್ಯವನ್ನು ಉತ್ತಮವಾಗಿ ಕಟ್ಟಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆಯು ಹಲವಾರು ಪ್ರಯತ್ನಗಳನ್ನು ಮಾಡುತ್ತಲೇ ಇರುತ್ತದೆ. ಪ್ರತಿಯೊಂದು ಮಗು ವೈಯಕ್ತಿಕ ಭಿನ್ನತೆಯನ್ನು ಹೊಂದಿದ್ದು ಅದಕ್ಕೆ ಅನುಗುಣವಾಗಿ ಶಿಕ್ಷಕರು ವಿವಿಧ ಕಲಿಕಾ ಬೋಧನಾ ವಿಧಾನಗಳನ್ನು ಅನುಸರಿಸಿ ಉತ್ತಮ ಕಲಿಕೆಗಾಗಿ ಶ್ರಮಿಸುತ್ತಾರೆ. ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವನ್ನು ಪರೀಕ್ಷೆಗಳ ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ..

ವಿದ್ಯಾರ್ಥಿ ಜೀವನದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯು ಒಂದು ಮಹತ್ವದ ಮೈಲುಗಲ್ಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಇದರಲ್ಲಿ ಯಶಸ್ಸನ್ನು ಪಡೆಯುವುದು ಅನಿವಾರ್ಯವಾಗಿದೆ. ಈ ಹಿನ್ನಲೆಯಲ್ಲಿ ಎಲ್ಲ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆಯುವ ಮೂಲಕ ಉತ್ತೀರ್ಣರಾಗಿ ಮುಂದಿನ ಶಿಕ್ಷಣಕ್ಕೆ ಅರ್ಹತೆ ಸಾಧಿಸಬೇಕು ಎಂಬ ಉದ್ದೇಶದಿಂದ ಎಲ್ಲ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪೂರಕ ಸಾಹಿತ್ಯವಾಗಿ ಕಿರುಹೊತ್ತಿಗೆಯನ್ನು ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿರುತ್ತಾರೆ. ಇವು ಮುಂಬರುವ ಪರೀಕ್ಷೆಯನ್ನು ಎದುರಿಸಲು ಹೆಚ್ಚು ಸಹಕಾರಿಯಾಗುತ್ತವೆ ಎಂಬ ವಿಶ್ವಾಸವಿದೆ. ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಯ ಕಲಿಕೆಯ ವೇಗಗಳ ಹಿನ್ನಲೆಯಲ್ಲಿ ಶಿಕ್ಷಕರು ಈ ಪೂರಕ ಸಾಹಿತ್ಯವನ್ನು ಮಾದರಿಯಾಗಿಸಿಕೊಂಡು ಉತ್ತಮ ಫಲಿತಾಂಶವನ್ನು ಪಡೆಯಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲಿ ಹಾಗೂ ವಿದ್ಯಾರ್ಥಿಗಳು ಈ ಕಲಿಕಾ ಸಂಪನ್ಮೂಲವನ್ನು ಸದುಪಯೋಗಪಡಿಸಿಕೊಂಡು ಪರೀಕ್ಷೆಯನ್ನು ಆತ್ಮವಿಶ್ವಾಸದಿಂದ ಎದುರಿಸಿ ಯಶಸ್ಸನ್ನು ಗಳಿಸಲಿ ಎಂದು ಹಾರೈಸುತ್ತೇನೆ.

ಎಸ್.ಎಸ್.ಕೆಳದಿಮಠ

ಉಪನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ ಧಾರವಾಡ

**ಸಲಹೆಗಾರರು : ಶ್ರೀ ವೈ ಬಿ ಬೊಮ್ಮಕ್ಕನವರ** ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುಬ್ಬಳ್ಳಿ ಗ್ರಾಮೀಣ

ಶ್ರೀ ರಾಮಕೃಷ್ಣ ಆರ್ ಸದಲಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಧಾರವಾಡ ಗ್ರಾಮೀಣ

**ಪ್ರೋತ್ಸಾಹ : ಡಾ॥ ರೇಣುಕಾ ಅಮಲ್ಝರಿ**

**ಮಾನ್ಯ APCO RMSA ಶಾಲಾ ಶಿಕ್ಷಣ ಇಲಾಖೆ, ಧಾರವಾಡ**

ಶ್ರೀಮತಿ ರಾಜರಾಜೇಶ್ವರಿ ಮ್ಯಾಗೇರಿ

ವಿಷಯ ಪರಿವೀಕ್ಷಕರು ಸಮಾಜ–ವಿಜ್ಞಾನ

## ಸಂಪನ್ಮೂಲ ಶಿಕ್ಷಕರ ತಂಡ

| ಅ.ಸಂ | ಸಂಪನ್ಮೂಲ ವ್ಯಕಿಗಳು | ಶಾಲೆ |
|---|---|---|
| 1 | **ಶ್ರೀ. ಸಂಜೀವ ಕುಂದಗೋಳ** | ನೆಹರು ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ ಹೆಬ್ಬಳ್ಳಿ ತಾ॥ ಜಿ॥ ಧಾರವಾಡ |
| 2 | **ಶ್ರೀಮತಿ ಮಾಧುರಿ ಕುಲಕರ್ಣಿ** | ಸರ್ಕಾರಿ ಪ್ರೌಢಶಾಲೆ R N ಶೆಟ್ಟಿ ಕ್ರೀಡಾಂಗಣ ಧಾರವಾಡ ಶಹರ |
| 3 | **ಶ್ರೀ ಸಂಜೀವರಡ್ಡಿ ಒಂಟಗೋಡಿ** | ಸರ್ಕಾರಿ ಪ್ರೌಢಶಾಲೆ ಮತ್ತಿಗಟ್ಟಿ ತಾ॥ ಕುಂದಗೋಳ |
| 4 | ಜಗದೀಶ ಎನ್ ಜಾಬಣ್ಣವರ | ಬೆನಕ ವಿದ್ಯಾಮಂದಿರ ಹುಬ್ಬಳ್ಳಿ |

# ಎಸ್. ಎಸ್. ಎಲ್. ಸಿ. ನಿಧಾನಗತಿ ಕಲಿಕೆಯ ಮಕ್ಕಳ ಅಧ್ಯಯನಕ್ಕೆ ಆಯ್ದ ಅಧ್ಯಾಯಗಳು

## ಪರಿವಿಡಿ


| ಅ.ಸಂ | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| 1 | ಭಾರತಕ್ಕೆ ಯುರೋಪಿಯನ್ನರ ಆಗಮನ | 4–5 |
| 2 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | 6–10 |
| 3 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು | 11–12 |
| 4 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857) | 13–14 |
| 5 | ಸ್ವಾತಂತ್ರ್ಯ ಹೋರಾಟ | 15–20 |
| 6 | ಸಾರ್ವಜನಿಕ ಆಡಳಿತ ಒಂದು ಪರಿಚಯ | 21–23 |
| 7 | ಜಾಗತಿಕ ಸಂಸ್ಥೆಗಳು | 24–25 |
| 8 | ಸಾಮಾಜಿಕ ಸ್ತರವಿನ್ಯಾಸ | 25–26 |
| 9 | ದುಡಿಮೆ ಮತ್ತು ಆರ್ಥಿಕ ಜೀವನ | 26–27 |
| 10 | ಸಾಮಾಜಿಕ ಸವಾಲುಗಳು | 28–30 |
| 11 | ಭಾರತದ ಅರಣ್ಯಗಳು | 30–31 |
| 12 | ಭಾರತದ ಮಣ್ಣುಗಳು | 31–32 |
| 13 | ಭಾರತದ ಭೂ ಬಳಕೆ ಹಾಗೂ ಕೃಷಿ | 32–34 |
| 14 | ಭಾರತದ ಸಾರಿಗೆ ಹಾಗೂ ಸಂಪರ್ಕ | 35–36 |
| 14 | ಭಾರತದ ಕೈಗಾರಿಕೆಗಳು | 36–38 |
| 15 | ಗ್ರಾಮೀಣಾಭಿವೃದ್ಧಿ | 38–40 |
| 16 | ಬ್ಯಾಂಕ್ ವ್ಯವಹಾರಗಳು | 40–41 |
| 17 | ನಕ್ಷೆಯ ಅಧ್ಯಾಯಗಳು ಮತ್ತು ಸ್ಥಳ ಗುರ್ತಿಸುವಿಕೆ | 42 |

## ಭಾರತಕ್ಕೆ ಯುರೋಪಿಯನ್ನರ ಆಗಮನ

## ಒಂದು ಅಂಕದ ಪ್ರಶ್ನೆಗಳು

1) ಭಾರತ ಮತ್ತು ಯುರೋಪ್ ನಡುವೆ ಜಲಮಾರ್ಗವನ್ನು ಕಂಡು ಹಿಡಿದವನು____**ಉ:- ವಾಸ್ಕೋಡಗಾಮ**

2) ನೀಲಿ ನೀರಿನ ನೀತಿಯನ್ನು ಜಾರಿಗೆ ತಂದವನು

**ಉ:- ಫ್ರಾನ್ಸಿಸ್ಕೊ ಡಿ ಅಲ್ಮೇಡ್**

**3)** ಯುರೋಪಿನ ದೇಶಗಳ ಮೇಲೆ ವ್ಯಾಪಾರದ ಏಕಸ್ವಾಮ್ಯವನ್ನು ಸಾಧಿಸಿದ ವರ್ತಕರು________

**ಉ:- ಇಟಲಿಯ ವರ್ತಕರು**

4) 1453 ರಲ್ಲಿ ಕಾನಸ್ಟಂಟಿನೋಪಲ್ ನಗರವನ್ನು ವಶಪಡಿಸಿಕೊಂಡವರು_________

**ಉ:- ಆಟೋಮಾನ್ ಟರ್ಕರು**

5) ಕಾನ್ ಸ್ಟಾಂಟಿ ನೋಪಲ್ ನ್ನು ಯುರೋಪಿಯನ್ ವ್ಯಾಪಾರದ ಹೆಬ್ಬಾಗಿಲು ಎಂದು ಕರೆಯಲಾಗುತ್ತಿತ್ತು ಏಕೆಂದರೆ -----

**ಉ:-ಅದು ಅಂತರಾಷ್ಟ್ರೀಯ ವ್ಯಾಪಾರದ ಕೇಂದ್ರವಾಗಿತ್ತು**

6) ಅಂತರಾಷ್ಟ್ರೀಯ ವ್ಯಾಪಾರದ ಹೆಬ್ಬಾಗಿಲು ಎಂದು ಹೆಸರುವಾಸಿಯಾದ ಪ್ರದೇಶ -__________

**ಉ:- ಕಾನ್ ಸ್ಟಾಂಟಿನೋಪಲ್**

7) ಮೂರನೇ ಕಾರ್ನಾಟಿಕ್ ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ__________**ಉ:- ಪ್ಯಾರಿಸ್**

1764 ರಲ್ಲಿ ಬಂಗಾಳದಲ್ಲಿ ನಡೆದ ಕದನ________

**ಉ:-ಬಕ್ಸಾರ್ ಕದನ**

**8)** ಬಂಗಾಳದಲ್ಲಿ ದ್ವಿ ಸರ್ಕಾರ ಪದ್ಧತಿಯನ್ನು ಜಾರಿಗೆ ತಂದವನು ____**ಉ:-ರಾಬರ್ಟ್ ಕ್ಲೈವ್**

ಮೊದಲನೆಯ ಕಾರ್ನಾಟಿಕ್ ಯುದ್ಧವು ಕೊನೆಗೊಂಡದ್ದು_______

**ಉ:-ಎಕ್ಸಲಾ ಚಾಪೆಲ್ ಒಪ್ಪಂದ**

**9)** ಭಾರತದಲ್ಲಿ ಫ್ರೆಂಚರ ರಾಜಧಾನಿ______**ಉ:- ಪಾಂಡಿಚೇರಿ**

ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು ಎಂದರೆ_____

**ಉ:- ಪೋರ್ಚುಗೀಸರು**

**10)** ಜಹಾಂಗೀರನ ಆಸ್ಥಾನಕ್ಕೆ ಬಂದ ರಾಯಭಾರಿ_______

**ಉ:-ಸರ್, ಥಾಮಸ್ ರೋ**

**11)** ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ_____**ಉ:-ಅಲ್ಫಾನ್ಸೋಡಿ ಅಲ್ಬುಕರ್ಕ್**

**12)** ಭಾರತದಲ್ಲಿ ಬ್ರಿಟಿಷರು ರಾಜಕೀಯ ಪರಮಾಧಿಕಾರ ಸ್ಥಾಪಿಸಲು ಕಾರಣ_________

**ಉ:-ತಮ್ಮ ವಾಣಿಜ್ಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ**

13) ಡಚ್ಚರು ತಮ್ಮನ್ನು ಸಾಂಬಾರು ದ್ವೀಪಗಳಿಗೆ ಸೀಮಿತಗೊಳಿಸಿಕೊಳ್ಳಲು ಕಾರಣ

**ಇಂಗ್ಲೀಷರು ಮತ್ತು ಫ್ರೆಂಚರ ಪೈಪೋಟಿಯನ್ನು ಎದುರಿಸಲು ಸಾಧ್ಯವಾಗದೇ ಇದ್ದುದು**

14) ಬ್ರಿಟಿಷರು ಕಲ್ಕತ್ತಾದ ಹತ್ತಿರ ನಿರ್ಮಿಸಿದ ಕೋಟೆ __________

**ಉ:-ಪೋರ್ಟ್ ವಿಲಿಯಂ**

**15)** ಬ್ರಿಟೀಷರು ಮದ್ರಾಸಿನ ಹತ್ತಿರ ನಿರ್ಮಿಸಿದ ಕೋಟೆ ________

**ಉ:-ಸೇಂಟ್ ಜಾರ್ಜ್ ಫೋರ್ಟ್**

**16)** ತಮಿಳುನಾಡಿನ ಪೂರ್ವಭಾಗವೇ_____

**ಉ:- ಕಾರ್ನಾಟಿಕ್ ಪ್ರದೇಶ**

## ಎರಡು ಅಂಕದ ಪ್ರಶ್ನೆಗಳು

**1) ಪ್ಲಾಸಿ ಕದನಕ್ಕೆ ಕಾರಣಗಳನ್ನು ತಿಳಿಸಿ**

ಉತ್ತರ :–ದಸ್ತಕಗಳ ದುರುಪಯೋಗ

ಅನುಮತಿ ಇಲ್ಲದೆ ಕೋಟೆಯ ದುರಸ್ತಿ

ಕಪ್ಪು ಕೋಣೆಯ ದುರಂತ

**2) ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ವೈಜ್ಞಾನಿಕ ಅಂಶಗಳು ಯಾವವು ?**

ಉತ್ತರ:– ನಾವಿಕರ ದಿಕ್ಸೂಚಿ ,ಗ್ರಹೋನ್ನತಿ ಮಾಪಕ

ಸಿಡಿಮದ್ದಿನ ಬಳಕೆ ನಕ್ಷೆಗಳು

**3) ಭಾರತಕ್ಕೆ ಬಂದ ಯುರೋಪಿಯನ್ನರನ್ನು ಪಟ್ಟಿಮಾಡಿ**

ಉತ್ತರ:– ಭಾರತಕ್ಕೆ ಬಂದ ಯುರೋಪಿಯನ್ನರು ಪೋರ್ಚುಗೀಸರು, ಡಚ್ಚರು,ಇಂಗ್ಲಿಷರು, ಫ್ರೆಂಚರು

**4) ಪ್ಲಾಸಿ ಕದನವು ಯಾವಾಗ ಮತ್ತು ಯಾರ ನಡುವೆ ನಡೆಯಿತು ?**

ಉತ್ತರ:– ಪ್ಲಾಸಿ ಕದನವು 1757ರಲ್ಲಿ ಬಂಗಾಳದ ನವಾಬನಾದ ಸಿರಾಜ್ ಉದೌಲನಿಗೂ ರಾಬರ್ಟ್ ಕ್ಲೈವನ ನೇತೃತ್ವದಲ್ಲಿದ್ದ ಬ್ರಿಟಿಷರಿಗೂ ನಡೆಯಿತು

**5) ದಸ್ತಕ ಹಾಗೂ ದಿವಾನಿ ಪದಗಳ ಅರ್ಥ ತಿಳಿಸಿ**

ಉತ್ತರ:– ದಸ್ತಕ ಎಂದರೆ ತೆರಿಗೆ ಇಲ್ಲದೆ ವ್ಯಾಪಾರ ಮಾಡಲು ನೀಡಿದ ಪರವಾನಿಗೆ ಪತ್ರ ಮತ್ತು

ದಿವಾನಿ ಎಂದರೆ ಭೂಕಂದಾಯ ವಸೂಲಿ ಮಾಡುವ ಹಕ್ಕು

**6) ಪ್ಲಾಸಿ ಕದನದ ಪರಿಣಾಮಗಳನ್ನು ತಿಳಿಸಿ**

- ಉತ್ತರ:– ಪ್ಲಾಸಿ ಕದನದ ಪರಿಣಾಮಗಳು ಸಿರಾಜುದ್ದೌಲನು ಯುದ್ಧದಲ್ಲಿ ಸೋತು ಮರಣ ಹೊಂದಿದನುಮೀರ್ ಜಾಫರ್ ಬಂಗಾಳದ ನವಾಬನಾದನು
- ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ ಮತ್ತು ಅಸಂಘಟನೆ ಲೋಭತನವನ್ನು ಪ್ರದರ್ಶಿಸಿತು
- ಮೀರ್ ಜಾಫರ್ ನು 17ಕೋಟಿ 70 ಲಕ್ಷ ರೂಪಾಯಿಗಳನ್ನು ಕಂಪನಿಗೆ ನೀಡಿದನು

ಕಂಪನಿಯು ಬಂಗಾಳದಲ್ಲಿ ವ್ಯಾಪಾರದ ಹಕ್ಕನ್ನು ಪಡೆಯಿತು

**7 ಮಾರ್ತಾಂಡವರ್ಮನು ಡಚ್ಚರನ್ನು ಹೇಗೆ ನಿಯಂತ್ರಿಸಿದನು ?**

- ಉತ್ತರ :– ರಾಜಾ ಮಾರ್ತಾಂಡವರ್ಮನು ಕರಿಮೆಣಸಿನ ವ್ಯಾಪಾರದಲ್ಲಿ ಹಿಡಿತ ಸಾಧಿಸುತ್ತಿದ್ದ ಡಚ್ಚರನ್ನು ತಡೆಗಟ್ಟಿದನು
- ಡಚ್ ಸೇನೆಯು ತಿರುವಾಂಕೂರಿನ ಮೇಲೆ ಆಕ್ರಮಣ ಮಾಡಿತು
- ಮಾರ್ತಾಂಡವರ್ಮನು ಡಚ್ ಕೂಟವನ್ನು ಸೋಲಿಸಿದನು
- ಮೆಣಸು ಬೆಳೆಯುವ ಪ್ರದೇಶಗಳನ್ನು ತನ್ನ ಕೈವಶ ಮಾಡಿಕೊಂಡನು
- 1741 ರಲ್ಲಿ ಡಚ್ಚರು ಮತ್ತೆ ಆಕ್ರಮಣ ಮಾಡಿದಾಗ ಅವರನ್ನು ಸಂಪೂರ್ಣವಾಗಿ ಸೋಲಿಸಿದನು
- ಡಚ್ಚರು ತಮ್ಮ ಸಂಪೂರ್ಣ ಅಧಿಕಾರವನ್ನು ತಿರುವಾಂಕೂರಿಗೆ ಒಪ್ಪಿಸಿ ಶರಣಾದರು

## ಮೂರು ಅಂಕದ ಪ್ರಶ್ನೆಗಳು

**8) ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ**

- ಉತ್ತರ:– ಆಟೋಮೊನ್ ಟರ್ಕರು ಕಾನ್ ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡದ್ದು
- ಎಲ್ಲ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದುದು
- ಟರ್ಕರು ವ್ಯಾಪಾರದ ಮೇಲೆ ತೀವ್ರ ತೆರಿಗೆಗಳನ್ನು ವಿಧಿಸಿದರು
- ವರ್ತಕರಿಗೆ ವ್ಯಾಪಾರವು ಲಾಭದಾಯಕವಾಗಲಿಲ್ಲ
- ಇಟಲಿಯ ವರ್ತಕರ ಏಕ ಸ್ವಾಮ್ಯ ಮುರಿಯಲು ಸ್ಪೇನ್ ಮತ್ತು ಪೋರ್ಚುಗಲ್ ದೇಶಗಳ ಪ್ರಯತ್ನ
- ವೈಜ್ಞಾನಿಕಅ ಆವಿಷ್ಕಾರಗಳಾದ ದಿಕ್ಸೂಚಿ ಆಸ್ಟ್ರೋಲೋಬ್ ಸಿಡಿಮದ್ದಿನ ಬಳಕೆ ಮತ್ತು ನಕ್ಷೆಗಳು ಸಹ ಸಹಾಯಕವಾದದು

**9) ಮೂರನೇ ಕರ್ನಾಟಿಕ್ ಯುದ್ಧದ ಪರಿಣಾಮಗಳನ್ನು ತಿಳಿಸಿ**

ಉತ್ತರ:_ ಮೂರನೇ ಕರ್ನಾಟಿಕ್ ಯುದ್ಧ ಪರಿಣಾಮಗಳು

- ಈ ಯುದ್ಧಗಳಲ್ಲಿ ಫ್ರೆಂಚರು ಸೋತರು
- ಫ್ರೆಂಚರು ಭಾರತದಲ್ಲಿ ತಮ್ಮ ನೆಲೆಗಳನ್ನು ಕಳೆದುಕೊಂಡರು
- ಪ್ಯಾರಿಸ್ ಒಪ್ಪಂದದಂತೆ ಪಾಂಡಿಚೆರಿಯನ್ನು ಪಡೆದರು
- ದಕ್ಷಿಣ ಭಾರತದಲ್ಲಿ ಫ್ರೆಂಚರು ಮೂಲೆಗುಂಪಾದರು
- ಬ್ರಿಟಿಷರಿಗೆ ಯುರೋಪಿಯನ್ ಸ್ಪರ್ಧಿಗಳು ಇಲ್ಲವಾದರ ಬ್ರಿಟಿಷರು ದಕ್ಷಿಣ ಭಾರತವನ್ನು ಗೆಲ್ಲಲು ಮುಂದಾದರು

**10) ಬಕ್ಸಾರ್ ಕದನದ ಪರಿಣಾಮಗಳನ್ನು ತಿಳಿಸಿ**

ಉತ್ತರ:- ಯುದ್ಧದಲ್ಲಿ ಮೈತ್ರಿಕೂಟವು ಬ್ರಿಟಿಷರ ವಿರುದ್ಧ ಸೋತಿತು

- ಎರಡನೆಯ ಷಾ ಆಲಂನು ಬಂಗಾಳದ ದಿವಾನಿ ಹಕ್ಕನ್ನು ನೀಡಿದನು
- ಷಾ ಆಲಂನು ವಾರ್ಷಿಕ 26 ಲಕ್ಷಗಳಿಗೆ ರೂಪಾಯಿಗಳಿಗೆ ಬಂಗಾಳದ ಮೇಲಿನ ತನ್ನ ಹಕ್ಕನ್ನು ಬಿಟ್ಟುಕೊಟ್ಟನು

ಷೂಜಾ ಉದ್‌ದೌಲನು ಯುದ್ಧ ನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕಂಪನಿಗೆ ನೀಡಿದನು

ಬ್ರಿಟಿಷರು ಮೀರ್ ಜಾಫರನ ಮಗನಿಗೆ ವಿಶ್ರಾಂತಿ ವೇತನ ನೀಡಿದರು

ಬಂಗಾಳದ ಆಡಳಿತವನ್ನು ಕಂಪನಿಯು ವಹಿಸಿಕೊಂಡಿತು

# ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

**I.ಒಂದು ಅಂಕದ ಪ್ರಶ್ನೋತ್ತರಗಳು**

1.ಭಾರತದ ನಾಗರಿಕ ಸೇವಾ ವ್ಯವಸ್ಥೆಯನ್ನು ಪಿತಾಮಹ ಯಾರು?

ಉತ್ತರ: ಲಾರ್ಡ್ ಕಾರ್ನ್‌ವಾಲೀಸ್

2.1773ರಲ್ಲಿ ಇಂಗ್ಲೆಂಡಿನ ಸರ್ಕಾರ ರೆಗ್ಯುಲೇಟಿಂಗ್ ಕಾಯ್ದೆಯನ್ನು ಭಾರತದಲ್ಲಿ ಏಕೆ ಜಾರಿಗೊಳಿಸಿತು?

ಉತ್ತರ: ಕಂಪನಿಯ ನೌಕರರು ಅನೈತಿಕ ಮಾರ್ಗಗಳಲ್ಲಿ ಹಣ ಸಂಪಾದಿಸಿ ಕಡುಭ್ರಷ್ಟರಾದರು. ಇದನ್ನು ತಡೆಯುವ ಸಲುವಾಗಿ

3.ಕಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ಸ್ಥಾಪಿಸಿದವನು ಯಾರು?

ಉತ್ತರ:ಕಾರ್ನ್ ವಾಲೀಸ್

4.1800ರಲ್ಲಿ ಕಾರ್ನ್ ವಾಲೀಸನು ಕಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ಏಕೆ ಸ್ಥಾಪಿಸಿದನು?

ಉತ್ತರ:ನಾಗರಿಕ ಸೇವೆಗೆ ಸೇರ ಬಯಸುವವರಿಗೆ ಶಿಕ್ಷಣವನ್ನು ನೀಡಲು

5. "ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯು ಭ್ರಷ್ಟ" ಎಂದು ಪ್ರತಿಪಾದಿಸಿದವನು ಯಾರು?

ಉತ್ತರ: ಕಾರ್ನ್ ವಾಲೀಸ್

6.ದಿವಾನಿ ಹಕ್ಕು ಎಂದರೇನು?

ಉತ್ತರ:ಕಂದಾಯ ವಸೂಲಾತಿ ಹಕ್ಕು

7.ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದ ಮೊಘಲ್ ದೊರೆ ಯಾರು?

ಉತ್ತರ: 2ನೇ ಷಾ ಅಲಂ

8.ವಾರನ್ ಹೇಸ್ಟಿಂಗ್ಸ್ ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಹೊಂದಿರಬೇಕಾದ ಎರಡು ಬಗೆಯ ನ್ಯಾಯಾಲಯಗಳು ಯಾವುವು?

ಉತ್ತರ:ದಿವಾನಿ ಅದಾಲತ್, ಫೌಜಧಾರಿ ಅದಾಲತ್

9.ಪ್ರಥಮತಃ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದವನು ಯಾರು?

ಉತ್ತರ: ಕಾರ್ನ್ ವಾಲೀಸ್

10.ಸೂಪರಿಟೆಂಡೆಂಟ್ ಆಫ್ ಪೊಲೀಸ್(SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದವನು ಯಾರು?

ಉತ್ತರ:ಕಾರ್ನ್ ವಾಲೀಸ್

11.ಬ್ರಿಟಿಷ್ ಸೈನ್ಯದಲ್ಲಿ ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆ ಯಾವುದು?

ಉತ್ತರ: ಸುಬೇದಾರ್ ಸ್ಥಾನ

12.ಖಾಯಂ ಜಮೀನ್ದಾರಿ ಪದ್ಧತಿ ಎಂದರೇನು?

ಉತ್ತರ:ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಜಾರಿಗೆ ತಂದ ಹೊಸ ಕಂದಾಯ ಪದ್ಧತಿ.

13.ಭೂ ಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ. ಸಾಲದಲ್ಲೇ ಸತ್ತರು" ಎಂದವನು ಯಾರು?

ಉತ್ತರ:ಚಾರ್ಲ್ಸ್ ಮೆಟಕಾಫ್

14.ಮಹಲ್ವಾರಿ ಪದ್ಧತಿ ಎಂದರೇನು?

ಉತ್ತರ:ಪ್ರಾಂತ್ಯಗಳಲ್ಲಿ ಮಹಲ್ಲುಗಳೇ ಸಾಮೂಹಿಕ ಒಪ್ಪಂದಗಳನ್ನು ಮಾಡಿಕೊಂಡು ಸರ್ಕಾರಕ್ಕೆ ತೆರಿಗೆಯನ್ನು ಸಲ್ಲಿಸುವ ಪದ್ಧತಿ

15.ಮಹಲ್ವಾರಿ ಪದ್ಧತಿಯನ್ನು ಪ್ರಯೋಗಿಸಿದವರು ಯಾರು?

ಉತ್ತರ:ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

16.ಮಹಲ್ ಎಂದರೇನು?

ಉತ್ತರ:ತಾಲ್ಲೂಕು

17.ಮಹಲ್ವಾರಿ ಪದ್ಧತಿಯಿಂದ ಅನೇಕ ಜಮೀನ್ದಾರರು ತಮ್ಮ ಭೂ ಮಾಲೀಕತ್ವವನ್ನು ಕಳೆದುಕೊಂಡರು ಏಕೆ?

ಉತ್ತರ:ಕಂಪನಿ ಅಧಿಕಾರಿಗಳು ಜಮೀನಿನಲ್ಲಿ ಆಗುವ ಉತ್ಪಾದನೆಗಿಂತಲೂ ಹೆಚ್ಚಿನ ಮೊತ್ತದ ವಾರ್ಷಿಕ ಪಾವತಿಗಳನ್ನು ನಿರ್ಧರಿಸಿದ್ದರಿಂದ

18.ರೈತವಾರಿ ಪದ್ಧತಿಯನ್ನು ಬಾರಮಹಲ್ ಪ್ರಾಂತ್ಯದಲ್ಲಿ 1792ರಲ್ಲಿ ಜಾರಿಗೆ ತಂದವನು ಯಾರು?

ಉತ್ತರ:ಅಲೆಕ್ಸಾಂಡರ್ ರೀಡ್

19.ರೈತವಾರಿ ಪದ್ಧತಿಯನ್ನು ಮದ್ರಾಸ್ ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ ಜಾರಿಗೊಳಿಸಿದವನು ಯಾರು?

ಉತ್ತರ:ಥಾಮಸ್ ಮನ್ರೋ

20.ಬ್ರಿಟಿಷ್ ಸರ್ಕಾರ ಮತ್ತು ರೈತನ ನಡುವೆ ನೇರ ಸಂಪರ್ಕವನ್ನು ಕಲ್ಪಿಸಿದ ಕಂದಾಯ ಪದ್ಧತಿ ಯಾವುದು?

ಉತ್ತರ:ರೈತವಾರಿ ಪದ್ಧತಿ

21.ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ಯಾರು?

ಉತ್ತರ:ವಾರನ್ ಹೇಸ್ಟಿಂಗ್ಸ್

22.1781ರಲ್ಲಿ ಕಲ್ಕತ್ತಾದಲ್ಲಿ ಮದರಸವನ್ನು ಪ್ರಾರಂಭಿಸಿದವನು ಯಾರು?

ಉತ್ತರ:ವಾರನ್ ಹೇಸ್ಟಿಂಗ್ಸ್

23.1792ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದವನು ಯಾರು?

ಉತ್ತರ:ಜೊನಾಥನ್ ಡಂಕನ್

24.ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿ ಯಾವುದು?

ಉತ್ತರ:1835ರಲ್ಲಿ ಇಂಗ್ಲೀಷ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೆಕಾಲೆ ಕೊಟ್ಟ ವರದಿ

25.ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್ಗಳಲ್ಲಿ ನೂತನ ವಿಶ್ವವಿದ್ಯಾಲಯಗಳನ್ನು 1857ರಲ್ಲಿ ಸ್ಥಾಪಿಸಿದವನು ಯಾರು?

ಉತ್ತರ:ಲಾರ್ಡ್ ಡಾಲ್ ಹೌಸಿ

26.ಯಾವ ಕಾಯ್ದೆಯ ಮೇರೆಗೆ ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟ್‌ಅನ್ನು ಸ್ಥಾಪಿಸಲಾಯಿತು?

ಉತ್ತರ:1773ರ ರೆಗ್ಯುಲೇಟಿಂಗ್ ಕಾಯ್ದೆ.

27.ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸರಾಯ್" ಎಂಬ ಪದನಾಮವನ್ನು ನೀಡಿದ ಕಾಯ್ದೆ ಯಾವುದು?

ಉತ್ತರ:1858ರ ಭಾರತ ಸರ್ಕಾರ ಕಾಯ್ದೆ

28.ಬ್ರಿಟಿಷರು ಭಾರತೀಯರನ್ನು ಒಡೆದು ಆಳಲು ಯಾವ ಕಾಯ್ದೆಯನ್ನು ಬಳಸಿಕೊಂಡರು?

ಉತ್ತರ: 1909ರ ಭಾರತೀಯ ಪರಿಷತ್ ಕಾಯ್ದೆ

29.ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡಲು ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ತಂದ ಶಾಸನ ಯಾವುದು?

ಉತ್ತರ: 1909ರ ಭಾರತೀಯ ಪರಿಷತ್ ಕಾಯ್ದೆ/ಮಿಂಟೋ–ಮಾರ್ಲೆ ಸುಧಾರಣಾ ಕಾಯ್ದೆ

30.1919ರ ಭಾರತ ಸರ್ಕಾರ ಕಾಯ್ದೆಯನ್ನು ಏಕ ಜಾರಿಗೆ ತರಲಾಯಿತು?

ಉತ್ತರ:ಮೊದಲನೇ ಮಹಾಯುದ್ಧದ ಸಂದರ್ಭದಲ್ಲಿ ಭಾರತೀಯರನ್ನು ಯುದ್ಧದಲ್ಲಿ ಬ್ರಿಟಿಷರ ಪರವಾಗಿ ಭಾಗವಹಿಸಲು ಪ್ರೇರೇಪಿಸಿದ ಹಿನ್ನೆಲೆಯಲ್ಲಿ ಜಾರಿಗೆ ತರಲಾಯಿತು.

31.ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆಗೆ ಅವಕಾಶ ನೀಡಿದ ಕಾಯ್ದೆ ಯಾವುದು?

ಉತ್ತರ:1919ರ ಭಾರತ ಸರ್ಕಾರ ಕಾಯ್ದೆ/ಮಾಂಟೆಗೋ–ಚೆಮ್ಸ್ ಫರ್ಡ್ ಕಾಯ್ದೆ

32.ಪ್ರಾಂತ್ಯಗಳಲ್ಲಿ ದ್ವಿ ಸರ್ಕಾರ ಪದ್ಧತಿಗೆ ಅವಕಾಶ ನೀಡಿದ ಕಾಯ್ದೆ ಯಾವುದು?

ಉತ್ತರ: 1919ರ ಭಾರತ ಸರ್ಕಾರ ಕಾಯ್ದೆ/ಮಾಂಟೆಗೋ– ಚೆಮ್ಸ್‌ಫರ್ಡ್ ಕಾಯ್ದೆ

33.ಭಾರತಕ್ಕೆ ಒಬ್ಬ ಹೈಕಮಿಷನರ್‌ರನ್ನು ನೇಮಕ ಮಾಡಲು ಅವಕಾಶ ನೀಡಿದ ಕಾಯ್ದೆ ಯಾವುದು?

ಉತ್ತರ: 1919ರ ಭಾರತ ಸರ್ಕಾರ ಕಾಯ್ದೆ/ಮಾಂಟೆಗೋ–ಚೆಮ್ಸ್‌ಫರ್ಡ್ ಕಾಯ್ದೆ

34. ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಮುಸ್ಲಿಂ,ಸಿಖ್,ಆಂಗ್ಲೋ ಭಾರತೀಯರು ಮತ್ತು ಯುರೋಪಿಯನ್ನರಿಗೆ ವಿಸ್ತರಿಸಿದ ಕಾಯ್ದೆ ಯಾವುದು?

ಉತ್ತರ: 1919ರ ಭಾರತ ಸರ್ಕಾರ ಕಾಯ್ದೆ/ಮಾಂಟೆಗೋ–ಚೆಮ್ಸ್‌ಫರ್ಡ್ ಕಾಯ್ದೆ

35.ಯಾವ ಕಾಯ್ದೆಯು ಭಾರತದ ಸಂವಿಧಾನ ರಚನೆಗೆ ಬುನಾದಿಯಾಗಿದೆ?

ಉತ್ತರ:1935ರ ಭಾರತ ಸರ್ಕಾರ ಕಾಯ್ದೆ

36.ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿದ ಕಾಯ್ದೆ ಯಾವುದು?

ಉತ್ತರ: 1935ರ ಭಾರತ ಸರ್ಕಾರ ಕಾಯ್ದೆ

37.ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿದ ಕಾಯ್ದೆ ಯಾವುದು?

ಉತ್ತರ: 1935ರ ಭಾರತ ಸರ್ಕಾರ ಕಾಯ್ದೆ

38.ಭಾರತದಲ್ಲಿ ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ ನೀಡಿದ ಕಾಯ್ದೆ ಯಾವುದು?

ಉತ್ತರ: 1935ರ ಭಾರತ ಸರ್ಕಾರ ಕಾಯ್ದೆ

**ಮೂರು/ನಾಲ್ಕು ಅಂಕಗಳ ಪ್ರಶೋತ್ತರಗಳು (ಇವುಗಳಲ್ಲಿ ಒಂದು ಮತ್ತು ಎರಡು ಅಂಕದ ಪ್ರಶ್ನೆಗಳಿಗೂ ಉತ್ತರಗಳಿವೆ)**

**1. ಭಾರತದಲ್ಲಿ ಬ್ರಿಟಿಷರು ನಾಗರಿಕ ಸೇವಾ ವ್ಯವಸ್ಥೆಯಲ್ಲಿ ಜಾರಿಗೆ ತಂದಂತಹ ಸುಧಾರಣೆಗಳಾವುವು?**

- ಲಾರ್ಡ್ ಕಾರ್ನ್‌ವಾಲೀಸನು ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದನು.
- 1800 ರಲ್ಲಿ ನಾಗರಿಕ ಸೇವೆಗೆ ಸೇರ ಬಯಸುವವರಿಗೆ ಶಿಕ್ಷಣ ನೀಡಲು ಕಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ಸ್ಥಾಪಿಸಿದನು.
- ಆದರೆ ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರು ಇದಕ್ಕೆ ಬೆಂಬಲ ನೀಡಲಿಲ್ಲ.
- ಇದರ ಪರಿಣಾಮವಾಗಿ 1853ರವರೆಗೆ ನಾಗರಿಕ ಸೇವೆಯ ಎಲ್ಲಾ ನೇಮಕಾತಿಗಳನ್ನು ಕಂಪನಿಯ ನಿರ್ದೇಶಕರೇ ಮಾಡಿದರು.
- 1853ರ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂದು ತೀರ್ಮಾನವಾಯಿತು.
- ಇದರಿಂದ ಭಾರತೀಯರಿಗೆ ಹೆಚ್ಚಿನ ಪ್ರಯೋಜನವಾಗಲಿಲ್ಲ.
- ಬ್ರಿಟಿಷರು ಭಾರತೀಯರ ಸಾಮರ್ಥ್ಯವನ್ನು ಅನುಮಾನಿಸಿನೋಡಿದರು.
- ಕಾರ್ನ್‌ವಾಲೀಸನು "ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ ಎಂದು ಪ್ರತಿಪಾದಿಸಿದನು.
- ಇದರಿಂದಾಗಿ ಭಾರತೀಯರಿಗೆ ಕೆಳದರ್ಜೆಯ ಉದ್ಯೋಗಗಳನ್ನು ಮಾತ್ರ ನೀಡಲಾಯಿತು.

**2.ಈಸ್ಟ್ ಇಂಡಿಯಾ ಕಂಪನಿಯ ಮೂಲಕ ದೇಶದಲ್ಲಿ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿವರಿಸಿ.**

- 1772 ರಲ್ಲಿ ವಾರನ್ ಹೇಸ್ಟಿಂಗ್ಸ್ ಕಂಪನಿಯ ಗವರ್ನರ್ ಆಗಿ ಅಧಿಕಾರ ವಹಿಸಿಕೊಂಡನು.
- ಈತ ಹೊಸ ನ್ಯಾಯಾಂಗ ವ್ಯವಸ್ಥೆಯನ್ನು ಜಾರಿಗೆ ತಂದನು.
- ಇವನ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು.
- ಅವುಗಳೆಂದರೆ 1.ದಿವಾನಿ ಅದಾಲತ್ ನ್ಯಾಯಾಲಯ 2.ಫೌಜದಾರಿ ಅದಾಲತ್ ನ್ಯಾಯಾಲಯ.
- ದಿವಾನಿ ಅದಾಲತ್ ಎಂಬುದು ನಾಗರಿಕ ನ್ಯಾಯಾಲಯವಾಗಿತ್ತು. ಫೌಜದಾರಿ ಅದಾಲತ್ ಎಂಬುದು ಅಪರಾಧ ನ್ಯಾಯಾಲಯವಾಗಿತ್ತು.
- ನಾಗರಿಕ ನ್ಯಾಯಾಲಯದಲ್ಲಿ ಹಿಂದೂಗಳಿಗೆ ಹಿಂದೂ ಶಾಸ್ತ್ರಗ್ರಂಥಗಳ ಪ್ರಕಾರ ನ್ಯಾಯದಾನ ನೀಡಲಾಗುತ್ತಿತ್ತು.
- ಮುಸ್ಲಿಮರಿಗೆ ಷರಿಯತ್ ಕಾನೂನುಗಳ ಪ್ರಕಾರ ನ್ಯಾಯದಾನ ನೀಡಲಾಗುತ್ತಿತ್ತು.
- ಅಪರಾಧ ಪ್ರಕರಣಗಳು ಬಂದಾಗ ಎಲ್ಲರಿಗೂ ಇಸ್ಲಾಂ ಕಾನೂನುಗಳ ಪ್ರಕಾರ ವಿಚಾರಣೆ ನಡೆಸಲಾಗುತ್ತಿತ್ತು.
- ಕ್ರಮೇಣ ಬ್ರಿಟಿಷ್ ಕಾನೂನುಗಳನ್ನು ಜಾರಿಗೊಳಿಸಿ ಅಪರಾಧ ಕಾನೂನುಗಳಲ್ಲಿ ಬದಲಾವಣೆ ತರಲಾಯಿತು.
- ನಾಗರಿಕ ನ್ಯಾಯಾಲಯಗಳು ಯುರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.
- ಅಪರಾಧ ನ್ಯಾಯಾಲಯಗಳು ಖಾಜಿಗಳ ಅಧೀನದಲ್ಲ ಕಾರ್ಯನಿರ್ವಹಿಸುತ್ತಿದ್ದವು.
- ಆದರೂ ಇವು ಯುರೋಪಿಯನ್ನರ ಮೇಲ್ವಿಚಾರಣೆಯಲ್ಲೇ ಕಾರ್ಯನಿರ್ವಹಿಸಬೇಕಾಗಿತ್ತು.

**3.ಬ್ರಿಟಿಷರ ಕಾಲದಲ್ಲ ಪೊಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು? ಅಥವಾ ಬ್ರಿಟಿಷರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಗಳಾದವು" ಈ ಹೇಳಕೆಯನ್ನು ಸಮರ್ಥಿಸಿ.**

- ಲಾರ್ಡ್ ಕಾರ್ನ್‌ವಾಲೀಸ್‌ನು ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು.
- ಇವನು ಸೂಪರಿಡೆಂಟೆಂಟ್ ಆಫ್ ಪೊಲೀಸ್ ಅಥವಾ ಎಸ್.ಪಿ ಎಂಬ ಹೊಸ ಹುದ್ದೆಯನ್ನು ಸೃಷ್ಠಿಸಿದನು.
- 1793 ರಲ್ಲಿ ಪ್ರತಿ ಜಿಲ್ಲೆಯನ್ನು ಠಾಣೆಗಳಾಗಿ ವಿಭಜಿಸಿದನು.
- ಪ್ರತಿ ಠಾಣೆಯನ್ನು ಕೊತ್ವಾಲರ ಅಧೀನದಲ್ಲಿರುವಂತೆ ಮಾಡಿದನು
- ಹಳ್ಳಿಗಳು ಚೌಕಿದಾರರ ಅಧೀನದಲ್ಲಿರುವಂತೆ ಮಾಡಿದನು.
- ಕೊತ್ವಾಲರುಗಳು ಹಳ್ಳಗಳ ಮಟ್ಟದಲ್ಲಿ ಕಳ್ಳತನ, ಅಪರಾಧಗಳು, ದರೋಡೆಗಳ ನಿಯಂತ್ರಣದ ಜವಾಬ್ದಾರಿಯನ್ನು ಹೊತ್ತಿದ್ದರು.
- ನಂತರ ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೆ ಒಳಪಡಿಸಲಾಯಿತು.
- 1781 ರಲ್ಲ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೊಂಡಿತು.
- ಪೊಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ಗಳ ಅಧೀನಕ್ಕೆ ಒಳಪಟ್ಟರು.
- 1861 ರಲ್ಲಿ ಪೊಲೀಸ್ ಕಾಯ್ದೆಯನ್ನು ಜಾರಿಗೆ ತರಲಾಯಿತು.
- ಈ ಕಾಯ್ದೆ ಕಾನೂನು ಮತ್ತು ಸುವ್ಯಸ್ಥಿತ ಆಡಳಿತಕ್ಕೆ ಅಡಿಪಾಯವಾಯಿತು.
- ಆದರೆ ಅಧಿಕಾರಿಗಳ ನೇಮಕಾತಿಯಲ್ಲಿ ಭಾರತೀಯರಿಗೆ ಅವಕಾಶವಿರಲಿಲ್ಲ.
- 1902 ರ ಪೊಲೀಸ್ ಕಮಿಷನ್ ಕಾಯ್ದೆ ವಿದ್ಯಾರ್ಹತ ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶ.
- ಆದರೂ ಭಾರತೀಯರ ಬಗ್ಗೆ ಇದ್ದ ತಾರತಮ್ಯ ಕಡಿಮೆಯಾಗಲಿಲ್ಲ.

**4.ಬ್ರಿಟಿಷರ ಕಾಲದ ಸೈನಿಕ ವ್ಯವಸ್ಥೆಯನ್ನು ವಿವರಿಸಿ.**

- ಸೈನ್ಯವು ಆಧಾರಸ್ತಂಭವಾಗಿತ್ತು.
- ಭಾರತೀಯರನ್ನೇ ಸೈನ್ಯದಲ್ಲಿ ಸೇರಿಸಿಕೊಂಡರು.
- ಭಾರತವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು.
- ಭಾರತದ ಒಳಗಡೆ ತಮ್ಮ ವಿರೋಧಿ ಶಕ್ತಿಗಳಿಂದ ತಮ್ಮ ಸಾಮ್ರಾಜ್ಯವನ್ನು ರಕ್ಷಿಸಿಕೊಂಡರು.
- ವಿದೇಶಿ ಶಕ್ತಿಗಳಿಂದ ತಮ್ಮ ಸಾಮ್ರಾಜ್ಯವನ್ನು ರಕ್ಷಿಸಿಕೊಂಡರು.
- ಇವರ ಸೈನ್ಯದಲ್ಲದ ಅಧಿಕಾರಿಗಳು ಬ್ರಿಟಿಷರೇ ಆಗಿದ್ದರು.
- ಭಾರತೀಯರಿಗೆ ಸಿಗುತ್ತಿದ್ದ ಉನ್ನತ ಹುದ್ದೆಯೆಂದರೆ ಸುಭೇದಾರ್ ಸ್ಥಾನವಾಗಿತ್ತು.
- ಬಹುತೇಕ ಭಾರತೀಯ ಸೈನಿಕರು ಕೂಲಿ ಸೈನಿಕರಾಗಿದ್ದರು.
- 1857 ರ ಘಟನೆಯ ನಂತರ ಪೀಲ್ ರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಯಿತು.
- ಈ ಸಮಿತಿಯ ಶಿಫಾರಸ್ಸುಗಳನ್ನು ಬ್ರಿಟಿಷ್ ಸರ್ಕಾರ ಪಡೆಯಿತು.
- ಈ ಶಿಫಾರಸ್ಸುಗಳ ಆಧಾರದ ಮೇಲೆ ಸೈನಿಕ ವ್ಯವಸ್ಥೆಯನ್ನು ಮರುವಿನ್ಯಾಸಗೊಳಿಸಲಾಯಿತು.

**5.ಖಾಯಂ ಜಮೀನ್ದಾರಿ ಪದ್ಧತಿಯನ್ನು ವಿವರಿಸಿ. ಅಥವಾ ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು "ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ ಮಾಡಿತು" ಹೇಗೆ? ವಿಮರ್ಶಿಸಿ.**

- ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನ್‌ವಾಲೀಸನು 1793 ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು.
- ಇದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು.
- ಬ್ರಿಟಿಷರು ಹೊಸ ಜಮೀನ್ದಾರರ ವರ್ಗವನ್ನು ಸೃಷ್ಠಿಮಾಡಿದರು. ಇದರಲ್ಲಿ ಜಮೀನ್ದಾರನು ಭೂಮಾಲೀಕನಾದನು.
- ಇವನು ಪ್ರತಿವರ್ಷ ನಿರ್ದಿಷ್ಟ ದಿನಕ್ಕೆ ಮೊದಲೇ ಒಪ್ಪಿಕೊಂಡಿದ್ದ ಕಂದಾಯದ ಮೊತ್ತವನ್ನು ಸರ್ಕಾರಕ್ಕೆ ಸಲ್ಲಿಸಬೇಕಿತ್ತು.

- ಭೂಮಾಲೀಕನಿಗೆ ಈ ಪದ್ಧತಿಯಿಂದ ಹೆಚ್ಚಿನ ಲಾಭವಾಯಿತು.ಏಕೆಂದರೆ ಸರ್ಕಾರಕ್ಕೆ ಸಲ್ಲಿಸಬೇಕಾದ ಹಣಕ್ಕಿಂತ ಹೆಚ್ಚಿಗೆ ವಸೂಲಿ ಮಾಡಿದ ಹಣವನ್ನು ಅವನೇ ಇಟ್ಟುಕೊಳ್ಳಬಹುದಿತ್ತು.
- ಕಂದಾಯವನ್ನು ವಸೂಲಿ ಮಾಡಲು ಅಥವಾ ಸಲ್ಲಿಸಲು ಸಾಧ್ಯವಾಗದಿದ್ದರೆ ಬ್ರಿಟಿಷ್ ಸರ್ಕಾರ ಭೂಮಿಯ ಒಡೆತನವನ್ನು ಅವನಿಂದ ಕಸಿದುಕೊಳ್ಳುತ್ತಿತ್ತು.
- ಇದರಿಂದ ಬ್ರಿಟಿಷರಿಗೆ ಮತ್ತು ಜಮೀನ್ದಾರರಿಗೆ ಲಾಭವಾಯಿತೇ ಹೊರತು ರೈತರಿಗಾಗಲಿಲ್ಲ.
- ರೈತರು, ಕೂಲಿ ಕಾರ್ಮಿಕರು ಕೆಲಸ ಮಾಡಲು ನಿರಂತರ ಅವಕಾಶ ಸಿಗದೆ ಬಹುಮುಖಿ ಶೋಷಣೆಗೆ ಒಳಗಾದರು.
- ರೈತರು ಅತಂತ್ರ ಸ್ಥಿತಿಯಲ್ಲಿ ಬದುಕನ್ನು ಕಳೆಯತೊಡಗಿದರು.
- ಚಾರ್ಲ್ಸ್ ಮೆಟಕಾಫ್ ಹೇಳುವಂತೆ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು.

**6.ಬ್ರಿಟಿಷರ ಕಂದಾಯ ನೀತಿಯಿಂದ ಉಂಟಾದ ಪರಿಣಾಮಗಳಾವುವು? ಅಥವಾ ಬ್ರಿಟಿಷರ ಕಂದಾಯ ನೀತಿಯು ಭಾರತೀಯರನ್ನು ಸಂಪೂರ್ಣವಾಗಿ ಶೋಷಿಸಿತು ಹೇಗೆ?**

- ಹೊಸ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
- ರೈತರು ಜಮೀನ್ದಾರರ ಶೋಷಣೆಗೆ ಒಳಗಾದರು.
- ರೈತರು ವಿವಿಧ ಸಂಕಷ್ಟಗಳಿಗೆ ಒಳಗಾದರು.
- ರೈತರು ನಿರ್ಗತಿಕರಾದರು.
- ಭೂಮಿ ಮಾರಾಟದ ವಸ್ತುವಾಯಿತು.
- ಭೂಮಿಯನ್ನು ಪರಭಾರೆ/ಮಾರಾಟ ಮಾಡಿ ಹಣವನ್ನು ಸಾಲವಾಗಿ ಪಡೆಯಬಹುದಿತ್ತು.
- ಅನೇಕ ಜಮೀನ್ದಾರರೂ ಕೂಡ ಕಂದಾಯವನ್ನು ಸಲ್ಲಿಸುವ ಸಲುವಾಗಿ ತಮ್ಮ ಜಮೀನನ್ನು ಪರಭಾರೆ ಮಾಡಿದರು.
- ಕೃಷಿ ಕ್ಷೇತ್ರವು ವಾಣಿಜ್ಯೀಕರಣಗೊಂಡಿತು.
- ಇಂಗ್ಲೆಂಡಿನ ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
- ಹಣದ ಲೇವಾದೇವಿಗಾರರು ಬಲಿಷ್ಠರಾದರು.

**7.ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಸುಧಾರಣೆಗಳಾವುವು? ಅಥವಾ ಬ್ರಿಟಿಷರ ಆಡಳತ ಕಾಲದ ಆಧುನಿಕ ಶಿಕ್ಷಣ ಪದ್ಧತಿಯ ಬೆಳವಣಿಗೆಯನ್ನು ವಿವರಿಸಿ.**

- ಭಾರತದಲ್ಲಿದ್ದ ಐರೋಪ್ಯ ಮತ್ತು ಆಂಗ್ಲೋ-ಇಂಡಿಯನ್ ಸಮುದಾಯಗಳ ಮಕ್ಕಳಿಗೆ ಹೊಸ ಶಾಲೆಗಳು ಪ್ರಾರಂಭವಾದವು.
- ವಾರನ್ ಹೇಸ್ಟಿಂಗ್ಸ್ ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಮೊದಲು ಉತ್ತೇಜನ ಕೊಟ್ಟನು.
- ವಾರನ್ ಹೇಸ್ಟಿಂಗ್ 1781 ರಲ್ಲಿ ಕಲ್ಕತ್ತಾ ಮದರಸಾವನ್ನು ಪ್ರಾರಂಭಿಸಿದನು.
- ಜೊನಾಥನ್ ಡಂಕನ್ 1792 ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು.
- ಚಾರ್ಲ್ಸ್ ಗ್ರಾಂಟ್ ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದನು.
- ವಿಲಿಯಂ ಬೆಂಟಿಂಕ್ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಪ್ರೋತ್ಸಾಹ ನೀಡಿದನು.
- ವಿಲಿಯಂ ಬೆಂಟಿಂಕ್ ಗವರ್ನರ್ ಕಾರ್ಯಕಾರಿ ಸಭೆಗೆ ಮೆಕಾಲೆಯನ್ನು ಕಾನೂನು ಸದಸ್ಯನನ್ನಾಗಿ ನೇಮಕ ಮಾಡಿದನು.
- ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಮಿತಿಗೂ ಮೆಕಾಲೆಯನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡಲಾಯಿತು.
- 1835 ರಲ್ಲಿ ಮೆಕಾಲೆ ಇಂಗ್ಲೀಷ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ವರದಿ ಕೊಟ್ಟನು.
- ಮೆಕಾಲೆ ವರದಿ ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು.
- 1830 ರ ನಂತರ ಭಾರತದ ವಿದ್ಯಾಭ್ಯಾಸದ ಕ್ರಮದಲ್ಲಿ ಇಂಗ್ಲೀಷ್ ಭಾಷೆಯು ಮಾಧ್ಯಮವಾಗಿ ಬಳಕೆಯಾಗಲು ಪ್ರಾರಂಭವಾಯಿತು.
- ಚಾರ್ಲ್ಸ್ ವುಡ್ಸ್ನ ಆಯೋಗ ಶಿಫಾರಸ್ಸುಗಳನ್ನು ಮಾಡಿತು.
- ಲಾರ್ಡ್ ಡಾಲ್ ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್ಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು 1857 ರಲ್ಲಿ ಸ್ಥಾಪಿಸಿದನು.
- ನಂತರ ಶಿಕ್ಷಣ ಸಾರ್ವತ್ರೀಕರಣಗೊಳ್ಳತೊಡಗಿತು.

**8.ಭಾರತದಲ್ಲಿ ಬ್ರಿಟಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿಮಾಡಿ ಅಥವಾ "ಬ್ರಿಟಷ್ ಶಿಕ್ಷಣವು ಭಾರತದಲ್ಲಿ ಹೊಸ ತಲೆಮಾರನ್ನು ಸೃಷ್ಟಿಸಿತು" ಈ ಹೇಳಕೆಯನ್ನು ಸ್ಪಷ್ಟೀಕರಿಸಿ.**

- ಆಧುನಿಕತೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
- ಜಾತ್ಯತೀತತೆ ಬೆಳೆಸಿಕೊಳ್ಳಲು ಸಾಧ್ಯವಾಯಿತು.
- ಪ್ರಜಾಪ್ರಭುತ್ವವನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
- ವೈಜ್ಞಾನಿಕ ಆಲೋಚನಾ ಕ್ರಮಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
- ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲುಸಾಧ್ಯವಾಯಿತು.
- ಸ್ಥಳೀಯ ಭಾಷೆಗಳಗೆ ಪ್ರೋತ್ಸಾಹ ದೊರೆಯಿತು.
- ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು. 8.ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲ ಏಕತೆಯ ಸ್ವರೂಪ ಕಂಡುಬಂದಿತು.
- ವೃತ್ತ ಪತ್ರಿಕೆಗಳು ಹುಟ್ಟ ಬೆಳೆಯತೊಡಗಿದವು.
- ವೃತ್ತ ಪತ್ರಿಕೆಗಳಲ್ಲಿ ಬ್ರಿಟಿಷ್ ಸರ್ಕಾರದ ನೀತಿ ನಿಯಮಗಳನ್ನು ವಿಮರ್ಶಿಸಲಾಯಿತು.
- ಭಾರತೀಯರಲ್ಲಿ ಬ್ರಿಟಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಲು ಸಾಧ್ಯವಾಯಿತು.
- ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಗಳು ಹುಟ್ಟಕೊಂಡವು.

- ಜೆ.ಎಸ್.ಮಿಲ್, ರೂಸೋ, ಮಾಂಟೆಸ್ಕ್ಯೋ ರವರ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.
- ಜಗತ್ತಿನಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲಾಯಿತು.
- ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಯನ್ನು ಅರಿತುಕೊಳ್ಳಲು
- ಹೊಸ ಅಭಿರುಚಿ ಮತ್ತು ಆಲೋಚನೆಗಳ ಸೃಷ್ಟಿ
- ಹೊಸ ತಲೆಮಾರುಗಳ ಸೃಷ್ಟಿ

**9.ರೆಗ್ಯುಲೇಟಿಂಗ್ ಕಾಯ್ದೆಯು ಹೊಂದಿದ್ದ ನಿಬಂಧನೆಗಳು ಅಥವಾ ಲಕ್ಷಣಗಳಾವುವು? ಅಥವಾ ರೆಗ್ಯುಲೇಟಿಂಗ್ ಕಾಯ್ದೆಯು ಭಾರತದಲ್ಲಿನ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ ತರುವ ಬಹುದೊಡ್ಡ ನಿರ್ಣಯವಾಗಿತ್ತು ಹೇಗೆ?**

- ಬಂಗಾಳದ ಗವರ್ನರ್ ಮೂರು ಪ್ರೆಸಿಡೆನ್ಸಿಗಳ ಗವರ್ನರ್ ಜನರಲ್ ಆದನು.
- ಬಂಗಾಳದ ಪ್ರೆಸಿಡೆನ್ಸಿಯು ಮುಂಬೈ ಮತ್ತು ಮದ್ರಾಸ್ ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆದನು.
- ಗವರ್ನರ್ ಜನರಲ್‌ಗೆ ಮುಂಬೈ ಮತ್ತು ಮದ್ರಾಸ್ ಪ್ರೆಸಿಡೆನ್ಸಿಗಳಿಗೆ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರವನ್ನು ನೀಡಲಾಯಿತು.
- ಬಂಗಾಳ ಸರ್ಕಾರದ ಮತ್ತು ಇಂಗ್ಲೆಂಡಿನ ನಿರ್ದೇಶಕ ಮಂಡಳಿಯ ಪೂರ್ವಾನುಮತಿಯಿಲ್ಲದೆ ಬಾಂಬೆ ಮತ್ತು ಮದ್ರಾಸ್ ಸರ್ಕಾರಗಳು ಯಾರ ಮೇಲೂ ಯುದ್ಧ ಘೋಷಿಸುವಂತಿರಲಿಲ್ಲ.
- ಪೂರ್ವಾನುಮತಿಯಿಲ್ಲದೆ ಬಾಂಬೆ ಮತ್ತು ಮದ್ರಾಸ್ ಸರ್ಕಾರಗಳು ಶಾಂತಿ ಸಂಧಾನವನ್ನು ನಡೆಸುವಂತಿರಲಿಲ್ಲ,
- ತೀರ ತುರ್ತಾದ ಸಂದರ್ಭಗಳಲ್ಲಿ ಮಾತ್ರ ಇಂತಹ ನಿಬಂಧನೆಗಂದ ವಿನಾಯತಿ ಇತ್ತು.
- ಈ ಕಾಯ್ದೆ ಮೇರೆಗೆ ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಅನ್ನು ಸ್ಥಾಪಿಸಲಾಯಿತು.
- ಈ ನ್ಯಾಯಾಲಯದಲ್ಲಿ ಒಬ್ಬರು ಮುಖ್ಯ ನ್ಯಾಯಾಧೀಶರು ಮತ್ತು ಮೂರು ಜನ ಸಾಮಾನ್ಯ ನ್ಯಾಯಾಧೀಶರು ಕಾರ್ಯ ನಿರ್ವಹಿಸಬೇಕಿತ್ತು.

**10.1784 ರ ಪಿಟ್ಸ್ ಇಂಡಿಯಾ ಕಾಯ್ದೆಯ ಪ್ರಮುಖ ಅಂಶಗಳು ಯಾವುವು?**

- 1773 ರ ರೆಗ್ಯುಲೇಟಿಂಗ್ ಕಾಯ್ದೆಯ ಅನಿಶ್ಚಿತತೆಗಳನ್ನು ಹೋಗಲಾಡಿಸಿತು.
- ಬ್ರಿಟಿಷ್ ಸರ್ಕಾರ ಮತ್ತು ಕಂಪನಿ ಸರ್ಕಾರದ ಅಧಿಕಾರದ ಮಿತಿಗಳನ್ನು ಸ್ಪಷ್ಟಪಡಿಸಿತು.
- ಭಾರತದಲ್ಲಿ ಕಂಪನಿ ಸರ್ಕಾರವನ್ನು ನಿರ್ಣಾಯಕವಾಗಿ ನಿಯಂತ್ರಿಸಿತು.
- ನಿಯಂತ್ರಣ ಮಂಡ ಎಂಬ 6 ಜನ ಕಮಿಷನರ್‌ಗಳನ್ನು ಒಳಗೊಂಡ ಹೊಸ ಸಂಸ್ಥೆಯನ್ನು ಹುಟ್ಟುಹಾಕಲಾಯಿತು.
- ಈ ಮಂಡಳಿಯು ನಾಗರಿಕ, ಮಿಲಿಟರಿ ಕಂದಾಯದ ವಿಷಯಗಳಲ್ಲ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ಪಡೆಯಿತು.
- ಭಾರತೀಯರು ತಮ್ಮ ಸಾರ್ವಭೌಮತ್ವವನ್ನು ಬ್ರಿಟಿಷ್ ರಾಜಸತ್ತೆಯ ಹೆಸರಿನಲ್ಲಿ ಪಡೆದಿದ್ದಾರೆಯೇ ವಿನಃ ಅವರದೇ ಸ್ವಂತ ಹಕ್ಕಲ್ಲ ಎಂದು ಈ ಕಾಯ್ದೆ ಹೇಳಿತು.
- ಇದು ಭಾರತೀಯರ ರಾಜಕೀಯ ಹಕ್ಕುಗಳನ್ನು ಮೊಟಕುಗೊಳಿಸಿತು.
- ಇದು ಭಾರತದಲ್ಲದ ಕಂಪನಿಯ ಅಧೀನದ ಪ್ರದೇಶಗಳಿಗೆ ಇಂಗ್ಲೆಂಡಿನ ಸರ್ಕಾರವೇ ಅಂತಿಮ ಸಾರ್ವಭೌಮನೆಂದು ಘೋಷಿಸಿತು.

**11.1813 ರ ಚಾರ್ಟರ್ ಕಾಯ್ದೆಯ ಪ್ರಮುಖಾಂಶಗಳಾವುವು?**

- ಇದು ಈಸ್ಟ್ ಇಂಡಿಯಾ ಕಂಪನಿಗೆ ಮುಂದಿನ 20 ವರ್ಷಗಳು ಭಾರತದಲ್ಲಿರುವ ಅಧಿಕಾರವನ್ನು ನೀಡಿತು.
- ಭಾರತದಲ್ಲಿ ವ್ಯಾಪಾರ ಮಾಡುವ ಇಚ್ಛೆಯಿದ್ದವರಿಗೆಲ್ಲಾ ಮುಕ್ತ ಅವಕಾಶ ನೀಡಿತು.
- ಇದರಿಂದ ಮುಕ್ತ ವ್ಯಾಪಾರದ ಹೊಸ ಶಕೆ ಆರಂಭವಾಯಿತು.
- ಇದರಿಂದ ಅನುಮತಿ ಮತ್ತು ಪರವಾನಿಗೆಯ ಹೊಸ ಕಾಲ ಆರಂಭವಾಯಿತು.
- ಚರ್ಚ್‌ಗಳಿಗೆ ಭಾರತಕ್ಕೆ ಪ್ರವೇಶಿಸುವ ಅಧಿಕೃತ ಅವಕಾಶವನ್ನು ನೀಡಲಾಯಿತು.
- ಭಾರತೀಯರ ವಿದ್ಯಾಭ್ಯಾಸಕ್ಕೆ ವಾರ್ಷಿಕ ಒಂದು ಲಕ್ಷ ರೂಪಾಯಿಗಳನ್ನು ಮೀಸಲಿಡಲಾಯಿತು.
- ಭಾರತೀಯರಲ್ಲಿ ಹೊಸ ಜ್ಞಾನವನ್ನು ಪಸರಿಸುವ, ಅವರ ನೈತಿಕ ಮತ್ತು ಧಾರ್ಮಿಕ ಬದುಕನ್ನು ಎತ್ತರಿಸುವ ಜವಾಬ್ದಾರಿಯನ್ನು ಮಿಶನರಿ ಸಂಸ್ಥೆಗಳು ವಹಿಸಿಕೊಳ್ಳಬೇಕು ಎಂಬ ನಿರ್ದೇಶನವನ್ನು ನೀಡಲಾಯಿತು.
- ಇದರಿಂದ ಹೆಚ್ಚಿನ ಕ್ರೈಸ್ತ ಮಿಶನರಿಗಳು ಭಾರತಕ್ಕೆ ಬರತೊಡಗಿದರು.
- ಕ್ರೈಸ್ತ ಧರ್ಮದ ಪ್ರಚಾರ ಮತ್ತು ಇಂಗ್ಲೀಷ್ ವಿದ್ಯಾಭ್ಯಾಸದ ವಿಸ್ತರಣೆ ಹೆಚ್ಚಾಯಿತು.

**12.1833 ರ ಚಾರ್ಟರ್ ಕಾಯ್ದೆಯ ಪ್ರಮುಖಾಂಶಗಳು ಯಾವುವು?**

- ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಲಾಯಿತು.
- ಭಾರತದ ಎಲ್ಲಾ ವ್ಯಾಪಾರಿ ಸರಕುಗಳನ್ನು ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಚಾರಣೆ ನಡೆಸುವ ಅಧಿಕಾರವನ್ನು ಗವರ್ನರ್ ಜನರಲ್ ಪಡೆದನು.
- ದೇಶಿ ಸಂಸ್ಥಾನಗಳ ಜೊತೆಗೆ ಯುದ್ಧ, ಶಾಂತಿ ಮತ್ತು ರಾಜತಾಂತ್ರಿಕ ಸಂಬಂಧದ ಎಲ್ಲಾ ವಿಷಯಗಳನ್ನು ಬಂಗಾಳದ ಕೇಂದ್ರ ಸರ್ಕಾರವೇ ತೀರ್ಮಾನಿಸುವ ಹಕ್ಕನ್ನು ಹೊಂದಿತು.

- ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಯಲ್ಲಿ ಉಳಿದ ಸದಸ್ಯರ ಬಹುಮತದ ನಿರ್ಣಯವನ್ನು ತಿರಸ್ಕರಿಸಲು ಇದ್ದ ಕಾರಣಗಳನ್ನು ಅಖಿತ ರೂಪದಲ್ಲಿ ಸಲ್ಲಿಸಬೇಕಾಯಿತು.
- ಧರ್ಮ, ಬಣ್ಣ ಮತ್ತು ಹುಟ್ಟಿನ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲವೆಂದು ಇದು ನಿರ್ದೇಶಿಸಿತು.
- ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ನ್ಯಾಯಾಂಗ ಪರಿಣಿತನನ್ನು ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳಬೇಕಾಯಿತು.
- ಎಲ್ಲಾ ಬ್ರಿಟಿಷ್ ವ್ಯಾಪಾರಿ ಕಂಪನಿಗಳಗೆ ಭಾರತಕ್ಕೆ ಬರಲು ಮುಕ್ತ ಪರವಾನಿಗೆಯನ್ನು ನೀಡಲಾಯಿತು.

**13.1858 ರ ಭಾರತ ಸರ್ಕಾರ ಕಾಯ್ದೆಯ ಪ್ರಮುಖ ಅಂಶಗಳಾವುವು?**

- ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆಯನ್ನು ರದ್ದುಗೊಳಸಲಾಯಿತು.
- ಭಾರತವನ್ನು ಬ್ರಿಟನ್ ರಾಣಿಯ ಆಡಳತಕ್ಕೆ ವರ್ಗಾಯಿಸಲಾಯಿತು.
- ಬ್ರಿಟಿಷ್ ಭಾರತವು ಬ್ರಿಟಿಷ್ ಸರ್ಕಾರದ ನೇರ ಆಳ್ವಿಕೆಗೆ ಒಳಪಡುವಂತಾಯಿತು.
- ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ ವೈಸರಾಯ್ ಎಂಬ ಪದನಾಮವನ್ನು ನೀಡಲಾಯಿತು.
- ವೈಸರಾಯ್ ಆಗಿ ಲಾರ್ಡ್ ಕ್ಯಾನಿಂಗ್ ನೇಮಕಗೊಂಡರು.
- ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಸ್ಥಾನವನ್ನು ಸೃಷ್ಠಿಸಿತು.
- ಇವರು ಬ್ರಿಟಿಷ್ ಮಂತ್ರಿಮಂಡಲದ ಸದಸ್ಯರಾದರು.
- ಇವರು ಭಾರತದ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದರು.
- ಭಾರತ ಮಂಡಳ ಅಸ್ತಿತ್ವಕ್ಕೆ ಬಂದಿತು.
- 1858 ರಲ್ಲಿ ಬ್ರಿಟನ್ ರಾಣಿಯು ಭಾರತೀಯರಿಗೆ ಹಲವು ಕೊಡುಗೆಗಳಲನ್ನು ಘೋಷಣೆ ಮಾಡಿದಳು.

**14.1909 ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳಾವುವು? ಅಥವಾ** "ಮಿಂಟೋ–ಮಾರ್ಲೆ ಸುಧಾರಣೆಗಳನ್ನು ವಿವರಿಸಿ.

- ಮಿಂಟೋ–ಮಾರ್ಲೆ ಸುಧಾರಣೆಗಳು ಎಂದು ಈ ಕಾಯ್ದೆಯನ್ನು ಎಂತಲೂ ಕರೆಯುತ್ತಾರೆ.
- ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 16–60ಕ್ಕೆ ಹೆಚ್ಚಿಸಲಾಯಿತು.
- ಪ್ರಾಂತ್ಯಗಳಲ್ಲೂ ಶಾಸನ ಸಭೆಗಳ ಸದಸ್ಯರ ಸ್ಥಾನಗಳನ್ನು ಹೆಚ್ಚಿಸಲಾಯಿತು.
- ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಅವಕಾಶ ನೀಡಲಾಯಿತು.
- ಮುಸ್ಲಿಂರಿಗೆ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.
- ಬ್ರಿಟಿಷರು ಭಾರತೀಯರನ್ನು ಒಡೆದು ಆಳಲು ಈ ಕಾಯ್ದೆಯನ್ನು ಬಳಸಿಕೊಂಡರು.

**15.1919 ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖಾಂಶಗಳು ಯಾವುವು? ಅಥವಾ ಮೊಂಟೆಗೊ– ಚೇಮ್ಸ್ ಫರ್ಡ್ ಸುಧಾರಣೆಗಳನ್ನು ವಿಶ್ಲೇಷಿಸಿ.**

- ಕೇಂದ್ರದಲ್ಲಿ ದ್ವಿ–ಸದನ ಶಾಸಕಾಂಗ ರಚನೆಗೆ ಅವಕಾಶ ಕಲ್ಪಿಸಲಾಯಿತು.
- ಶಾಸಕಾಂಗ ಸಭೆ(ಕೆಳಮನೆ) ಮತ್ತು ರಾಜ್ಯ ಪರಿಷತ್ತು(ಮೇಲ್ಮನೆ) ರಚಿಸಲಾಯಿತು.
- ಪ್ರಾಂತ್ಯಗಳಲ್ಲಿ ದ್ವಿ–ಸರ್ಕಾರ ಪದ್ಧತಿಗೆ ಅವಕಾಶ ಕಲ್ಪಿಸಲಾಯಿತು.
- ಭಾರತಕ್ಕೆ ಒಬ್ಬ ಹೈಕಮಿಷನರ್‌ನ್ನು ನೇಮಕ ಮಾಡಲಾಯಿತು.
- ಸ್ವಯಂ ಆಡಳತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ ನೀಡಲಾಯಿತು.
- ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟನ್ನು ಬೇರ್ಪಡಿಸಲಾಯಿತು.
- ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಮುಸ್ಲಿಂ, ಸಿಖ್, ಆಂಗ್ಲೋ–ಇಂಡಿಯನ್ ಮತ್ತು ಯುರೋಪಿಯನ್ನರಿಗೆ ವಿಸ್ತರಿಸಲಾಯಿತು.

**16.1935 ರ ಭಾರತ ಸರ್ಕಾರ ಕಾಯ್ದೆಯ ಪ್ರಮುಖಾಂಶಗಳಾವುವು? ಅಥವಾ 1935 ರ ಭಾರತ ಸರ್ಕಾರ ಕಾಯ್ದೆ ಭಾರತ ಸಂವಿಧಾನದ ಬುನಾದಿ" ಎಂಬುದನ್ನು ಸಮರ್ಥಿಸಿ.**

- ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.
- ಕೇಂದ್ರದಲ್ಲಿ ದ್ವಿ–ಸರ್ಕಾರವನ್ನು ರಚಿಸಲು ಅವಕಾಶ ನೀಡಿತು.
- ಪ್ರಾಂತ್ಯಗಳಲ್ಲಿ ದ್ವಿ–ಸರ್ಕಾರ ಪದ್ಧತಿಯನ್ನು ರದ್ದುಗೊಳಿಸಲಾಯಿತು.
- ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.
- ಭಾರತದಲ್ಲಿ ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ ನೀಡಿತು.
- ಭಾರತ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ.
- ಇದು ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು.

# ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು.

**I.ಒಂದು ಅಂಕದ ಪ್ರಶ್ನೆಗಳು.**

**1. 19ನೇ ಶತಮಾನವನ್ನು ಯಾವ ಹೆಸರಿನಿಂದ ಕರೆಯುವರು?**

ಉತ್ತರ : ಭಾರತೀಯ ನವೋದಯದ ಕಾಲ

**2. ಬ್ರಹ್ಮ ಸಮಾಜವನ್ನು ಯಾರು ಸ್ಥಾಪಿಸಿದರು?**

ಉತ್ತರ : ರಾಜಾರಾಮ ಮೋಹನ್‌ರಾಯ

**3. ಆರ್ಯ ಸಮಾಜದ ಸ್ಥಾಪಕರು ಯಾರು?**

ಉತ್ತರ : ದಯಾನಂದ ಸರಸ್ವತಿ

**4. ದಯಾನಂದ ಸರಸ್ವತಿಯವರು ಬರೆದ ಪುಸ್ತಕ ಯಾವುದು?**

ಉತ್ತರ : ಸತ್ಯಾರ್ಥ ಪ್ರಕಾಶ

**5. "ವೇದಗಳಿಗೆ ಮರಳಿ" ಇದು ಯಾರು ಘೋಷಣೆ?**

ಉತ್ತರ : ದಯಾನಂದ ಸರಸ್ವತಿ

**6. ಶುದ್ದಿ ಚಳುವಳಿ ಎಂದರೇನು?**

ಉತ್ತರ: ಹಿಂದೂ ಧರ್ಮದಿಂದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರ ಗೊಂಡವರನ್ನು ಮರಳಿ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವುದು.

**7. ಗೋ ರಕ್ಷಣಾ ಸಂಘವನ್ನು ಸ್ಥಾಪಿಸಿದವರು ಯಾರು?**

ಉತ್ತರ: ಆರ್ಯಸಮಾಜ

**8. ಸತ್ಯ ಶೋಧಕ ಸಮಾಜದ ಸ್ಥಾಪಕರು ಯಾರು?**

ಉತ್ತರ: ಜ್ಯೋತಿಭಾ ಫುಲೆ

**9. ಗುಲಾಮಗಿರಿ' ಎಂಬ ಗ್ರಂಥವನ್ನು ಯಾರು ರಚಿಸಿದರು?**

ಉತ್ತರ: ಜ್ಯೋತಿಭಾ ಫುಲೆ

**10. ಅಲಿಘರ್ ಸುಧಾರಣಾ ಚಳುವಳಿಯನ್ನು ಯಾರು ಆರಂಭಿಸಿದರು?**

ಉತ್ತರ: ಸರ್ ಸಯ್ಯದ್ ಅಹಮದ್ ಖಾನ್

**11. ಆಂಗ್ಲೋ ಓರಿಯೆಂಟಲ್ ಕಾಲೇಜಿನ ಈಗಿನ ಹಸರೇನು?**

ಉತ್ತರ: ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ

**12. ರಾಮಕೃಷ್ಣ ಮಿಷನ್ ಸ್ಥಾಪಕ ಯಾರು?**

ಉತ್ತರ: ಸ್ವಾಮಿ ವಿವೇಕಾನಂದರು

**13. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ ಎಲ್ಲ ಮತ್ತು ಯಾವಾಗ ಸ್ಥಾಪಿಸಿದರು?**

ಉತ್ತರ: ಕಲ್ಕತ್ತಾ ಬಳಿಯ ಬೇಲೂರು 1897ರಲ್ಲಿ ಸ್ಥಾಪನೆ.

**14. ವಿಶ್ವ ಧಾರ್ಮಿಕ ಸಮ್ಮೇಳನ ಎಲ್ಲ ನಡೆಯಿತು?**

ಉತ್ತರ:ಅಮೇರಿಕಾದ ಚಿಕಾಗೋ

**15. ಥಿಯೋಸಾಫಿಕಲ್ ಸೊಸೈಟಿಯನ್ನು ಯಾರು ಪ್ರಾರಂಭಿಸಿದರು?**

**ಉತ್ತರ: ಮೇಡಂ ಬ್ಲವಾಟ್ಸ್ಕಿ ಮತ್ತು ಕರ್ನಲ್** ಎಚ್.ಎಸ್.ಅಲ್ಕಾಟ್

**16. ಥಿಯೋಸಾಫಿಕಲ್ ಸೊಸೈಟಿಯ ಕೇಂದ್ರ ಕಛೇರಿ ಎಲ್ಲದೆ?**

ಉತ್ತರ: ಅಡ್ಯಾರ್‌ನಲ್ಲದೆ.

**17. "ಶ್ವೇತ ಸರಸ್ವತಿ' ಎಂದು ಅನಿಬೆಸೆಂಟ್ ಅವರನ್ನು ಏಕೆ ಕರೆಯುವರು?**

ಉತ್ತರ: ಭಗವದ್ಗೀತೆಯನ್ನು ಇಂಗ್ಲೀಷಿಗೆ ಅನುವಾದ ಮಾಡಿದ್ದರಿಂದ ಕರೆಯುವರು,

**18. 'ನ್ಯೂ ಇಂಡಿಯಾ' ಮತ್ತು 'ಕಾಮನ್ ವೀಲ್' ಪತ್ರಿಕೆ ಯಾರು ಹೊರಡಿಸಿದರು?**

ಉತ್ತರ: ಅನಿಬೆಸೆಂಟ್

**19. ಹೋಂ ರೂಲ್ ಲಿಗನ್ನು ಪ್ರಾರಂಭಿಸದವರು ಯಾರು?**

ಉತ್ತರ: ಅನಿಬೆಸೆಂಟ್

**20. ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂದು ಯಾರು ಪ್ರತಿಪಾದಿಸಿದರು?**

ಉತ್ತರ : ಶ್ರೀ ನಾರಾಯಣ ಗುರು

**II. ಎರಡು, ಮೂರು ಅಥವಾ ನಾಲ್ಕು ಅಂಕದ ಪ್ರಶ್ನೆಗಳು.**

**1.19ನೇ ಶತಮಾನವನ್ನು ಭಾರತದ ಸಮಾಜ ಸುಧಾರಣೆ ಕಾಲ/ನವೋದಯ ಕಾಲ ಏಕೆ?**

- 19ನೇ ಶತಮಾನ ನವೋದಯ ಕಾಲವಾಗಿದೆ
- ಇಂಗ್ಲಿಷ್ ಶಿಕ್ಷಣ ಜಾರಿ.
- ಭಾರತೀಯ ವಿದ್ಯಾವಂತ ವರ್ಗ ಸೃಷ್ಟಿ.
- ಪ್ರಜಾಪ್ರಭುತ್ವ, ರಾಷ್ಟ್ರೀಯತೆ, ಸಮಾನತೆ ಪರಿಕಲ್ಪನೆ ಪರಿಚಯ.
- ಭಾರತೀಯರಿಂದ ತಮ್ಮ ಸಮಾಜ ವಿಶ್ಲೇಷಣೆ.
- ಸಮಾಜ ಸುಧಾರಕರ ಪ್ರಭಾವ.
- ಸಾಮಾಜಿಕ ಪಿಡುಗು ತೊಲಗಿಸುವ ಪ್ರಯತ್ನ.

**2.ಬ್ರಹ್ಮಸಮಾಜದ ಸುಧಾರಣಾ ಕ್ರಮಗಳಾವುವು?/ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳಿಗೆ ರಾಜಾರಾಮ ಮೋಹನರಾಯರ ಕೊಡುಗೆಗಳಾವುವು?**

- ಏಕದೇವತಾರಾಧನೆ.
- ಅರ್ಥಹೀನ ಆಚರಣೆಗೆ ವಿರೋಧ.
- ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ.
- ಬಹುಪತ್ನಿತ್ವಕ್ಕೆ ವಿರೋಧ.
- ಸ್ತ್ರೀ ಸಮಾನತೆ.
- ವಿಧವೆಯರಿಗೆ ಆಸ್ತಿಯಲ್ಲಿ ಪಾಲು.
- ಬಾಲ್ಯವಿವಾಹ ನಿಷೇಧ
- ಇಂಗ್ಲಿಷ್ ಶಿಕ್ಷಣಕ್ಕೆ ಒತ್ತು.
- ಶೋಷಣೆಗೆ ತಡೆ

**3.ದಯಾನಂದ ಸರಸ್ವತಿಯವರ ಬೋಧನೆಗಳಾವುವು? ಆರ್ಯಸಮಾಜದ ಉದ್ದೇಶಗಳೇನು?**

- ಒಬ್ಬನೇ ದೇವರಲ್ಲಿ ನಂಬಿಕೆ.
- ಜಾತಿ ಪದ್ಧತಿಗೆ ತಿರಸ್ಕಾರ
- ಅಂತರ್ಜಾತೀಯ ವಿವಾಹಕ್ಕೆ ಪ್ರೋತ್ಸಾಹ
- ಬಹುಪತ್ನಿತ್ವಕ್ಕೆ ವಿರೋಧ.
- ಬಾಲ್ಯ ವಿವಾಹಕ್ಕೆ ತಡೆ.
- ಮಹಿಳೆಯರ ಸಮಾನತೆಗೆ ಬೆಂಬಲ.
- ವೇದಗಳು ಮಾತ್ರ ಶ್ರೇಷ್ಟ.
- ವೇದಗಳಿಗೆ ಹಿಂದಿರುಗಿ ಎಂದು ಘೋಷಣೆ.

**4.ಪ್ರಾರ್ಥನಾ ಸಮಾಜದ ಸುಧಾರಣೆಗಳಾವುವು? ಆತ್ಮಾರಾಂಪಾಂಡುರಂ ರವರು ಮಹಿಳಾ ಸಬಲೀಕರಣಕ್ಕೆ ಹೇಗೆ ಪ್ರಯತ್ನಿಸಿದರು?**

- ಮಹಿಳಾ ಸಬಲೀಕರಣಕ್ಕೆ ಯತ್ನ.
- ಶೂದ್ರರ ಸಮಸ್ಯೆಗೆ ಪರಿಹಾರ.
- ಸ್ತ್ರೀಯರ ಶಿಕ್ಷಣಕ್ಕೆ ಒಲವು.
- ನಿರ್ಹತಿಕರಿಗೆ ಆಸರೆ.
- ಬಾಲ್ಯ ವಿವಾಹಕ್ಕೆ ತಡೆ.
- ವಿಧವೆಯರ ಏಳಿಗೆಗೆ ಪ್ರೋತ್ಸಹ.
- ವಿಧವಾ ಪುನರ್ ವಿವಾಹಕ್ಕೆ ಒತ್ತಾಯ.

**5. ಭಾರತೀಯ ಸಮಾಜದ ಸುಧಾರಣೆಗೆ ಸತ್ಯ ಶೋಧಕ ಸಮಾಜ ಹೇಗೆ ಶ್ರಮಿಸಿತು? ಅಥವಾ ಮಹಾತ್ಮಾ ಜ್ಯೋತಿಬಾ ಫುಲೆಯವರ ಸುಧಾರಣೆಗಳಾವುವು?**

- ಸ್ತ್ರೀ ಸಮಾನತೆ.
- ಜಾತಿ ಪದ್ಧತಿಗೆ ವಿರೋಧ.
- ಲಿಂಗ ತಾರತಮ್ಯ ತಡೆ.
- ಶೂದ್ರರು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ.
- ಶೂದ್ರ ಹೆಣ್ಣುಮಕ್ಕಳಿಗೆ ಪುಣೆಯಲ್ಲಿ ಶಾಲೆ ಆರಂಭ.
- ವಿದ್ಯಾರ್ಥಿನಿಯರಿಗೆ ವಸತಿ ನಿಲಯ ಆರಂಭ.
- ಅಸ್ಪೃಶ್ಯತೆ ಆಚರಣೆಗೆ ವಿರೋಧ.
- ಶೋಷಣೆಗೆ ತಡೆ.
- ಸಮಾನತೆಯ ಸಮಾಜ ನಿರ್ಮಾಣ.
- ರೈತರ ಶೋಷಣೆಗೆ ವಿರೋಧ

**6. ಅಲಿಘರ್ ಚಳುವಳಿಯ ಸುಧಾರಣಾ ಕ್ರಮಗಳಾವುವು? ಸರ್ ಸಯ್ಯದ ಅಹಮದ್ ಖಾನ್‌ರ ಬೋಧನೆಗಳನ್ನು ಪಟ್ಟಿ ಮಾಡಿರಿ.**

- ಮೂಢನಂಬಿಕೆ ತಿರಸ್ಕಾರ.
- ಪರದಾಪದ್ಧತಿಗೆ ವಿರೋಧ.
- ಬಹುಪತ್ನಿತ್ವಕ್ಕೆ ತಡೆ.
- ಸ್ತ್ರೀ ಶಿಕ್ಷಣಕ್ಕೆ ಒತ್ತು.
- ಧಾರ್ಮಿಕ ಐಕ್ಯತೆಗೆ ಬೆಂಬಲ.
- ಮೂಢ ಸಂಪ್ರದಾಯಗಳಿಗೆ ವಿರೋಧ.
- ಅಜ್ಞಾನಕ್ಕೆ ವಿರೋಧ.

**7. ರಾಮಕೃಷ್ಣ ಮಿಷನ್‌ನ ದೃಷ್ಟಿಕೋನವನ್ನು ವಿವರಿಸಿರಿ.**

- ಆಧುನಿಕ ಭಾರತದ ಆಧ್ಯಾತ್ಮಿಕ ಏಳಿಗೆ.
- ರಾಷ್ಟ್ರೀಯತೆಯ ಎಚ್ಚರ & ಸಾಂಸ್ಕೃತಿಕ ಬೆಳವಣಿಗೆ.
- ಪರಮಹಂಸರ ಚಿಂತನೆ, ಆಶಯಗಳು ಜನರಿಗೆ ತಿಳಿಸುವುದು.
- ಮುಕ್ತಿಗೆ ಭಕ್ತಿ, ಸನ್ಯಾಸ, ಧ್ಯಾನ ಅವಶ್ಯಕ.
- ದೇವರು, ಮುಕ್ತಿ ತಲುಪಲು ಹಲವು ಮಾರ್ಗವೆಂದು ನಂಬಿಕೆ
- ಮೂರ್ತಿಪೂಜೆ ಅವಶ್ಯಕತೆ ಸಾರಿದರು.

**8. ಸ್ವಾಮಿ ವಿವೇಕಾನಂದರು ಯುವ ಜನರ ಪ್ರೇರಕರಾಗಿದ್ದರು. ಹೇಗೆ?**

- ಭಾರತದ ಸಂಸ್ಕೃತಿ, ಹಿಲರಿಮೆ ಜಗತ್ತಿಗೆ ಪರಿಚಯಿಸಿದರು.
- ಶಾಸನ ರೂಪಿಸುವ ಸಂಸ್ಥೆಗಳ ರಚನೆಗೆ ಒತ್ತಾಯ.
- ಇವರ ಭಾಷಣಗಳು ರಾಷ್ಟ್ರೀಯತೆಯ ಆಲೋಚನೆಗೆ ಹಿಡಿದ ಕೈಗನ್ನಡಿ.
- ಜನರನ್ನು ವಿದ್ಯಾವಂತರನ್ನಾಗಿಸಿದರೇ ಅವರೇ ಸುಧಾರಣೆ ಬಯಸುವರು.
- ಕತ್ತಲೆಯಲ್ಲಿರುವವರಿಗೆ ಬೆಳಕು ನೀಡುವುದು.
- ಸರ್ವಧರ್ಮ ಸಹಿಷ್ಣುತಾ ಮನೋಭಾವ ಬೆಳೆಸಿದರು.
- ಇವರ ಚಿಂತನೆಗಳು ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಯಾದವು.

**09. ಅನಿಬೆಸೆಂಟ್‌ರ ಸುಧಾರಣಾ ಕ್ರಮಗಳಾವುವು? ಅಥವಾ ಭಾರತೀಯ ಸಮಾಜಕ್ಕೆ ಅನಿಬೆಸೆಂಟರ ಕೊಡುಗೆಗಳಾವುವು?**

- ಥಿಯಾಸಾಫಿಕಲ್ ಸೊಸೈಟಿಯನ್ನು ಭಾರತದಲ್ಲಿ ಹೆಚ್ಚು ಪ್ರಚಾರ ಪಡಿಸಿದರು.
- ಭಗವದ್ಗೀತೆ ಇಂಗ್ಲಿಷ್‌ಗೆ ಅನುವಾದ.
- ಎಲ್ಲ ವರ್ಗಗಳ ಶಿಕ್ಷಣಕ್ಕೆ ಒತ್ತಾಯ.
- ಬನಾರಸ್ ಹಿಂದೂ ಕಾಲೇಜ್ ಸ್ಥಾಪನೆ.
- ನ್ಯೂ ಇಂಡಿಯಾ, ಕಾಮನ್‌ವೀಲ್ ಪತ್ರಿಕೆ ಪ್ರಾರಂಭ.
- ಹೋಂರೂಲ್ ಚಳುವಳಿ ಆರಂಭ.
- ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯ ಭಾಗಿಯಾದರು.
- ಕಾಂಗ್ರೆಸ್ ಅಧಿವೇಶನದ ಮೊದಲ ಮಹಿಳಾ ಅಧ್ಯಕ್ಷೆಯಾಗಿದ್ದರು.

**10. ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂನ ಕೊಡುಗೆ ವಿವರಿಸಿರಿ**

- ಮನುಷ್ಯ ಘನತೆಯಿಂದ ಬಾಳುವ ಸಮಾಜ ನಿರ್ಮಾಣಕ್ಕೆ ಯತ್ನ.
- ಎಲ್ಲರಿಗೂ ಒಂದೇ ಜಾತಿ, ಒಂದೇ ಧರ್ಮ, ಒಬ್ಬನೆ ದೇವರೆಂದು ಘೋಷಣೆ.
- ಸರ್ವರಿಗೂ ಶಿಕ್ಷಣ.
- ವೈಕಂ ದೇವಾಲಯ ಪ್ರವೇಶ ಚಳುವಳಿ ಮಾಡಿದರು.
- ಪರ್ಯಾಯ ದೇವಾಲಯಗಳ ನಿರ್ಮಾಣ.
- ಗುರುವಾಯೂರು ದೇವಾಲಯ ಪ್ರವೇಶ ಚಳುವಳಿ.

# ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

**ಒಂದು ಅಂಕದ ಪ್ರಶ್ನೆಗಳು**

**1. 1857ರಲ್ಲಿ ಬ್ರಿಟಿಷರ ವಿರುದ್ಧ ನಡೆದ ದಂಗೆಯನ್ನು ಭಾರತೀಯ ಇತಿಹಾಸಕಾರರು ಏನೆಂದು ಕರೆದರು?**

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

**2. 1857ರಲ್ಲಿ ಬ್ರಿಟಿಷರ ವಿರುದ್ಧ ನಡೆದ ದಂಗೆಯನ್ನು ಬ್ರಿಟಿಷ್ ಇತಿಹಾಸಕಾರರು ಏನೆಂದು ಕರೆದರು?**

ಸಿಪಾಯಿ ದಂಗೆ

**3. ಕೈಗಾರಿಕಾ ಕ್ರಾಂತಿಯು ಯಾವ ದೇಶದಲ್ಲಿ ಆಯಿತು?**

ಇಂಗ್ಲಂಡ

**4. ಇನಾಂ ಭೂಮಿಯನ್ನು ವಾಪಸ್ಸು ಪಡೆದಿದ್ದರ ಪರಿಣಾಮವೇನಾಯಿತು?**

ಕೃಷಿಕರು ತೀವ್ರವಾಗಿ ಅವಮಾನ ಮತ್ತು ಆರ್ಥಿಕ ಸಂಕಷ್ಟ ಅನುಭವಿಸಿದರು

**5. ಬ್ರಿಟಿಷರು ಸೈನಿಕರಿಗೆ ಪರಿಚಯಿಸಿದ ನವೀನ ಮಾದರಿ ಬಂದೂಕು ಯಾವುದಾಗಿತ್ತು?**

ರಾಯಲ್ ಎನಫೀಲ್ಡ್

**6. 1857ರ ದಂಗೆಗೆ ತಕ್ಷಣದ ಕಾರಣವೇನು?**

ಬಂದೂಕಿಗೆ ಉಪಯೋಗಿಸುತ್ತಿದ್ದ ತಿಪಾಕಿಗೆ ಹಸು ಮತ್ತು ಹಂದಿಯ ಕೊಬ್ಬನ್ನು ಸವರಿದ್ದು

**7. ಬ್ಯಾರಕಪುರದಲ್ಲಿ ಬ್ರಿಟಿಷ್ ಸೈನ್ಯದ ಅಧಿಕಾರಿಯನ್ನು ಕೊಂದ ಸೈನಿಕ ಯಾರು?**

ಮಂಗಲ ಪಾಂಡೆ

**8. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಬೀಜಾಂಕುರಕ್ಕೆ ನಾಂದಿಯಾದದ್ದು ಎಲ್ಲಿ?**

ಮೀರತ್

**9. ಕಾನ್ಪುರದಲ್ಲಿ ದಂಗೆಯ ನಾಯಕತ್ವವನ್ನು ವಹಿಸಿದ್ದವರು ಯಾರು?**

ನಾನಾ ಸಾಹೇಬ

**10. ಝಾನ್ಸಿಯಲ್ಲಿ ದಂಗೆಯ ನಾಯಕತ್ವವನ್ನು ವಹಿಸಿದ್ದವರು ಯಾರು?**

ರಾಣಿ ಲಕ್ಷ್ಮೀಬಾಯಿ

**11. ಝಾನ್ಸಿರಾಣಿ ಲಕ್ಷ್ಮೀಬಾಯಿ ಇಂಗ್ಲೀಷರ ಮೇಲೆ ಯುದ್ಧ ಮಾಡಿ ವಶಕ್ಕೆ ಪಡೆದ ಪ್ರದೇಶ ಯಾವುದು?**

ಗ್ವಾಲಿಯರ

**12. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೆಮ್ಮೆಯ ಸ್ಥಾನ ಹೊಂದಿದವರು ಯಾರು?**

ರಾಣಿ ಲಕ್ಷ್ಮೀಬಾಯಿ

**13. ಬ್ರಿಟನ್ ರಾಣಿಯು ಘೋಷಣೆಯನ್ನು ಹೊರಡಿಸಿದ್ದು ಯಾವಾಗ?**

1858(ಮಹಾಸನ್ನದು)

**14. ಡಾಲಹೌಸಿ ಜಾರಿಗೆ ತಂದ ನೀತಿ ಯಾವುದು?**

ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

**1 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ರಾಜಕೀಯ ಅಂಶಗಳನ್ನು ವಿಶ್ಲೇಷಿಸಿರಿ.**

- ಬ್ರಿಟಿಷ್‌ರು ದತ್ತು ಪುತ್ರರಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೆ ತಂದಿದ್ದರು
- ಹಲವು ದೇಶೀಯ ಸಂಸ್ಥಾನಗಳು ತಮ್ಮ ಅಸ್ಥಿತ್ವ ಕಳೆದುಕೊಂಡವು.
- ಸತಾರ, ಜೈಪುರ, ಝಾನ್ಸಿ, ಉದಯಪುರಗಳಂತಹ ಸಂಸ್ಥಾನಗಳು ಬ್ರಿಟಿಷರ ವಶವಾದವು.
- ಡಾಲ್ ಹೌಸಿಯು ತಂಜಾವುರು ಮತ್ತು ಕರ್ನಾಟಿಕ್ ನವಾಬರ ರಾಜ ಪದವಿಗಳನ್ನು ರದ್ದುಪಡಿಸಿದನು.
- ಮೊಘಲ್ ಚಕ್ರವರ್ತಿ ಹಾಗೂ ಔದ್ ನವಾಬ ಮೊದಲಾದ ರಾಜರುಗಳನ್ನು ಅಧಿಕಾರದಿಂದ ಪದಚ್ಯುತಗೊಳಿಸಿದರು
- ರಾಜರುಗಳನ್ನು ಅವಲಂಬಿಸಿದ ಸೈನಿಕರು ನಿರುದ್ಯೋಗಿಗಳಾದರು.
- ಈ ಅಂಶಗಳು ೧೮೫೭ರ ದಂಗೆಗೆ ಪ್ರೇರಕವಾದವು.

**2 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ಆರ್ಥಿಕ ಕಾರಣಗಳನ್ನು ವಿಶ್ಲೇಷಿಸಿರಿ.**

- ಕೈಗಾರಿಕಾ ಕ್ರಾಂತಿಯಿಂದ ಕರಕುಶಲತೆ ಮತ್ತು ದೇಶೀಯ ಕೈಗಾರಿಕರಗಳು ಕ್ಷೀಣಿಸಿದವು.
- ಇಂಗ್ಲೆಂಡ್ ವ್ಯಾಪಾರಿ ದೇಶವಾಗಿರದೆ ಕೈಗಾರಿಕೆಗಳ ಕಾರ್ಯಾಗಾರವಾಯಿತು.
- ಭಾರತದಲ್ಲಿದ್ದ ಕರಕುಶಲಗಾರರು ನಿರುದ್ಯೋಗಿಗಳಾದರು.
- ನೇಕಾರಿಕೆ ವೃತ್ತಿಯವರು ಉದ್ಯೋಗ ಕಳೆದುಕೊಂಡರು.
- ಗೃಹ ಕೈಗಾರಿಕೆಗಳು ತೀವ್ರ ಆರ್ಥಿಕ ಸಂಕಷ್ಟ ಅನುಭವಿಸಿ ಶಿಥಿಲಗೊಂಡವು.
- ಭಾರತದ ವಸ್ತುಗಳನ್ನು ಇಂಗ್ಲೆಂಡಿನಲ್ಲಿ ಮಾರಲು ಇಂಗ್ಲೀಷರು ದುಬಾರಿ ಸುಂಕವನ್ನು ಹೇರಿದರು.
- ಜಮೀನ್ದಾರರು ಕೃಷಿಕರನ್ನು ಶೋಷಿಸುತ್ತಿದ್ದರು.
- ಇನಾಂ ಆಯೋಗ ನೇಮಿಸಿ ಇನಾಂ ಭೂಮಿಯನ್ನು ವಾಪಸ್ ಪಡೆಯಲಾಯಿತು.
- ಕೃಷಿಕರು ತೀವ್ರ ಅವಮಾನ ಮತ್ತು ಆರ್ಥಿಕ ಸಂಕಷ್ಟ ಅನುಭವಿಸಿದರು

**3 ಪ್ರಥಮ ಸ್ವಾತಂತ್ರ್ಯಯ ಸಂಗ್ರಾಮಕ್ಕೆ ಆಡಳಿತಾತ್ಮಕ ಮತ್ತು ಸೈನಿಕ ಅಂಶಗಳು ಹೇಗೆ ಕಾರಣವಾದವು ಚರ್ಚಿಸಿರಿ.**

**ಆಡಳಿತಾತ್ಮಕ ಕಾರಣಗಳು:–**

- ಇಂಗ್ಲೀಷರು ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು.
- ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು
- ಆಂಗ್ಲ ಭಾಷೆ ನ್ಯಾಯಾಲಯದ ಭಾಷೆಯಾಯಿತು.
- ಇಂಗ್ಲೀಷ್ ನ್ಯಾಯಾಧೀಶರು ಇಂಗ್ಲೀಷರ ಪರವಾಗಿ ನ್ಯಾಯ ನೀಡುತ್ತಿದ್ದರು.
- ಹೊಸ ಕಾನೂನಿನ ಅಂಶಗಳು ಜನರಿಗೆ ಅರ್ಥವಾಗಲ್ಲಿಲ್ಲ.

**ಸೈನಿಕ ಕಾರಣಗಳು:–**

- ಬ್ರಿಟಿಷರ ಸೈನ್ಯದಲ್ಲಿದ್ದ ಭಾರತೀಯ ಸೈನಿಕರ ಸ್ಥಿತಿ ತುಂಬಾ ಗಂಭೀರವಾಗಿತ್ತು.
- ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸೈನಿಕರಿಗಿರಲಿಲ್ಲ.

- ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದರು.
- ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

**4 ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿರಿ.**

- ಇಡಿ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ.
- ದೇಶದ ಬಿಡುಗಡೆಗಿಂತ ಅವರ ಸ್ವಹಿತಾಸಕ್ತಿ, ಹಕ್ಕುಗಳಿಗಾಗಿ ನಡೆದಿತ್ತು.
- ಯೋಜಿತ ಹೋರಾಟವಾಗಿರದೆ ಅನಿರೀಕ್ಷಿತ ಕಾರಣಗಳಿಂದ ಪ್ರೇರೆಪಿತವಾಗಿತ್ತು.
- ಭಾರತೀಯ ಸೈನಿಕರಲ್ಲಿ ಒಗ್ಗಟ್ಟು ಇರಲಿಲ್ಲ.
- ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರತೆಯಿತ್ತು.
- ಯುದ್ಧ ತಂತ್ರ, ಸೈನಿಕ ಪರಿಣತಿ, ಶಿಸ್ತು, ಮತ್ತು ಸೇನಾ ನಾಯಕತ್ವದ ಕೊರತೆಯಿತ್ತು.
- ಹೋರಾಟಗಾರರಲ್ಲಿ ನಿಶ್ಚಿತ ಗುರಿಯಿರಲಿಲ್ಲ.
- ದೇಶೀಯ ಸಂಸ್ಥಾನಗಳ ರಾಜರು ಸಿಪಾಯಿಗಳಿಗೆ ಬೆಂಬಲ ನೀಡಲಿಲ್ಲ.
- ಸಿಪಾಯಿಗಳು ಮಾಡಿದ ಲೂಟಿ, ದರೋಡೆಗಳಂತಹ ತಪ್ಪುಗಳಿಂದಾಗಿ ಜನರ ವಿಶ್ವಾಸ ಕಳೆದುಕೊಂಡರು.

**5 ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳನ್ನು ತಿಳಿಸಿ.**

- ಈಸ್ಟ್ ಇಂಡಿಯಾದ ಆಡಳಿತ ಕೊನೆಗೊಂಡು ಬ್ರಿಟನ್ ರಾಣಿಗೆ ವರ್ಗಾವಣೆಗೊಂಡಿತು.
- ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.
- ೧೮೫೮ರಲ್ಲಿ ಬ್ರಿಟನ್ ರಾಣಿಯು ಘೋಷಣೆ ಹೊರಡಿಸಿದರು.
- ಈ ಘೋಷಣೆಯನ್ನು ಭಾರತೀಯ ಮಹಾಸನ್ನದು ಎಂದು ಕರೆಯಲಾಗಿದೆ.
- ಭಾರತೀಯರ ಪ್ರೀತಿ, ವಿಶ್ವಾಸ, ಬೆಂಬಲವಿಲ್ಲದೆ ಆಡಳಿತ ಮಾಡಲು ಸಾದ್ಯವಿಲ್ಲವೆಂದು ಬ್ರಿಟಿಷರು ಅರಿತರು.
- ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿಯಾಯಿತು.
- ಭಾರತೀಯರು ಹೋರಾಟದ ಪರ್ಯಾಯ ಮಾರ್ಗಗಳನ್ನು ಹುಡುಕಿಕೊಳ್ಳುವುದು ಅನಿವಾರ್ಯವಾಯಿತು.

**6 ೧೮೫೮ರ ಬ್ರಿಟನ್ ರಾಣಿ ಹೊರಡಿಸಿದ ಶಾಸನದ ಅಂಶಗಳನ್ನು ತಿಳಿಸಿ.**

- ಕಂಪನಿಯು ದೇಶಿಯ ರಾಜರೊಂದಿಗೆ ಮಾಡಿಕೊಂದಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
- ಭಾರತೀಯರಿಗೆ ಸುಭದ್ರ ಸರಕಾರವನ್ನು ನೀಡುವುದು.
- ಕಾನೂನಿನ ಮುಂದೆ ಸಮಾನತೆ.
- ಧಾರ್ಮಿಕ ಸಹಿಷ್ಣುತೆಯೊಂದಿಗೆ ಅಧಿಕಾರ ಮಾಡುವುದು.
- ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು.

**7 ೧೮೫೭ರ ದಂಗೆಯು ನಡೆದ ಬಗೆ(ಮುನ್ನಡೆ)ಯನ್ನು ವಿವರಿಸಿರಿ./ ಮಂಗಲ ಪಾಂಡೆ ಬ್ರಿಟಿಷ್ ಅಧಿಕಾರಿಯನ್ನು ಕೊಂದ ನಂತರ ಆದ ಬೆಳವಣಿಗೆಯನ್ನು ತಿಳಿಸಿರಿ.**

- ರಾಯಲ್ ಎನ್‌ಫೀಲ್ಡ್ ಬಂದೂಕುಗಳಿಗೆ ಹಸು ಮತ್ತು ಹಂದಿಯ ಕೊಬ್ಬನ್ನು ಸವರಿದ್ದರೆಂಬ ವದಂತಿಯಿತ್ತು
- ಭಾರತೀಯ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳನ್ನು ಬಳಸಲು ನಿರಾಕರಿಸಿದರು
- ಬ್ಯಾರಕಪುರದಲ್ಲಿ ಬಂದೂಕುಗಳನ್ನು ಬಳಸಲು ನಿರಾಕರಿಸಿ ಮೇಲಧಿಕಾರಿಗಳ ಮೇಲೆ ಬಂಡಾಯವೆದ್ದರು.
- ಮಂಗಲ ಪಾಂಡೆ ಎಂಬ ಸೈನಿಕ ಇಂಗ್ಲೀಷ್ ಸೈನ್ಯದ ಅಧಿಕಾರಿಯನ್ನು ಕೊಂದನು.
- ಮಂಗಲ ಪಾಂಡೆಯನ್ನು ಇಂಗ್ಲೀಷರು ಗಲ್ಲಿಗೆರಿಸಿದರು.
- ಪ್ರಭಲ ಸೇನಾ ನೆಲೆಯಾಧ ಮೀರತ್‌ನಲ್ಲಿಯು ಬಂಡಾಯವೆದ್ದಿತು.
- ಸೈನಿಕರು ಗುಂಪಾಗಿ ದೆಹಲಿ ತಲುಪಿದರು.
- ದಂಗೆ ದೆಹಲಿ, ಕಾನ್ಪುರ, ಝಾನ್ಸಿಗಳಲ್ಲಿ ಹಬ್ಬಿತು.
- ದೆಹಲಿಯಲ್ಲಿ ೨ನೇ ಬಹದ್ದೂರ್ ಷಾ, ಕಾನ್ಪುರ್‌ನಲ್ಲಿ ನಾನಾ ಸಾಹೇಬ, ಝಾನ್ಸಿಯಲ್ಲಿ ಲಕ್ಷ್ಮೀಬಾಯಿ ನೇತೃತ್ವದಲ್ಲಿ ದಂಗೆ ನಡೆಯಿತು.
- ಬ್ರಿಟಿಷರು ಸಮರ್ಥ ಅಧಿಕಾರಿಗಳ ನೇತೃತ್ವದಲ್ಲಿ ದಂಗೆಯನು ಅಡಗಿಸಿದರು

# ಸ್ವಾತಂತ್ರ್ಯ ಹೋರಾಟ

**ಒಂದು ಅಂಕದ ಪ್ರಶ್ನೆಗಳು:**

**1. ಲಾರ್ಡ ಲಿಟ್ಟನ್ ದೇಶಿಯ ಪತ್ರಿಕೆಗಳ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತಂದನು ಏಕೆ?**

ಪತ್ರಿಕೋದ್ಯಮದಲ್ಲಿ ಜನರನ್ನು ನಿಯಂತ್ರಿಸಲು

**2. ಇಲ್ಬರ್ಟ ಮಸೂದೆಯನ್ನು ಜಾರಿಗೆ ತಂದವರು ಯಾರು?**

ಲಾರ್ಡ್ ರಿಪ್ಪನ್

**3. ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಸ್ಥಾಪಿಸಿದವರು ಯಾರು?**

ಎ ಓ ಹ್ಯೂಮ್

**4. ಸಂಪತ್ತಿನ ಸೋರಿಕೆ ಸಿದ್ದಾಂತವನ್ನು ಮಂಡಿಸಿದವರು ಯಾರು?**

ದಾದಾಬಾಯಿ ನವರೋಜಿ

**5. ಇಂಗ್ಲೆಂಡಿಗೆ ಸೋರಿ ಹೋಗುವ ಸಂಪತ್ತನ್ನು ವಿಶ್ಲೇಷಿಸುವ ಸಿದ್ಧಾಂತ ಯಾವುದು?**

ಸಂಪತ್ತಿನ ಸೋರಿಕೆ ಸಿದ್ಧಾಂತ

**6. ದೇಶದ ಸಂಪತ್ತು ಇಂಗ್ಲಂಡಿಗೆ ಹರಿಯಲು ಕಾರಣವೇನು?**

ಆಮದನ್ನು ಹೆಚ್ಚಿಸಿ ರಫ್ತನ್ನು ಕಡಿಮೆ ಮಾಡಿದ್ದರಿಂದ ಪ್ರತಿಕೂಲ ಸಂದಾಯ ಉಂಟಾಗಿ ದೇಶದ ಸಂಪತ್ತು ಇಂಗ್ಲಂಡಿಗೆ ಹರಿಯಿತು

**7. ವೈಸರಾಯ್ ಲಾರ್ಡ ಕರ್ಜನ್ನನು ಬಂಗಾಳ ವಿಭಜನೆಯನ್ನು ಮಾಡಿದನು ಏಕೆ?**

ಸಮುದಾಯಗಳ ನಡುವೆ ಕಂದಕವನ್ನುಂಟು ಮಾಡಿ ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಕುಗ್ಗಿಸಲು

**8. ಉತ್ತಮ ಆಳ್ವಿಕೆಯು ಎಂದೂ ಕೂಡಾ ಸ್ವಯಂ ಆಳ್ವಿಕೆಗೆ ಪರ್ಯಾಯವಾಗಲಾರದೆಂದು ಪ್ರತಿಪಾದಿಸಿದವರು ಯಾರು?**

ತೀವ್ರವಾದಿಗಳು

**9. ಸ್ವರಾಜ್ಯವು ನನ್ನ ಜನ್ಮ ಸಿದ್ದ ಹಕ್ಕು; ಅದನ್ನು ಪಡೆದೇ ತೀರುವೆ ಈ ಹೇಳಿಕೆ ಯಾರದು?**

ಬಾಲ ಗಂಗಾಧರ ತಿಲಕ

**10. ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಲು ಹೊರತಂದ ಪತ್ರಿಕೆಗಳು ಯಾವುವು?**

ಮರಾಠಾ ಮತ್ತು ಕೇಸರಿ

**11. ನಾಗಾ ಬುಡಕಟ್ಟಿನ ತರುಣ ಯೋಧರ ಪಡೆಯನ್ನು ಕಟ್ಟಿದವರು ಯಾರು?**

ಜಾದೋನಾಂಗ

**12. ಈಶಾನ್ಯ ಭಾಗದಲ್ಲಿ ಮಹಿಳೆಯರನ್ನು ಸೇರಿಸಿಕೊಂಡು ಸೇನೆಯನ್ನು ಕಟ್ಟಿದವರು ಯಾರು?**

ಗಾಯಿಡಿನ್ ಲೂ

**13. ಧಾರ್ಮಿಕ ಜಾಗೃತಿಗಾಗಿ ಗಾಯಿಡಿನ್ ಲೂ ಕಟ್ಟಿದ ಸಂಸ್ಥೆ ಯಾವುದು?**

ಹರಕ್ಕಾ ಸಂಸ್ಥೆ

**14. ಗಾಂಧೀಜಿಯವರು ತಮ್ಮ ಸಿದ್ಧಾಂತಗಳನ್ನು ಯಾವ ಪತ್ರಿಕೆಯಲ್ಲಿ ವ್ಯಕ್ತಪಡಿಸುತ್ತಿದ್ದರು?**

ಯಂಗ್ ಇಂಡಿಯಾ

**15. ಗಾಂಧೀಜಿಯವರ ಹೋರಾಟದ ಪ್ರಮುಖ ಅಸ್ತ್ರವೇನು?**

ಸತ್ಯಾಗ್ರಹ

**16. ಪಂಜಾಬಿನಲ್ಲಿ ಯಾವ ಕಾಯ್ದೆಯ ವಿರುದ್ದ ಚಳುವಳಿ ಹರಡಿತ್ತು?**

ರೌಲತ್ ಕಾಯ್ದೆ

**17. ಖಿಲಾಫತ್ ಚಳುವಳಿಯನ್ನು ಆರಂಭಿಸಿದವರು ಯಾರು?**

ಮಹಮ್ಮದ ಅಲಿ ಮತ್ತು ಶೌಕಲ್ ಅಲಿ

**18. ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದವರು ಯಾರು?**

ಸಿ ಆರ್ ದಾಸ್ ಮತ್ತು ಮೋತಿಲಾಲ್ ನೆಹರು

**19. ಸೈಮನ್ ಹಿಂದಕ್ಕೆ ಹೋಗು ಪ್ರತಿಭಟನೆಯ ಸಂದರ್ಭದಲ್ಲಿ ಮರಣ ಹೊಂದಿದ ನಾಯಕ ಯಾರು?**

ಲಾಲ ಲಜಪತ್ ರಾಯ್

**20. ಸಂಪೂರ್ಣ ಸ್ವರಾಜ್ಯ ನಮ್ಮ ಗುರಿ ಎಂದು ಕಾಂಗ್ರೆಸ್ ಘೋಷಿಸಿದ ಅಧಿವೇಶನ ಯಾವುದು?**

ಲಾಹೋರ್ ಕಾಂಗ್ರೆಸ್ ಅಧಿವೇಶನ

**21. ಇತಿಹಾಸದಲ್ಲಿ ದಂಡಿ ಸತ್ಯಾಗ್ರಹವೆಂದು ಕರೆದ ಚಳುವಳಿ ಯಾವುದು?**

ಉಪ್ಪು ತಯಾರಿಸಿ ಕಾನೂನು ಭಂಗ ಚಳುವಳಿ ಆರಂಭಿಸಿದ ಚಳುವಳಿ

**22. ಮೊದಲ ದುಂಡು ಮೇಜಿನ ಪರಿಷತ್ತಿನ ಸಮಾವೇಶ ಪೂರ್ಣಗೊಳ್ಳಲಿಲ್ಲ ಏಕೆ?**

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸಲಿಲ್ಲ

**23. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಗಾಂಧೀಜಿಯವರು ದೇಶಬಾಂಧವರಿಗೆ ಏನೆಂದು ಕರೆ ನೀಡಿದರು?**

ಮಾಡು ಇಲ್ಲವೆ ಮಡಿ

**24. ಕಾಂಗ್ರೆಸ್‌ನ ಸಮಾಜವಾದಿ ಬಣದ ನಾಯಕರಾಗಿದ್ದವರು ಯಾರು?**

ಜಯಪ್ರಕಾಶ ನಾರಾಯಣ್

**25. ಪ್ರಮುಖ ಬುಡಕಟ್ಟು ಬಂಡಾಯಗಳಾವುವು?**

ಸಂತಾಲ ಮುಂಡ ಮತ್ತು ಕರ್ನಾಟಕದ ಹಲಗಲಿ ಬೇಡರ ದಂಗೆ

**26. ಸುಭಾಸ್ ಚಂದ್ರ ಬೋಸ್‌ರವರು ಸ್ಥಾಪಿಸಿದ ಪಕ್ಷ ಯಾವುದು?**

ಫಾರ್ವರ್ಡ್ ಬ್ಲಾಕ್

**27. "ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ" ಈ ಹೇಳಿಕೆ ಯಾರದು?**

ಸುಭಾಸ್ ಚಂದ್ರ ಬೋಸ್

**28. ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರು ಯಾರಾಗಿದ್ದರು?**

ಡಾ॥ ಬಿ ಆರ್ ಅಂಬೇಡ್ಕರ್

**29. ಡಾ॥ ಬಿ ಆರ್ ಅಂಬೇಡ್ಕರ್‌ರವರು ಸ್ಥಾಪಿಸಿದ ಪಕ್ಷ ಯಾವುದು?**

ಸ್ವತಂತ್ರ ಕಾರ್ಮಿಕ ಪಕ್ಷ

**30. 1929ರ ಲಾಹೋರ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರು ಯಾರಾಗಿದ್ದರು?**

ಜವಾಹರಲಾಲ್ ನೆಹರು

**ಪ್ರಮುಖ ಇಸ್ವಿಗಳು:**

1. 1905 ಬಂಗಾಳದ ವಿಭಜನೆ
2. 1911 ಬಂಗಾಳ ವಿಜನೆಯನ್ನು ಹಿಂಪಡೆಯಿತು
3. 1920 ಅಸಹಕಾರ ಚಳುವಳಿ
4. 1922 ಚೌರಿಚೌರಾ ಘಟನೆ
5. 1923 ಸ್ವರಾಜ್ ಪಕ್ಷ ಸ್ಥಾಪನೆ
6. 1924 ಬೆಳಗಾವಿ ಅಧಿವೇಶನ (ಗಾಂಧೀಜಿ ಅಧ್ಯಕ್ಷತೆಯಲ್ಲಿ)
7. 1929 ಲಾಹೋರ ಅಧಿವೇಶನ (ನೆಹರು ಅಧ್ಯಕ್ಷತೆಯಲ್ಲಿ)
8. 1930 ದಂಡಿ ಸತ್ಯಾಗ್ರಹ
9. 1930 ಮೊದಲ ದುಂಡು ಮೇಜಿನ ಪರಿಷತ್ತು
10. 1931 ಗಾಂಧೀ–ಇರ್ವಿನ್ ಒಪ್ಪಂದ
11. 1932 ಮೂರನೆ ದುಂಡು ಮೇಜಿನ ಪರಿಷತ್ತು
12. 1942 ಕ್ವಿಟ್ ಇಂಡಿಯಾ ಚಳುವಳಿ
13. 1930 ಜನವರಿ 26 ದೇಶ ಸ್ವಾತಂತ್ರ್ಯ ದಿನ ಆಚರಿಸಿತು
14. 1947 ಅಗಸ್ಟ್ 15 ಭಾರತ ಸ್ವಾತಂತ್ರ್ಯ ಪಡೆಯಿತು

**ದೀರ್ಘ ಉತ್ತರದ ಪ್ರಶ್ನೋತ್ತರಗಳು**

**೧ ಮಂದಗಾಮಿ ನಾಯಕರ ಪ್ರಮುಖ ಬೇಡಿಕೆಗಳಾವುವು?**

- ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ ಇಟ್ಟಿದ್ದರು
- ಸಂವಿಧಾನಿಕ ಚೌಕಟ್ಟಿನೊಳಗೆ ಪ್ರಾರ್ಥನೆ ಮತ್ತು ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು

- ಜನರಿಗೆ ರಾಜಕೀಯ ಶಿಕ್ಷಣವನ್ನು ನೀಡುವ ಪ್ರಯತ್ನ ಮಾಡಿದರು
- ಸಮಸ್ಯೆಗಳ ಬಗ್ಗೆ ಸಭೆಗಳನ್ನು ನಡೆಸಿ, ಚರ್ಚಿಸಿ, ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದರು
- ದೇಶದ ಕೈಗಾರಿಕೆಗಳ ಅಭಿವೃದ್ಧಿ ಮಾಡುವುದು
- ಸೈನಿಕ ವೆಚ್ಚ ಕಡಿಮೆ ಮಾಡುವುದು
- ಉತ್ತಮ ಶಿಕ್ಷಣ ಕೊಡುವುದು
- ಬಡತನದ ಬಗ್ಗೆ ಅಧ್ಯಯನ ನಡೆಸಲು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸುವುದು

**೨ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿರಿ**

- ಅರಬಿಂದೋ ಘೋಷ್, ಬಿಪಿನ್‌ಚಂದ್ರ ಪಾಲ್, ಲಾಲಲಜಪತ್ ರಾಯ್, ಬಾಲಗಂಗಾಧರ ತಿಲಕ್ ಪ್ರಮುಖ ತೀವ್ರವಾದಿ ನಾಯಕರಾಗಿದ್ದರು
- ಮಂದಗಾಮಿಗಳ ಮೃದು ಧೋರಣೆಯನ್ನು ಟೀಕೆ ಮಾಡುತ್ತಾ ಬಂದರು
- ಮಂದಗಾಮಿಗಳನ್ನು ರಾಜಕೀಯ ಬಿಕ್ಷುಕರೆಂದು ಕರೆದರು
- ಬಂಗಾಲ ವಿಭಜನೆಯನ್ನು ವಿರೋಧಿಸಿದರು
- ಸ್ವದೇಶಿ ಚಳವಳಿಯನ್ನು ದೇಶಾದ್ಯಂತ ಕೊಂಡೊಯ್ದರು
- ಸ್ವದೇಶಿ ಆಂದೋಲನಕ್ಕೆ ಕರೆ ನೀಡಿದರು
- ಸ್ವದೇಶಿ ವಸ್ತುಗಳನ್ನು ಬಳಸುವಂತೆ ಭಾರತೀಯರನ್ನು ಪ್ರೇರೇಪಿಸಿದರು
- ಇವರ ತೀವ್ರ ಹೋರಾಟದಿಂದ ಬಂಗಾಳ ವಿಭಜನೆ ರದ್ಧಾಯಿತು
- ಉತ್ತಮ ಆಳ್ವಿಕೆಯು ಎಂದೂ ಕೂಡಾ ಸ್ವಯಂ ಆಳ್ವಿಕೆಗೆ ಪರ್ಯಾಯವಾಗಲಾರದೆಂದು ಪ್ರತಿಪಾದಿಸಿದರು.

**೩. ಸ್ವಾತಂತ್ರ್ಯಯ ಹೋರಾಟದಲ್ಲಿ ಬಾಲ ಗಂಗಾಧರ ತಿಲಕರ ಪಾತ್ರ ವಿವರಿಸಿರಿ**

- ಬಾಲ ಗಂಗಾಧರ ತಿಲಕರು ತೀವ್ರವಾದಿ ಬಣದ ಪ್ರಮುಖ ನಾಯಕರಾಗಿದ್ದರು
- ಸ್ವರಾಜ್ಯ ನನ್ನ ಜನ್ಮಸಿದ್ದ ಹಕ್ಕು: ಅದನ್ನು ಪಡೆದೆ ತೀರುವೆ ಎಂದು ಘೋಷಿಸಿದರು
- ಪೂರ್ಣ ಸ್ವರಾಜ್ಯವನ್ನು ಪಡೆಯುವುದು ತೀವ್ರವಾದಿಗಳ ಗುರಿಯಾಗಿತ್ತು
- ಇವರು ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ ಮಾಡಿದರು
- ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಅವರನ್ನು ಸಜ್ಜುಗೊಳಿಸಿದರು
- ಗಣೇಶ, ಶಿವಾಜಿ ಮತ್ತು ದುರ್ಗಾಗಳಂತಹ ಉತ್ಸವಗಳ ಮೂಲಕ ಜನರನ್ನು ಹೋರಾಟಕ್ಕೆ ಪ್ರೇರೆಪಿಸಿದರು
- ತಿಲಕರು ಮರಾಠ(ಇಂಗ್ಲೀಷ್), ಕೇಸರಿ(ಮರಾಠಿ) ಪತ್ರಿಕೆಗಳನ್ನು ಹೋರಾಟಕ್ಕೆ ಬಳಸಿಕೊಂಡರು
- ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೆಪಿಸಿದರು
- ಇವರ ಕ್ರಾಂತಿಕಾರಿ ಬರವಣಿಗೆಗಳು ಜನರನ್ನು ಉದ್ರೇಕಿಸಿದವು
- ಗೀತಾ ರಹಸ್ಯ ಗ್ರಂಥವನ್ನು ಜೈಲಿನಲ್ಲಿದ್ದಾಗ ರಚಿಸಿದರು

**೪ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರವನ್ನು ವಿವರಿಸಿರಿ**

- ಕ್ರಾಂತಿಕಾರಿಗಳು ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು
- ಹಿಂಸಾತ್ಮಕ ಮಾರ್ಗದಿಂದ ಬ್ರಿಟಿಷರನ್ನು ಓಡಿಸಬಹುದೆಂದು ನಂಬಿದ್ದರು
- ರಹಸ್ಯ ಸಂಘಗಳ ಮೂಲಕ ಹಣಕಾಸು ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಕಾರ್ಯದೊಂದಿಗೆ ತರಬೇತಿ ನೀಡುವಲ್ಲಿ ನಿರತರಾಗಿದ್ದರು
- ತೀವ್ರವಾದಿ ಬಣದ ನಾಯಕರು ಕ್ರಾಂತಿಕಾರಿಗಳಾದರು
- ಅನುಶೀಲನ ಸಮಿತಿ ಮತ್ತು ಅಭಿನವ ಭಾರತ ರಹಸ್ಯ ಸಂಘಟನೆಗಳಲ್ಲಿ ಪ್ರಮುಖವಾದವು
- ತಮ್ಮ ಗುರಿ ಸಾಧನೆಗಾಗಿ ಬಾಂಬು ಮತ್ತು ಬಂದೂಕು ಪ್ರಯೋಗ ಮಾಡಿದರು
- ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಬಂಧಿಸಿ ಜೀವಾವಧಿ ಅಥವಾ ಗಲ್ಲು ಶಿಕ್ಷೆ ವಿಧಿಸಿತು
- ರಾಷ್ಟ್ರೀಯ ಆಂದೋಲನಕ್ಕೆ ಸ್ಪೂರ್ತಿಯ ಚಿಲುಮೆಯಾಗಿದ್ದರು
- ಸಾವರ್ಕರ್, ಅರಬಿಂದೋ ಘೋಷ್, ಭಗತ್ ಸಿಂಗ್, ಖುದಿರಾಮ್ ಬೋಸ್ ಪ್ರಮುಖ ಕ್ರಾಂತಿಕಾರಿಗಳಾಗಿದ್ದರು

**೫ ಬಂಗಾಳ ವಿಭಜನೆಯನ್ನು ವಿರೋಧಿಸಿ ನಡೆದ ಹೋರಾಟಗಳನ್ನು ವಿವರಿಸಿರಿ**

- ಬಂಗಾಳ ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು
- ಸಮುದಾಯಗಳ ನಡುವೆ ಕಂದಕವನ್ನುಂಟು ಮಾಡಿ ಹೋರಾಟದ ತೀವ್ರತೆಯನ್ನು ಕುಗ್ಗಿಸುವ ಸಂಚನ್ನು ರೂಪಿಸಿದನು
- ಬ್ರಿಟಿಷರು ಭಾರತೀಯರನ್ನು ಒಡೆದು ಆಳಲು ೧೯೦೫ರಲ್ಲಿ ಬಂಗಾಳ ವಿಭಜನೆ ಮಾಡಿದರು
- ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ವಿರೋಧಿಸಿತು
- ದೇಶಾದ್ಯಂತ ಪ್ರತಿರೋಧಗಳು ವ್ಯಕ್ತವಾದವು
- ಸ್ವದೇಶಿ ಚಳುವಳಿಯನ್ನು ಆರಂಭಿಸಲಾಯಿತು
- ತೀವ್ರವಾದಿಗಳು ಸ್ವದೇಶಿ ಚಳುವಳಿಯನ್ನು ದೇಶಾದ್ಯಂತ ಕೊಂಡೊಯ್ದರು
- ಸ್ವದೇಶಿ ಆಂದೋಲನಕ್ಕೆ ಕರೆ ನೀಡಲಾಯಿತು
- ಸ್ವದೇಶಿ ವಸ್ತುಗಳನ್ನು ಬಳಸುವಂತೆ ಭಾರತೀಯರನ್ನು ಪ್ರೇರೆಪಿಸಲಾಯಿತು
- ೧೯೧೧ರಲ್ಲಿ ಬಂಗಾಳ ವಿಭಜನೆಯನ್ನು ರದ್ದುಪಡಿಸಲಾಯಿತು

**೬ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾರ್ಡಿಯನ್ ಲೂ ಇವರ ಪಾತ್ರವನ್ನು ತಿಳಿಸಿ**

- ಜಾದೋನಾಂಗ್ ಎಂಬ ನಾಗಾಬುಡಕಟ್ಟಿನ ತರುಣ ಬ್ರಿಟಿಷರ ವಿರುದ್ಧ ಯೋಧಪಡೆಯೊಂದನ್ನು ಕಟ್ಟಿದನು
- ಅವರ ಸೇನೆಯಲ್ಲಿ ಮಹಿಳೆಯರಿಗೆ ಅವಕಾಶವಿರಲಿಲ್ಲ
- ಗಾರ್ಡಿಯನ್ ಲೂ ಎಂಬ ಯುವತಿ ಈಶಾನ್ಯ ಭಾರತದ ಮಹಿಳೆಯರನ್ನು ಸೇರಿಸಿ ಹೊಸ ಪಡೆ ಕಟ್ಟಿದಳು
- ಧಾರ್ಮಿಕ ಜಾಗೃತಿಗಾಗಿ ಹರಕ್ಕಾ ಎಂಬ ಸಂಸ್ಥೆಯನ್ನು ಕಟ್ಟಿದಳು
- ಆಂಗ್ಲ ಸರ್ಕಾರ ಜಾದೋನಾಂಗ್‌ರನ್ನು ಬಂಧಿಸಿ ಗಲ್ಲಿಗೇರಿಸಿತು
- ಎರಡೂ ಸೇನೆಗಳಿಗೆ ಗಾರ್ಡಿಯನ್ ಲೂ ನೇತೃತ್ವವಹಿಸಿದಳು
- ಶಿವಾಜಿಯ ರೀತಿಯಲ್ಲಿ ರಣತಂತ್ರ ರೂಪಿಸಿ ಗೆರಿಲ್ಲಾ ಬಗೆಯಲ್ಲಿ ಹೋರಾಡಿದಳು
- ಆಕೆಯ ಹೋರಾಟಕ್ಕೆ ಹಳ್ಳಿಹಳ್ಳಿಗಳೇ ಸಾಥ್ ನೀಡಿದವು
- ಸಾವಿರಾರು ಸ್ತ್ರೀ-ಪುರುಷರು ಆಕೆಯ ಸೈನ್ಯವನ್ನು ಸೇರಿಕೊಂಡರು
- ಮ್ಯಾಕ್ ಡೊನಾಲ್ಡನು ಆಕೆಯನ್ನು ಬಂಧಿಸಿದನು
- ಸ್ವಾತಂತ್ರ್ಯ ಸಿಗುವವರೆಗೆ ಆಕೆ ಜೈಲಿನಲ್ಲೇ ಇರಬೇಕಾಯಿತು

**೭ ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿವರಿಸಿರಿ**

- ರೌಲೆಟ್ ಕಾಯ್ದೆಯ ವಿರುದ್ಧ ಪಂಜಾಬಿನಲ್ಲಿ ಚಳವಳಿ ವ್ಯಾಪಕವಾಗಿ ಹರಡಿತು
- ಸರ್ಕಾರ ಅಮೃತಸರವನ್ನು ಜನರಲ್ ಡಯರ್ ಎಂಬ ಸೇನಾಧಿಕಾರಿಯ ಉಸ್ತುವಾರಿಗೆ ನೀಡಿತು
- ಜನರಲ್ ಡಯರ್ ನಗರವನ್ನು ಸೇನಾಳ್ವಿಕೆಗೆ ಒಳಪಡಿಸಿ ಸಭೆಗಳನ್ನು ನಿಷೇಧಿಸಿದನು
- ಈ ಕಾಯ್ದೆಯ ಬಗ್ಗೆ ಹೋರಾಟಗಾರರಿಗೆ ಪೂರ್ಣ ಮಾಹಿತಿಯಿರಲಿಲ್ಲ
- ಆದರೆ ಜಲಿಯನ್ ವಾಲಾಬಾಗ್‌ನಲ್ಲಿ ಸಭೆ ಸೇರಲು ಹೋರಾಟಗಾರರು ಮೊದಲೇ ತೀರ್ಮಾನಿಸಿದ್ದರು
- ಜಲಿಯನ್ ವಾಲಾಬಾಗ್‌ನಲ್ಲಿ ಸಭೆಯು ಶಾಂತಿಯುತವಾಗಿ ನಡೆಯುತ್ತಿತ್ತು
- ಜನರಲ್ ಡಯರ್ ಯಾವುದೇ ಮುನ್ಸೂಚನೆಯನ್ನು ನೀಡದೆ ಜನರ ಮೇಲೆ ಅಮಾನುಷವಾಗಿ ಗುಂಡಿನ ಮಳೆಗರೆದನು
- ೩೭೯ ಜನ ಪ್ರಾಣಕಳೆದುಕೊಂಡು ಸಹಸ್ರಾರು ಜನ ಗಾಯಗೊಂಡರು
- ಈ ಘಟನೆಯನ್ನು ಜಲಿಯನ್ ವಾಲಾಬಾಗ್ ಘಟನೆ ಎನ್ನುವರು

**೮ ಗಾಂಧೀಜಿಯವರು ಕೈಗೊಂಡ ಅಸಹಕಾರ ಚಳುವಳಿಯನ್ನು ವಿವರಿಸಿರಿ**

- ಗಾಂಧೀಜಿಯವರು ೧೯೨೦ರಲ್ಲಿ ಅಸಹಕಾರ ಚಳುವಳಿಗೆ ಕರೆಯಿತ್ತರು
- ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದರು
- ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು
- ಭಾರತೀಯ ಗಣ್ಯರು ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಹಿಂದಿರುಗಿಸಿದರು
- ಚಳುವಳಿಯನ್ನು ಬೆಂಬಲಿಸಿ ಮೋತಿಲಾಲ್ ನೆಹರು ಮತ್ತು ಸಿ ಆರ್ ದಾಸ್ ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿದರು
- ರಾಜಕುಮಾರನ ಭೇಟಿ ವಿರುದ್'ದ ದೇಶಾದ್ಯಂತ ಹರತಾಳಗಳು ನಡೆದವು
- ಅಸಹಕಾರ ಚಳುವಳಿಯ ಸ್ವರೂಪವನ್ನು ಮನಗಂಡ ಬ್ರಿಟಿಷ್ ಸರ್ಕಾರದಲ್ಲಿ ಆತಂಕದ ವಾತಾವರಣ ಉಂಟಾಯಿತು
- ೧೯೨೨ರಲ್ಲಿ ಚೌರಿಚೌರಾ ಎಂಬಲ್ಲಿ ಶಾಂತಿಯುತವಾಗಿ ನಡೆಯುತ್ತಿದ್ದ ಹಿಂಸಾರೂಪತಾಳಿ ೨೨ಜನ ಪೋಲಿಸರ ಸಾವಿಗೆ ಕಾರಣವಾಯಿತು
- ಈ ಘಟನೆಯಿಂದ ಗಾಂಧೀಜಿಯವರು ಚಳುವಳಿಯನ್ನು ಹಿಂತೆಗೆದುಕೊಂಡರು

**೯ ಚೌರಿ ಚೌರಾ ಘಟನೆಯನ್ನು ವಿವರಿಸಿರಿ**

- ಗಾಂಧೀಜಿಯವರು ೧೯೨೦ರಲ್ಲಿ ಅಸಹಕಾರ ಚಳುವಳಿಗೆ ಕರೆಯಿತ್ತರು
- ಉತ್ತರ ಪ್ರದೇಶದ ಚೌರಿಚೌರಾ ಎಂಬಲ್ಲಿ ಸಾವಿರಾರು ಸ್ವಾತಂತ್ರ್ಯ ಯೋಧರು ಚಳವಳಿಗೆ ಧುಮುಕಿದರು
- ಶಾಂತಿಯುತವಾಗಿ ನಡೆಯುತ್ತಿದ್ದ ಚಳುವಳಿಯ ಮೇಲೆ ಪೋಲಿಸರು ಹಲ್ಲೆ ಮಾಡಿದರು
- ಇದರಿಂದ ರೊಚ್ಚಿಗೆದ್ದ ಜನರು ಠಾಣೆಗೆ ನುಗ್ಗಲೆತ್ನಸಿದರು
- ಠಾಣೆಗೆ ನುಗ್ಗುತ್ತಿದ್ದ ಜನರ ಮೇಲೆ ಪೋಲಿಸರು ಗೋಲಿಬಾರ್ ನಡೆಸಿದರು
- ಪೋಲಿಸರ ಬಳಿ ಶಸ್ತ್ರಾಸ್ತ್ರಗಳು ಖಾಲಿಯಾದ ಕಾರಣ ಠಾಣೆಯೊಳಗೆ ಓಡಿದರು
- ಚಳುವಳಿಗಾರರು ಠಾಣೆಗೆ ಬೆಂಕಿ ಹಚ್ಚಿದರು
- ಇದರಿಂದ ೨೨ ಜನ ಪೋಲಿಸರು ಸಜೀವವಾಗಿ ದಹನವಾದರು
- ಇತಿಹಾಸದಲ್ಲಿ ಈ ಘಟನೆಯನ್ನು ಚೌರಿಚೌರಾ ಘಟನೆ ಎನ್ನುವರು
- ಹಿಂಸಾತ್ಮಕ ವರ್ತನೆಗಾಗಿ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಡರು
- ಸರ್ಕಾರ ಈ ಘಟನೆಗೆ ಗಾಂಧೀಜಿಯವರನ್ನು ಹೊಣೆಗಾರರನ್ನಾಗಿಸಿ ೬ ವರ್ಷ ಸೆರೆ ವಾಸ ವಿಧಿಸಿತು

**೧೦ ಸವಿನಯ ಕಾನೂನು ಭಂಗ ಚಳುವಳಿಯನ್ನು ವಿವರಿಸಿರಿ/ ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿರಿ**

- ೧೯೩೦ರ ಪೆಬ್ರುವರಿಯಲ್ಲಿ ಕಾಂಗ್ರೆಸ್ ಸಮಿತಿ ಕಾನೂನುಭಂಗ ಚಳುಚಳಿಯನ್ನು ಹಮ್ಮಿಕೊಳ್ಳು ನಿರ್ಣಯಿಸಿತು
- ಗಾಂಧೀಜಿಯವರು ವೈಸರಾಯರಿಗೆ ೧೧ ಅಂಶಗಳ ಬೇಡಿಕೆ ಪತ್ರವನ್ನು ಬರೆದರು
- ಬೇಡಿಕೆ ಒಪ್ಪದಿದ್ದಲ್ಲಿ ತೆರಿಗೆ ನಿರಾಕರಣೆ ಜೊತೆ ಕಾನೂನುಭಂಗ ಚಳುವಳಿ ಆರಂಭಿಸುವುದಾಗಿ ಘೋಷಿಸಿದರು
- ವೈಸರಾಯ್ ಗಾಂಧೀಜಿಯವರ ಪತ್ರವನ್ನು ತಿರಸ್ಕರಿಸಿದರು
- ಗಾಂಧೀಜಿಯವರು ತಮ್ಮ ಅನುಯಾಯಿಗಳ ಜೊತೆ ದಂಡಿಗೆ ಕಾಲ್ನಡಿಯಲ್ಲಿ ಹೊರಟರು

- • ದಂಡಿಯಲ್ಲಿ ತಾವೇ ಉಪ್ಪನ್ನು ತಯಾರಿಸಿ ಕಾನೂನು ಭಂಗ ಚಳುವಳಿಯನ್ನು ಪ್ರಾರಂಭಿಸಿದರು
- • ಈ ಘಟನೆಯನ್ನು ಇತಿಹಾಸದಲ್ಲಿ ದಂಡಿ ಸತ್ಯಾಗ್ರಹ ಎಂದು ಕರೆಯುತ್ತಾರೆ
- • ವಿಜಯಲಕ್ಷ್ಮೀ ಪಂಡಿತ್, ಕಮಲಾ ನೆಹರೂ, ವಲ್ಲಭಭಾಯಿ ಪಟೇಲ್ ರಾಜಗೋಪಾಲಾಚಾರಿ ರಾಜೆಂದ್ರ ಪ್ರಸಾದರನ್ನು ಬ್ರಿಟಿಷರು ಬಂಧಿಸಿದರು
- • ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿದ್ದ ಜನರನ್ನು ಬಂಧಿಸಲಾಯಿತು
- • ಈ ಚಳುವಳಿ ದೇಶದ ನಾನಾ ಭಾಗಗಳಲ್ಲಿ ವ್ಯಾಪಿಸಿತು

**೧೧ ದುಂಡು ಮೇಜಿನ ಸಮ್ಮೇಳನಗಳನ್ನು ಕುರಿತು ವಿವರಿಸಿ.**

- ಭಾರತೀಯ ಜನಪ್ರತಿನಿಧಿಗಳ ಸಭೆಯನ್ನು ಲಂಡನ್ನಿನಲ್ಲಿ ಕರೆಯಲಾಯಿತು
- ಇದುವೇ ಪ್ರಥಮ ದುಂಡು ಮೇಜಿನ ಪರಿಷತ್
- ಅಸ್ಪೃಶ್ಯರಿಗೆ ಪ್ರತ್ಯೇಕವಾಗಿ ಪ್ರತಿನಿಧಿಸುವ ಅವಕಾಶವನ್ನು ಕಲ್ಪಿಸಲಾಗಿತ್ತು
- ಕಾಂಗ್ರೇಸ್ ಸಮಾವೇಶದಲ್ಲಿ ಭಾಗವಹಿಸದ ಹಿನ್ನೆಲೆಯಲ್ಲಿ ಸಮಾವೇಶ ಪೂರ್ಣಗೊಳ್ಳಲಿಲ್ಲ
- 1931ರಲ್ಲಿ ಗಾಂಧಿ–ಇರ್ವಿನ್ ಒಪ್ಪಂದವಾಯಿತು
- ಕಾಂಗ್ರೆಸ್ ಕಾನೂನು ಭಂಗ ಚಳುವಳಿಯನ್ನು ನಿಲ್ಲಿಸಿ 2ನೇ ದುಂಡು ಮೇಜಿನ ಪರಿಷತ್‌ನಲ್ಲಿ ಭಾಗವಹಿಸಲು ನಿರ್ಧರಿಸಿತು
- ಅಂಬೇಡ್ಕರರವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರ ನೀಡುವ ಪ್ರಸ್ತಾಪ ಮುಂದಿಟ್ಟರು
- ಬ್ರಿಟಿಷರು ಅಸ್ಪೃಶ್ಯರನ್ನು ಪ್ರತ್ಯೇಕ ಮತಕ್ಷೇತ್ರವಾಗಿ ಪರಿಗಣಿಸುವುದಾಗಿ ಘೋಷಿಸಿದರು
- ಇದನ್ನು ವಿರೋಧಿಸಿ ಗಾಂಧೀಜಿಯವರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು
- ಅಂಬೇಡ್ಕರ ಮತ್ತು ಗಾಂಧೀಜಿ ಮಧ್ಯ ಪೂನಾ ಒಪ್ಪಂದವಾಯಿತು
- 1932ರಲ್ಲಿ ಮೂರನೇ ದುಂಡು ಮೇಜಿನ ಪರಿಷತ್ ಸಮಾವೇಶವನ್ನು ಕರೆಯಲಾಯಿತು
- 1935ರ ಭಾರತ ಸರ್ಕಾರ ಶಾಸನವನ್ನು ಜಾರಿಗೊಳಿಸಿತು

**೧೨ ಕ್ವಿಟ್ ಇಂಡಿಯಾ ಚಳುವಳಿಯನ್ನು ವಿವರಿಸಿರಿ**

- • ಕ್ರಿಪ್ಸ ಆಯೋಗ ನೀಡಿದ ಸಲಹೆಗಳನ್ನು ತಿರಸ್ಕರಿಸಿದ ಕಾಂಗ್ರೆಸ್ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡಿತು
- • ಬ್ರಿಟಿಷರೆ ಭಾರತ ಬಿಟ್ಟು ತೊಲಗಿ ಎನ್ನುವುದು ಈ ಚಳುವಳಿಯ ಆಶಯವಾಗಿತ್ತು
- • ಗಾಂಧೀಜಿಯವರು ದೇಶಭಾಂದವರಿಗೆ ಮಾಡು ಇಲ್ಲವೆ ಮಡಿ ಎಂದು ಕರೆ ನೀಡಿದರು
- • ಗಾಂಧೀಜಿ, ನೆಹರು , ಪಟೇಲ್‌ರಂತಹ ನಾಯಕರನ್ನು ಬಂಧಿಸಿ ಜೈಲಿನಲ್ಲಿಟ್ಟರು
- • ಕಾಂಗ್ರೆಸ್ ನಾಯಕರ ಬಂಧನದಿಂದ ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು
- • ಹೊಸ ನಾಯಕರುಗಳ ಉದಯಕ್ಕೆ ಈ ಹೋರಾಟ ಎಡೆ ಮಾಡಿಕೊಟ್ಟಿತು
- • ಜಯಪ್ರಕಾಶ ನಾರಾಯಣ ಚಳುವಳಿಯ ನೇತೃತ್ವ ವಹಿಸಿಕೊಂಡರು
- • ಸಮಾಜವಾದಿಗಳು ದಿ ಫ್ರೀಡಂ ಸ್ಟ್ರಗಲ್ ಫ್ರಾಂಟ್ ಎಂಬ ದಾಖಲೆ ಮೂಲಕ ತಮ್ಮ ಕಾರ್ಯತಂತ್ರವನ್ನು ಅನುಷ್ಟಾನಕ್ಕೆ ತಂದರು
- • ಕಾರ್ಮಿಕರಿಗೆ ತರಬೇತಿಯನ್ನು ನೀಡಿ, ಹಣವನ್ನು ಕ್ರೋಢಿಕರಿಸಿ ದಿಕ್ಕೆಟ್ಟ ಹೋರಾಟಕ್ಕೆ ದಿಕ್ಕು ಕೊಟ್ಟರು
- • ಜನತೆಗೆ ಹೋರಾಟದಲ್ಲಿ ಭಾಗವಹಿಸಲು ಕರೆ ನೀಡಿದರು

**೧೩. ಜಯಪ್ರಕಾಶ ನಾರಾಯಣ**

- ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕಾಂಗ್ರೆಸ್ ನಾಯಕರ ಬಂಧನದಿಂದ ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು
- • ಹೊಸ ನಾಯಕರುಗಳ ಉದಯಕ್ಕೆ ಈ ಹೋರಾಟ ಎಡೆ ಮಾಡಿಕೊಟ್ಟಿತು
- • ಜಯಪ್ರಕಾಶ ನಾರಾಯಣ ಚಳುವಳಿಯ ನೇತೃತ್ವ ವಹಿಸಿಕೊಂಡರು
- ಕಾಂಗ್ರೇಸ್ ಸಮಾಜವಾದಿ ಬಣದ ಪ್ರಮುಖ ನಾಯಕರಾಗಿದ್ದರು
- ದೇಶದಲ್ಲಿ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ತೊಡಗಿದರು
- ಸಮಾಜವಾದಿಗಳು ದಿ ಫ್ರೀಡಂ ಸ್ಟ್ರಗಲ್ ಫ್ರಾಂಟ್ ಎಂಬ ದಾಖಲೆ ಮೂಲಕ ತಮ್ಮ ಕಾರ್ಯತಂತ್ರವನ್ನು ಅನುಷ್ಟಾನಕ್ಕೆ ತಂದರು
- ಕಾರ್ಮಿಕರಿಗೆ ತರಬೇತಿಯನ್ನು ನೀಡಿದರು
- ಜನತೆಗೆ ಹೋರಾಟದಲ್ಲಿ ಭಾಗವಹಿಸಲು ಕರೆ ನೀಡಿದರು
- ಹಣವನ್ನು ಕ್ರೋಢಿಕರಿಸಿ ದಿಕ್ಕೆಟ್ಟ ಹೋರಾಟಕ್ಕೆ ದಿಕ್ಕು ಕೊಟ್ಟರು

**೧೪ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಮತ್ತು ಕಾರ್ಮಿಕರ ಪ್ರತಿಭಟನೆಯನ್ನು ವಿವರಿಸಿರಿ**

**ರೈತರ ಪ್ರತಿಭಟನೆ**

- • ಜಮೀನ್ದಾರರು ಮತ್ತು ಪ್ಲಾಂಟರ್‌ಗಳ ವಿರುದ್ದ ರೈತರು ಹಲವು ಕಡೆ ದಂಗೆ ನಡೆಸಿದರು
- • ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯನ್ನು ವಿರೋಧಿಸಿದರು
- • ಭೂಕಂದಾಯ ವಿರುದ್ಧ ಹರತಾಳ ನಡೆಸಿದರು
- • ಗಾಂಧೀಜಿಯವರು ಸತ್ಯಾಗ್ರಹದ ಮೂಲಕ ಬ್ರಿಟಿಷರ ಮನವೊಲಿಸಿ ತೆರಿಗೆಯನ್ನು ರದ್ದುಪಡಿಸಿದರು
- • ಕಾಂಗ್ರೇಸ್ ರಾಷ್ಟ್ರೀಯ ಹೋರಾಟದ ಭಾಗವಾಗಿ ರೈತರನ್ನು ಸಂಘಟಿಸು ಪ್ರಯತ್ನ ಮಾಡಿತು
- • ಚಂಪಾರಣ್ಯ, ಖೇಡಾ ಮೊದಲಾದ ಪ್ರದೇಶಗಳ ರೈತ ಕಾರ್ಯಾಚರಣೆಯಲ್ಲಿ ಗಾಂಧೀಜಿಯವರ ಪ್ರಭಾವವಿತ್ತು
- • ತೇಭಾಗ್, ಮಲಬಾರ್ ರೈತರು; ಜಮೀನ್ದಾರರು ಮತ್ತು ಬ್ರಿಟಿಷರ ವಿರುದ್ದ ಬಂಡೆದ್ದರು

- ಅಸಹಕಾರ, ಕರನಿರಾಕರಣೆ ಮತ್ತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ರೈತರ ಸಮಸ್ಯೆಗಳು ಬೆರೆತವು
- ರೈತರ ಹೋರಾಟಗಳು ಕಿಸಾನ್ ಸಭಾದ ಅಡಿಯಲ್ಲಿ ಸಂಘಟಿತವಾದವು
- ಹೋರಾಟಗಳು ಕೆಲವೊಮ್ಮೆ ಕಾಂಗ್ರೆಸ್‌ನೊಂದಿಗೆ ಮತ್ತು ವಿರುದ್ದವಾದ ನಿಲುವನ್ನು ಹೊಂದುತ್ತದ್ದವು
- ತೆಲಂಗಾಣ, ಬಂಗಾಳ ಮತ್ತು ಮಹಾರಾಷ್ಟ್ರದಲ್ಲಿ ರೈತರು ಚಳುವಳಿ ನಡೆಸಿದರು

**ಕಾರ್ಮಿಕರ ಬಂಡಾಯ**

- ಕಾರ್ಮಿಕರ ಹೋರಾಟವು ಕಲ್ಕತ್ತಾದಲ್ಲಿ ಆರಂಭವಾಯಿತು
- ಕಲ್ಕತ್ತಾದಲ್ಲಿ ಸೆಣಬು, ಬಟ್ಟೆ, ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾದರು
- ರೈಲ್ವೆ ಕೂಲಿಗಳು ನಿಲ್ದಾಣದಲ್ಲಿ ಮುಷ್ಕರ ನಡೆಸಿ ಬ್ರಿಟಿಷ್ ಅಧಿಕಾರಿಗಳ ವಿರುದ್ದ ಘೋಷಣೆ ಕೂಗಿದರು
- ಕಲ್ಕತ್ತಾದಲ್ಲಿ ಪ್ರಿಂಟರ್ಸ್ ಯುನಿಯನ್‌ನವರು, ಬಾಂಬೆಯಲ್ಲಿ ಬಟ್ಟೆ ಗಿರಣಿ ಕಾರ್ಮಿಕರು ರಾಷ್ಟ್ರೀಯ ಜಾಗೃತಿ ಉಂಟು ಮಾಡಿದರು
- ಮದ್ರಸ್‌ನಲ್ಲಿ ಲೇಬರ್ ಸ್ಥಾಪನೆಗೊಂಡಿತು
- ಕಾರ್ಮಿಕ ಸಂಘಟನೆಗಳು ಸ್ಥಾಪನೆಗೊಂಡವು
- ಕಾಂಗ್ರೆಸ್ ಕಾರ್ಮಿಕ ಸಂಘಟನೆಗಳ ಇಂತಹ ಚಳುವಳಿಗೆ ಬೆಂಬಲ ನೀಡಿತು

**೧೫ ಬುಡಕಟ್ಟು ಬಂಡಾಯವನ್ನು ವಿವರಿಸಿರಿ**

- ಬ್ರಿಟಿಷರು ಜಾರಿಗೆ ತಂದ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗಳಿಗೆ ಪ್ರೇರಣೆಯಾದವು
- ಸಂತಾಲರ ದಂಗೆ ಮತ್ತು ಮುಂಡ ಚಳುವಳಿಗಳು ಪ್ರಮುಖವಾಗಿವೆ
- ಸಂತಾಲರ ಬುಡಕಟ್ಟು ದಂಗೆಯನ್ನು ಭಾರತದ ಆದ್ಯ ಹೋರಾಟವೆಂದು ಗುರುತಿಸಲಾಗಿದೆ
- ಬ್ರಿಟಿಷರು ಜಾರಿಗೆ ತಂದ ಖಾಯಂ ಜಮೀನ್ದಾರಿ ಪದ್ಧತಿಯಿಂದ ಇವರು ನಿರ್ಗತಿಕರಾದರು
- ಇವರ ಭೂಮಿ ಜಮೀನ್ದಾರರ ಕೈಸೇರಿತು
- ಬಂಗಾಳಿ ಜಮೀನ್ದಾರರು, ಲೇವಾದೇವಿಗಾರರು ಮತ್ತು ಕಂಪನಿ ಸರ್ಕಾರದ ನಿರಂತರ ಶೋಷಣೆಗೆ ಒಳಗಾದರು
- ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ ಜಮೀನ್ದಾರರು ಮತ್ತು ಮಹಾಜನರನ್ನು ಲೂಟಿ ಮಾಡಿದರು
- ದಂಗೆ ಬಾರಹತ್, ಭಾಗತ್‌ಪುರ ಮತ್ತು ರಾಜಮಹಲಗಳಲ್ಲಿ ತೀವ್ರವಾಯಿತು
- ಸಂತಾಲರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೇನೆಯನ್ನು ಬಳಸಿಕೊಂಡರು
- ಇವರ ದಂಗೆ ಕೊನೆಗೊಂಡರೂ ಅವರ ಸ್ಪೂರ್ತಿ ಮುಂದಿನ ಹೋರಾಟಕ್ಕೆ ಪ್ರೇರಣೆಯಾಯಿತು

**೧೬ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಸ್ ಚಂದ್ರ ಬೋಸ್‌ರ ಪಾತ್ರವನ್ನು ವಿವರಿಸಿರಿ**

- ಇವರು ನೇತಾಜಿ ಎಂದು ಜನಪ್ರೀಯರಾಗಿದ್ದರು
- ಜವಾಹರ್‌ಲಾಲ್ ನೆಹರೂರವರೊಂದಿಗೆ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ಅಧ್ಯಕ್ಷರಾದರು
- ಬ್ರಿಟಿಷರ ಯುದ್ದ ನೀತಿಗೆ ಸಂಬಂಧಿಸಿದಂತೆ ಗಾಂಧಿಯವರೊಂದಿಗಿನ ಭಾಂದವ್ಯದಲ್ಲಿ ಬಿರುಕು ಮೂಡಿತು
- ಕಾಂಗ್ರೆಸ್‌ನಿಂದ ಹೊರಬಂದು ಫಾರ್ವರ್ಡ್‌ಬ್ಲಾಕ್ ಎಂಬ ಹೊಸ ಪಕ್ಷವನ್ನು ಕಟ್ಟಿದರು
- ಬ್ರಿಟಿಷರ ಯುದ್ಧ ತಯಾರಿ ಹಾಗೂ ಜಾಗತಿಕ ಯುದ್ಧದಲ್ಲಿ ಭಾರತ ಪಾಲ್ಗೊಳ್ಳುವಿಕೆಯನ್ನು ವಿರೋಧಿಸಿ ಗೃಹ ಬಂಧನಕ್ಕೆ ಒಳಗಾದರು
- ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು
- ಹಿಟ್ಲರನನ್ನು ಭೇಟಿಯಾಗಿ ಭಾರತದ ಸ್ವಾತಂತ್ರ್ಯಯಕ್ಕಾಗಿ ಸಹಾಯ ಯಾಚಿಸಿದರು
- ಜರ್ಮನಿಯಿಂದ ಆಜಾದ್ ಹಿಂದ್ ರೇಡಿಯೋ ಮೂಲಕ ತಮ್ಮ ಭಾಷಣ ಪ್ರಸಾರ ಮಾಡಿದರು
- ಟೋಕಿಯೋದಲ್ಲಿ ಭಾರತೀಯ ರಾಷ್ಟ್ರೀಯ ಸೇನೆಯ ಮುಖಂಡತ್ವವನ್ನು ವಹಿಸಿದರು
- ದೆಹಲಿ ಚಲೋ ಎಂದು ಕರೆಕೊಟ್ಟರು
- ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ ಎಂದು ಕರೆಯನ್ನಿತ್ತರು
- ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮರಣ ಹೊಂದಿದರು

**೧೭ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಐಎನ್‌ಎನ ಪಾತ್ರವನ್ನು ವಿವರಿಸಿರಿ**

- ಗೃಹ ಬಂಧನದಿಂದ ತಪ್ಪಿಸಿಕೊಂಡ ಸುಭಾಸ್‌ರು ಹಿಟ್ಲರನನ್ನು ಭೇಟಿಯಾಗಿ ಸಹಾಯ ಯಾಚಿಸಿದರು
- ಜರ್ಮನಿಯಲ್ಲಿ ಭಾರತೀಯ ಯುದ್ಧ ಕೈದಿಗಳನ್ನು ಸಂಘಟಿಸಿ ಆಜಾದ್ ಹಿಂದ್ ರೇಡಿಯೊ ಭಾಷಣ ಮಾಡಿದರು
- ರಾಸ ಬಿಹಾರಿ ಬೋಸ್‌ರು ಟೋಕಿಯೊದಲ್ಲಿ ಸ್ಥಾಪಿಸಿದ್ದ ಇಂಡಿಯನ್ ಇಂಡಿಪೆಂಡೆಂಟ್ ಲೀಗ್‌ನ್ನು ಭಾರತೀಯ ರಾಷ್ಟ್ರೀಯ ಸೇನೆ ಎಂದು ಕರೆದರು
- ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ ಎಂದು ಕರೆನೀಡಿದರು
- ಬೋಸ್‌ರು ದೆಹಲಿ ಚಲೋ ಎಂಬ ಘೋಷಣೆಯನ್ನು ನೀಡಿದರು
- ಸುಭಾಸ್‌ರು ರಂಗೂನ್ ಮೂಲಕ ದೆಹಲಿಯನ್ನು ವಶಪಡಿಸಿಕೊಳ್ಳುವ ಯೋಜನೆಯನ್ನು ರೂಪಿಸಿದರು

- ಸುಭಾಸ್‌ರ ಆದೇಶದಂತೆ ಹೋರಾಟ ಬರ್ಮಾದ ಗಡಿಯ ಮೂಲಕ ಆರಂಭವಾಯಿತು
- ಸುಭಾಸ್ ಚಂದ್ರ ಬೋಸ್‌ರು ಆಕಸ್ಮಿಕ ವಿಮಾನ ಅಪಘಾತದಲ್ಲಿ ಮಡಿದರು
- ಬರ್ಮಾರ ರಂಗೂನ್ ಬ್ರಿಟಿಷರ ವಶವಾಯಿತು
- ಗಾಂಧೀಜಿ ಮತ್ತು ಕಾಂಗ್ರೆಸ್ ನಾಯಕರ ಶ್ರಮದಿಂದ ಐಎನ್‌ಎ ಸೈನಿಕರು ಬಂಧಮುಕ್ತರಾದರು

**೧೮ ಭಾರತದ ಸ್ವಾತಂತ್ರ ಹೋರಾಟದಲ್ಲಿ ಡಾ॥ ಬಿ ಆರ್ ಅಂಬೇಡ್ಕರರ ಪಾತ್ರವನ್ನು ತಿಳಿಸಿರಿ**

- ಸಾಮಾಜಿಕ ಸಮಾನತೆಯಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನವೆಂದು ನಂಬಿದ್ದರು
- ಜಾತಿ ವ್ಯವಸ್ಥೆಯ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು
- ಮಹಾಡ್ ಮತ್ತು ಕಾಲಾರಾಂ ದೇವಾಲಯ ಚಳುವಳಿಗಳನ್ನು ರೂಪಿಸಿದರು
- ದುಂಡು ಮೇಜಿನ ಸಮ್ಮೇಳನಹಳಲ್ಲಿ ಭಾಗವಹಿಸಿ ಅಮೂಲ್ಯ ಸಲಹೆಗಳನ್ನು ನೀಡಿದರು
- ಬಹಿಷ್ಕೃತ ಹಿತಕಾರಿಣಿ ಸಭಾ ಎಂಬ ಸಂಘಟನೆಯನ್ನು ಮತ್ತು ಸ್ವತಂತ್ರ ಕಾರ್ಮಿಕ ಪಕ್ಷ ಎಂಬ ಪಕ್ಷವನ್ನು ಕಟ್ಟಿದರು
- ಪ್ರಭುದ್ಧ ಭಾರತ, ಜನತಾ, ಮೂಕನಾಯಕ ಮತ್ತು ಬಹಿಷ್ಕೃತ ಭಾರತ ಎಂಬ ಪತ್ರಿಕೆಗಳನ್ನು ಹೊರಡಿಸಿದರು
- ಸಂವಿಧಾನದ ಕರಡು ರಚನಾ ಸಮಿತಿ ಅಧ್ಯಕ್ಷರಾದರು
- ಸಂವಿಧಾನದಲ್ಲಿ ಸಮಾನತೆಯನ್ನು ಪ್ರತಿಪಾದಿಸಿ ಅಸ್ಪೃಶ್ಯತಾ ಆಚರಣೆ ವಿರುದ್ಧ ಕಾನೂನಿನ ರಕ್ಷಣೆಯನ್ನು ಒದಗಿಸಿದರು
- ಸ್ವತಂತ್ರ ಭಾರತದಲ್ಲಿ ಕಾನೂನು ಮಂತ್ರಿಯಾಗಿ ಕಾರ್ಯ ನಿರ್ವಹಿಸಿದರು
- ಇವರಿಗೆ ಮರಣೋತ್ತರವಾಗಿ ಭಾರತರತ್ನ ಪ್ರಶಸಿಯನ್ನು ನೀಡಿ ಗೌರವಿಸಲಾಗಿದೆ

**೧೯ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಜವಾಹರಲಾಲ್ ನೆಹರು ಅವರ ಪಾತ್ರವನ್ನು ತಿಳಿಸಿರಿ**

- ಹೋಂರೂಲ್ ಚಳುವಳಿಯೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸಿದರು
- ಅಸಹಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು
- ಲಾಹೋರ್ ಅಧಿವೇಶನದ ಅಧ್ಯಕ್ಷರಾಗಿದ್ದರು
- ಸಂಪೂರ್ಣ ಸ್ವರಾಜ್ಯದ ಗುರಿಯನ್ನು ಘೋಷಿಸಿದರು
- ಇವರು ಕಮ್ಯುನಿಷ್ಟ ಸಿದ್ಧಾಂತಗಳಿಂದ ಪ್ರಭಾವ ಹೊಂದಿದ್ದರು
- ಸುಭಾಸರ ಜೊತೆಗೂಡಿ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು
- ಕಾಂಗ್ರೆಸ್ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದ ಸಾಮ್ರಾಜ್ಯಶಾಹಿ ಯುದ್ಧದಿಂದ ದೂರ ಉಳಿಯಬೇಕೆಂದು ಸಾರಿದರು
- ಚರಕ ಮತ್ತು ಹರಿಜನ ಚಳುವಳಿಗಳು ಅಷ್ಟೇನೂ ಪರಿಣಾಮಕಾರಿ ಯಲ್ಲವೆಂದು ಸಾರಿದರು
- ಸಮಾಜವಾದಿ ಮತ್ತು ಕಮ್ಯುನಿಷ್ಟ ವಿಚಾರಗಳ ಬಗ್ಗೆ ಮೃದು ದೋರಣೆಯನ್ನು ತಳೆದರು
- ಕಾಂಗ್ರೇಸ್ ಪೂರ್ಣ ಪ್ರಜಾಪ್ರಭುತ್ವಕ್ಕಾಗಿ ನಿಂತಿದೆ ಹಾಗೂ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತದೆ ಸಮಾಜವಾದಕ್ಕಲ್ಲ ಎಂದರು

**೨೦ ನೆಹರುರವರು ಪ್ರಧಾನಿಯಾದ ನಂತರ ಮಾಡಿದ ಸಾಧನೆಗಳನ್ನು ವಿವರಿಸಿರಿ**

- ನವಭಾರತದ ಶಿಲ್ಪಿ ಎಂದು ಹೆಸರಾಗಿದ್ದರು
- ಭಾರತದ ಮೊದಲ ಪ್ರಧಾನಮಂತ್ರಿಯಾದರು
- ಪಟೇಲರ ನೇತೃತ್ವದಲ್ಲಿ ದೇಶಿ ಸಂಸ್ಥಾನಗಳ ವಿಲಿನೀಕರಣಕ್ಕೆ ಕಾರಣರಾದರು
- ಭಾಷಾವಾರು ಪ್ರಾಂತಗಳ ರಚನೆ ಮೂಲಕ ಪ್ರಜಾಪ್ರಭುತ್ತಕ್ಕೆ ತಳಹದಿಯನ್ನು ಹಾಕಿದರು
- ಬಂಡವಾಳ ಹಾಗೂ ಸಮಾಜವಾದಿ ತತ್ವಗಳನ್ನೊಳಗೊಂಡ ಮಿಶ್ರ ಆರ್ಥಿಕ ನೀತಿಯನ್ನು ಜಾರಿಗೆ ತಂದರು
- ಬೃಹತ್ ಕೈಗಾರಿಕೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯವೆಂದು ನಂಬಿದ್ದರು
- ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯ ಕನಸನ್ನು ಕಂಡರು
- ಪಂಚಶೀಲ ತತ್ವ ಮತ್ತು ಅಲಿಪ್ತ ನೀತಿಯನ್ನು ಪ್ರತಿಪಾದಿಸಿದರು
- ಶಕ್ತಿ ರಾಜಕಾರಣದಿಂದ ದೂರವುಳಿದು ಶಾಂತಿ ಸಹಬಾಳ್ವೆಯ ಸೂತ್ರಗಳನ್ನು ಅನುಷ್ಟಾನಕ್ಕೆ ತಂದರು

## • ಸಾರ್ವಜನಿಕ ಆಡಳಿತ ಒಂದು ಪರಿಚಯ

- "ಕಾನೂನಿನ ಸಮಗ್ರ ಮತ್ತು ಕ್ರಮಬದ್ಧ ಜಾರಿಗೊಳಿಸುವಿಕೆಯೇ ಸಾರ್ವಜನಿಕ ಆಡಳಿತವಾಗಿರುತ್ತದೆ." – **ವುಡ್ರೋವಿಲ್ಸನ್**
- "ಸಾರ್ವಜನಿಕ ನೀತಿಯನ್ನು ಜಾರಿಗೊಳಿಸುವ ಸಾಮೂಹಿಕ ಯತ್ನದ ಸಂಯೋಜನೆಯೇ ಸಾರ್ವಜನಿಕ ಆಡಳಿತ" – **ಫಿಫ್‌ನರ್**
- "ಸಾರ್ವಜನಿಕ ಆಡಳಿತವು ಸರ್ಕಾರದ ಕಾರ್ಯಗಳನ್ನು ನಿರ್ವಹಿಸುವ ಕಾರ್ಯಾಂಗ ಶಾಖೆಗೆ ಸಂಬಂಧಿಸಿದೆ." – **ಲೂಥರ್ ಗುಲಿಕ್**
- "ವ್ಯಕ್ತಿ, ವಸ್ತು ಮತ್ತು ವಿಧಾನಗಳ ವ್ಯವಸ್ಥಿತ ಸಂಯೋಜನೆಯೇ ಸಾರ್ವಜನಿಕ ಆಡಳಿತ" – **ಎಫ್.ಎಂ ಮಾರ್ಕ್ಸ್**
- "ಆಡಳಿತವಿಲ್ಲದ ಸರ್ಕಾರ ಕೇವಲ ಒಣ ಹರಟೆಯ ಕೂಟವಾಗುವುದು" – **ಪಾಲ್ ಅಪಲ್‌ಬಿ**
- "ನೇಮಕಾತಿಯು ಆಡಳಿತದ ರಚನೆಯ ಅಡಿಗಲ್ಲಾಗಿರುತ್ತದೆ" – **ಓ. ಗ್ಲೆನ್ ಸ್ಟಾಲ್**

- **ಆಡಳಿತ** – ಜನರಿಗೆ ಸೇವೆ ಸಲ್ಲಿಸುವ, ಜನರ ಬಗೆಗೆ ಕಾಳಜಿ ವಹಿಸುವ ಮತ್ತು ಜನರಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಿರ್ವಹಿಸುವ ಪ್ರಕ್ರಿಯೆ.
- **ಸಾಮಾಜಿಕ ಭದ್ರತಾ ನೀತಿಗಳು** – ಜನರ ಏಳಿಗೆಗಾಗಿ ಸರ್ಕಾರ ಅನುಷ್ಠಾನಗೊಳಿಸುವ ನೀತಿಗಳು.
- **ನೇಮಕಾತಿ** – ಸೂಕ್ತ ಹುದ್ದೆಗೆ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ.
- **ನೇರ ನೇಮಕಾತಿ** – ಅರ್ಹ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನಿಶ್ಚಿತ ರೀತಿಯಲ್ಲಿ ಆಯ್ಕೆ ಮಾಡುವುದು.
- **ಪರೋಕ್ಷ ನೇಮಕಾತಿ / ಬಡ್ತಿ** – ಈಗಾಗಲೇ ಸರ್ಕಾರಿ ಸೇವೆಯಲ್ಲಿರುವವರನ್ನು ಮೇಲ್ದರ್ಜೆಯ ಹುದ್ದೆಗಳಿಗೆ ನೇಮಕ ಮಾಡುವುದು.

1. **ಸಾರ್ವಜನಿಕ ಆಡಳಿತದ ಅಧ್ಯಯನದ ಬೆಳವಣಿಗೆ ವಿಶೇಷವಾಗಿ ಪ್ರಾರಂಭವಾದುದು**
   ಎ) ಭಾರತದಲ್ಲಿ ಬಿ) ಇಂಗ್ಲೆಂಡ್‌ನಲ್ಲಿ ಸಿ) ರಷ್ಯಾದಲ್ಲಿ ಡಿ) ಅಮೇರಿಕಾದಲ್ಲಿ
2. **ಸಾರ್ವಜನಿಕ ಆಡಳಿತದ ಪಿತಾಮಹ (ಅಭ್ಯಾಸ ಪ್ರಶ್ನೆ )**
   ಎ) ಲೂಥರ್ ಗುಲಿಕ್ ಬಿ) ವುಡ್ರೋವಿಲ್ಸನ್ ಸಿ) ಅಲೆಕ್ಸಾಂಡರ್ ಹ್ಯಾಮಿಲ್ಟನ್ ಡಿ) ಹರ್ಬರ್ಟ್ ಎ ಸೈಮನ್
3. **1812ರಲ್ಲಿ ಸಾರ್ವಜನಿಕ ಆಡಳಿತ ಪದವನ್ನು ಪ್ರಪ್ರಥಮ ಬಾರಿಗೆ ಬಳಸಿದವರು (ಅಭ್ಯಾಸ ಪ್ರಶ್ನೆ )**
   ಎ) ಲೂಥರ್ ಗುಲಿಕ್ ಬಿ) ವುಡ್ರೋವಿಲ್ಸನ್ ಸಿ) ಅಲೆಕ್ಸಾಂಡರ್ ಹ್ಯಾಮಿಲ್ಟನ್ ಡಿ) ಹರ್ಬರ್ಟ್ ಎ ಸೈಮನ್
4. **ಸಾರ್ವಜನಿಕ ಆಡಳಿತದ ವ್ಯಾಪ್ತಿಯ ಕುರಿತಂತೆ ಪೋಸ್ಡ್‌ಕಾರ್ಬ್ ದೃಷ್ಟಿಕೋನವನ್ನು ಪ್ರತಿಪಾದಿಸಿದವರು**
   ಎ) ಲೂಥರ್ ಗುಲಿಕ್ ಬಿ) ವುಡ್ರೋವಿಲ್ಸನ್
   ಸಿ) ಅಲೆಕ್ಸಾಂಡರ್ ಹ್ಯಾಮಿಲ್ಟನ್ ಡಿ) ಹರ್ಬರ್ಟ್‌ಎ ಸೈಮನ್
5. **ಕೇಂದ್ರ ಲೋಕಸೇವಾ ಆಯೋಗದ ಸದಸ್ಯರನ್ನು ----------- ನೇಮಕ ಮಾಡುತ್ತಾರೆ. (ಅಭ್ಯಾಸ ಪ್ರಶ್ನೆ )**
   ಎ) ರಾಷ್ಟ್ರಾಧ್ಯಕ್ಷರು ಬಿ) ಪ್ರಧಾನಮಂತ್ರಿಗಳು ಸಿ) ಸಂಸತ್ತು ಡಿ) ರಾಜ್ಯಪಾಲರು
6. **ಕೇಂದ್ರ ಸರ್ಕಾರಕ್ಕೆ ಬಾಹ್ಯ ಆಕ್ರಮಣಗಳಿಂದ ರಾಜ್ಯಗಳನ್ನು ರಕ್ಷಿಸುವ ಹೊಣೆಗಾರಿಕೆ ನೀಡಿರುವ ಸಂವಿಧಾನದ ವಿಧಿ**
   ಎ) 315 ಬಿ) 355 ಸಿ) 356 ಡಿ) 371
7. **ದೇಶದ ಯಾವುದೇ ಭಾಗ ನೈಸರ್ಗಿಕ ವಿಕೋಪಗಳಿಗೆ ಒಳಗಾದಾಗ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದು**
   ಎ) ಕೇಂದ್ರೀಯ ಮೀಸಲು ಪೊಲೀಸ್ ಪಡೆ
   ಬಿ) ಗಡಿಭದ್ರತಾ ಪಡೆ
   ಸಿ) ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ
   ಡಿ) ರೈಲ್ವೆ ರಕ್ಷಣಾ ಪಡೆ
8. **ಸಂವಿಧಾನದ ------------ ವಿಧಿಯು ರಾಜ್ಯ ಲೋಕಸೇವಾ ಆಯೋಗದ ಕುರಿತು ತಿಳಿಸುತ್ತದೆ. (ಅಭ್ಯಾಸ ಪ್ರಶ್ನೆ )**
   ಎ) 310 ಬಿ) 315 ಸಿ) 320 ಡಿ) 325
9. **ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಛೇರಿ ಇರುವುದು**
   ಎ) ಮೈಸೂರು ಬಿ) ಬೆಳಗಾವಿ
   ಸಿ) ಬೆಂಗಳೂರು ಡಿ) ಕಲಬುರಗಿ
10. **ರಾಜ್ಯ ಪೊಲೀಸ್ ಇಲಾಖೆಯ ಮುಖ್ಯಸ್ಥರು**
    ಎ) ಪೊಲೀಸ್ ಮಹಾನಿರ್ದೇಶಕರು
    ಬಿ) ಡೈರೆಕ್ಟರ್ ಜನರಲ್ ಆಫ್ ಪೊಲೀಸ್
    ಸಿ) ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್
    ಡಿ) ಸೂಪರಿಂಟೆಂಡೆಂಟ್ ಆಫ್ ಪೊಲೀಸ್

1. **ಆಧುನಿಕ ರಾಜ್ಯವನ್ನು ಆಡಳಿತಾತ್ಮಕ ರಾಜ್ಯ ಎಂದು ಪರಿಗಣಿಸಲಾಗಿದೆ. ಏಕೆ?**
   - ಸಾರ್ವಜನಿಕ ಆಡಳಿತವು ರಾಜ್ಯ ವ್ಯವಸ್ಥೆಯ ಹೃದಯವಾಗಿದೆ.
   - ಸಾರ್ವಜನಿಕ ಆಡಳಿತ ಇಲ್ಲದ ರಾಜ್ಯದ ಕಲ್ಪನೆಯೇ ಅಸಾಧ್ಯವಾಗಿದೆ. ಆದ್ದರಿಂದ ಆಧುನಿಕ ರಾಜ್ಯವನ್ನು ಆಡಳಿತಾತ್ಮಕ ರಾಜ್ಯ ಎಂದು ಪರಿಗಣಿಸಲಾಗಿದೆ.
2. **ಸಾರ್ವಜನಿಕ ಆಡಳಿತವು ಪ್ರಸ್ತುತ ಅತ್ಯಗತ್ಯವಾಗಿದೆ. ಚರ್ಚಿಸಿ.(ಅಭ್ಯಾಸ ಪ್ರಶ್ನೆ )/ ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆಯನ್ನು ವಿವರಿಸಿ.**
   - ಸಾರ್ವಜನಿಕ ಆಡಳಿತವು ಸರ್ಕಾರದ ಆಧಾರ ಸ್ತಂಭವಾಗಿದೆ.
   - ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡಲು ಸೇವೆ ಸಲ್ಲಿಸುತ್ತದೆ.
   - ಕಾನೂನು ಮತ್ತು ನೀತಿಗಳನ್ನು ಅನುಷ್ಠಾನಗೊಳಿಸುತ್ತದೆ.
   - ಸಾಮಾಜಿಕ ಭದ್ರತೆಯನ್ನು ಧೃಡಪಡಿಸುತ್ತದೆ.
3. ಶಾಸಕಾಂಗ ಮತ್ತು ಕಾರ್ಯಾಂಗಕ್ಕೂ ಸಹಾಯ ಮಾಡುತ್ತದೆ.**ಸಾರ್ವಜನಿಕ ಆಡಳಿತವು ವ್ಯಕ್ತಿಯ ಹುಟ್ಟಿನಿಂದ ಮರಣದವರೆಗೆ ವ್ಯಾಪಕವಾಗಿ ಕಾರ್ಯನಿರ್ವಹಿಸುತ್ತದೆ. ಸಮರ್ಥಿಸಿ. (ಅಭ್ಯಾಸ ಪ್ರಶ್ನೆ )**
   - ಶಾಂತಿ ಹಾಗೂ ಸುವ್ಯವಸ್ಥೆಯನ್ನು ಕಾಪಾಡುವುದು.
   - ಜನರ ಪ್ರಾಣ ಹಾಗೂ ಆಸ್ತಿಯ ರಕ್ಷಣೆ ನೀಡುವುದು.
   - ನ್ಯಾಯ ಒದಗಿಸುವುದು.
   - ಶಿಕ್ಷಣ ನೀಡುವುದು.
   - ಉದ್ಯೋಗಾವಕಾಶ ಕಲ್ಪಿಸುವುದು.
   - ಅವಶ್ಯಕ ವಸ್ತುಗಳನ್ನು ಪೂರೈಸುವುದು.
   - ದೇಶ ರಕ್ಷಣೆ, ಆರ್ಥಿಕ ಸಮಾನತೆಯನ್ನು ಉಂಟುಮಾಡುವುದು.
4. **ಲೂಥರ್ ಗುಲಿಕ್‌ರವರ ದೃಷ್ಟಿಕೋನದಲ್ಲಿ ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ವಿವರಿಸಿ.**
   - ಲೂಥರ್ ಗುಲಿಕ್‌ರು ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು "ಪೋಸ್ಡ್‌ಕಾರ್ಬ್" (POSD CoRB) ಎಂಬ ಇಂಗ್ಲಿಷ್ ಪದದಲ್ಲಿಸೂಚಿಸಿದ್ದಾರೆ.P–ಯೋಜಿಸುವಿಕೆ (Planning)
   - O–ಸಂಘಟಿಸುವಿಕೆ (Organising)
   - S–ಸಿಬ್ಬಂದಿಗಳ ಪೂರೈಕೆ (Staffing)
   - D–ನಿರ್ದೇಶಿಸುವಿಕೆ (Directing)
   - Co–ಸಮನ್ವಯಗೊಳಿಸುವಿಕೆ (Co–ordinating)
   - R–ವರದಿ ನೀಡುವಿಕೆ (Reporting)

5. B–ಆಯವ್ಯಯ ಸಿದ್ದಪಡಿಸುವಿಕೆ (Budgeting)**ನೇಮಕಾತಿ ವಿಧಗಳ ಕುರಿತು ವಿವರಿಸಿ. (ಅಭ್ಯಾಸ ಪ್ರಶ್ನೆ) / ಪ್ರತ್ಯಕ್ಷ ನೇಮಕಾತಿಯು ಪರೋಕ್ಷ ನೇಮಕಾತಿಗಿಂತ ಭಿನ್ನವಾಗಿದೆ. ಹೇಗೆ?**

ಪ್ರತ್ಯಕ್ಷ ನೇಮಕಾತಿ:

- ಪ್ರತ್ಯಕ್ಷ ನೇಮಕಾತಿಯನ್ನು ನೇರ ನೇಮಕಾತಿ ಎಂದೂ ಕರೆಯುತ್ತಾರೆ.
- ಅರ್ಹ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನಿಶ್ಚಿತ ರೀತಿಯಲ್ಲಿ ಆಯ್ಕೆ ಮಾಡುವುದು.
- ಅಭ್ಯರ್ಥಿಗಳು ಕೆಲವು ಸಾಮಾನ್ಯ ಮತ್ತು ವಿಶೇಷ ಅರ್ಹತೆಗಳನ್ನು ಹೊಂದಿರಬೇಕು.
- ಜನಪ್ರಿಯ ಹಾಗೂ ವೈಜ್ಞಾನಿಕ ವಿಧಾನವಾಗಿದೆ.

ಪರೋಕ್ಷ ನೇಮಕಾತಿ:

- ಪರೋಕ್ಷ ನೇಮಕಾತಿಯನ್ನು ಆಂತರಿಕ ನೇಮಕಾತಿ ಎಂದೂ ಕರೆಯುವರು.
- ಈಗಾಗಲೇ ಸರ್ಕಾರಿ ಸೇವೆಯಲ್ಲಿರುವವರನ್ನು ಮೇಲ್ದರ್ಜೆಯ ಹುದ್ದೆಗಳಿಗೆ ನೇಮಕ ಮಾಡುವುದು.
- ನಿಗಧಿತ ವಿದ್ಯಾರ್ಹತೆ ಮತ್ತು ಸೇವಾ ಹಿರಿತನವನ್ನು ಹೊಂದಿರಬೇಕು.
- ಪದೋನ್ನತಿ ಮತ್ತು ಬಡ್ತಿಯ ವಿಧಾನವಾಗಿದೆ.

6. **ಕೇಂದ್ರ ಲೋಕಸೇವಾ ಆಯೋಗದ ರಚನೆಯನ್ನು ವಿವರಿಸಿ.**

- ಸಂವಿಧಾನದ ವಿಧಿ 315ರ ಅಡಿಯಲ್ಲಿ ಸ್ಥಾಪಿತವಾಗಿರುವ ಸಂವಿಧಾನಾತ್ಮಕ ಸಂಸ್ಥೆಯಾಗಿದೆ.
- ಈ ಆಯೋಗದಲ್ಲಿ ಒಬ್ಬರು ಅಧ್ಯಕ್ಷರು ಮತ್ತು 10 ಜನ ಸದಸ್ಯರು ಇರುತ್ತಾರೆ.
- ಇವರುಗಳನ್ನು ರಾಷ್ಟ್ರಾಧ್ಯಕ್ಷರು ನೇಮಕ ಮಾಡುತ್ತಾರೆ.
- ಇವರ ಅಧಿಕಾರಾವಧಿಯು ಆರು ವರ್ಷಗಳು ಅಥವಾ 65 ವರ್ಷಗಳ ವಯೋಮಿತಿಯಾಗಿದೆ.

7. **ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳನ್ನು ಪಟ್ಟಿ ಮಾಡಿರಿ.**

- ಕೇಂದ್ರ ಸರ್ಕಾರದ 'ಎ' ಮತ್ತು 'ಬಿ' ವೃಂದದ ಹುದ್ದೆಗಳಿಗೆ ನೇಮಕ ಮಾಡಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವುದು.
- ನೇರ ನೇಮಕಾತಿಗೆ ವ್ಯಕ್ತಿತ್ವ ಪರೀಕ್ಷೆಯನ್ನು ನಡೆಸುವುದು.

11. **ಕರ್ನಾಟಕ ಲೋಕಸೇವಾ ಆಯೋಗದ ರಚನೆಯನ್ನು ವಿವರಿಸಿ.**

- ಸಂವಿಧಾನದ 315ನೇ ವಿಧಿಯ಼ಂತೆ 18.05.1951ರಂದು ಸ್ಥಾಪಿಸಲ್ಪಟ್ಟಿದೆ.
- ಈ ಆಯೋಗದಲ್ಲಿ ಒಬ್ಬರು ಅಧ್ಯಕ್ಷರು ಮತ್ತು 11 ಜನ ಸದಸ್ಯರು ಇರುತ್ತಾರೆ.
- ಇವರುಗಳನ್ನು ರಾಜ್ಯಪಾಲರು ನೇಮಿಸುತ್ತಾರೆ.
- ಇವರ ಅಧಿಕಾರಾವಧಿಯು ಆರು ವರ್ಷಗಳು ಅಥವಾ 62 ವರ್ಷಗಳ ವಯೋಮಿತಿಯಾಗಿದೆ.

12. **ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯಗಳನ್ನು ಪಟ್ಟಿ ಮಾಡಿರಿ.**

- ರಾಜ್ಯ ಸರ್ಕಾರಿ ಸೇವೆಗೆ ಪತ್ರಾಂಕಿತ ಅಧಿಕಾರಿಗಳನ್ನು ನೇಮಕ ಮಾಡುವುದು.
- ಕೆಲವು ಹುದ್ದೆಗಳಿಗೆ ಅಭ್ಯರ್ಥಿಗಳ ವ್ಯಕ್ತಿತ್ವ ಪರೀಕ್ಷೆ ನಡೆಸುವುದು.
- ಸರ್ಕಾರಿ ನೌಕರರಿಗೆ ವರ್ಷಕ್ಕೆ ಎರಡು ಬಾರಿ ಇಲಾಖಾ ಪರೀಕ್ಷೆಗಳನ್ನು ನಡೆಸುವುದು.
- ಬಡ್ತಿ ಮತ್ತು ವರ್ಗಾವಣೆಗೆ ಅನುಸರಿಸಬೇಕಾದ ಸೇವೆಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.
- ಅಧಿಕಾರಿಗಳ ದುರ್ವರ್ತನೆಯ ಮೇರೆಗೆ ಶಿಸ್ತುಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.
- ರಾಷ್ಟ್ರಾಧ್ಯಕ್ಷರ ಸೂಚನೆಯ ಮೇರೆಗೆ ಯಾವುದೇ ವಿಷಯಗಳಿಗೆ ಸರ್ಕಾರಕ್ಕೆ ಸಲಹೆ ನೀಡುವುದು.

8. **ಕೇಂದ್ರ ಲೋಕಸೇವಾ ಆಯೋಗವು ನೇಮಕಾತಿ ಮಾಡುವ ಪ್ರಮುಖ ನಾಗರಿಕ ಸೇವೆಗಳನ್ನು ಹೆಸರಿಸಿ.**

- ಐ.ಎ.ಎಸ್. (ಭಾರತೀಯ ಆಡಳಿತ ಸೇವೆ)
- ಐ.ಪಿ.ಎಸ್. (ಭಾರತೀಯ ಪೊಲೀಸ್ ಸೇವೆ)
- ಐ.ಎಫ್.ಓ.ಎಸ್. (ಭಾರತೀಯ ಅರಣ್ಯ ಸೇವೆ)
- ಐ.ಎಫ್.ಎಸ್. (ಭಾರತೀಯ ವಿದೇಶಾಂಗ ಸೇವೆ)
- ಐ.ಆರ್.ಎಸ್. (ಭಾರತೀಯ ಕಂದಾಯ ಸೇವೆ)

9. ಐ.ಎ.ಎ.ಎಸ್.(ಭಾರತೀಯಲೆಕ್ಕಪರಿಶೋಧನೆಮತ್ತುಖಾತೆಗಳಸೇವೆ)**ಕೇಂದ್ರ ಗೃಹ ಮಂತ್ರಾಲಯ ಹೊಂದಿರುವ ಸಶಸ್ತ್ರ ಸೈನಿಕ ಪಡೆಗಳನ್ನು ಹೆಸರಿಸಿ.**

- ಕೇಂದ್ರೀಯ ಮೀಸಲು ಪೊಲೀಸ್ ಪಡೆ
- ಗಡಿಭದ್ರತಾ ಪಡೆ
- ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ
- ರೈಲ್ವೆರಕ್ಷಣಾಪಡೆಪೂರ್ವಬಾವಿ ಪರೀಕ್ಷೆ
- ಮುಖ್ಯ ಪರೀಕ್ಷೆ

10. **ಕೇಂದ್ರ ಗೃಹ ಮಂತ್ರಾಲಯ ಹೊಂದಿರುವ ಸಶಸ್ತ್ರ ಸೈನಿಕ ಪಡೆಗಳನ್ನು ಹೆಸರಿಸಿ.**

- ಕೇಂದ್ರೀಯ ಮೀಸಲು ಪೊಲೀಸ್ ಪಡೆ
- ಗಡಿಭದ್ರತಾ ಪಡೆ
- ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ
- ರೈಲ್ವೆರಕ್ಷಣಾಪಡೆ
- ಶಿಸ್ತು ಮತ್ತು ಪೂರ್ವಾನ್ವಯ ಬಡ್ತಿ ಪ್ರಕರಣಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.
- ಕೇಂದ್ರ ಲೋಕಸೇವಾ ಆಯೋಗ ನಡೆಸುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸಮನ್ವಯಗೊಳಿಸುವುದು.

13. **ಕಾನೂನು ಸುವ್ಯವಸ್ಥೆಯ ನಿರ್ವಹಣೆಯಲ್ಲಿ ರಾಜ್ಯದ ಪಾತ್ರವೇನು**? **ವಿವರಿಸಿ. (ಅಭ್ಯಾಸ ಪ್ರಶ್ನೆ)**

- ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ರಾಜ್ಯ ಸರ್ಕಾರಗಳ ಪ್ರಾಥಮಿಕ ಜವಾಬ್ದಾರಿಯಾಗಿದೆ.
- ಇದಕ್ಕಾಗಿ ರಾಜ್ಯಗಳು ಪೊಲೀಸ್ ವ್ಯವಸ್ಥೆಯನ್ನು ಹೊಂದಿವೆ.
- ರಾಜ್ಯಗಳಲ್ಲಿ ಪೊಲೀಸ್ ಖಾತೆಯು ರಾಜ್ಯ ಗೃಹಮಂತ್ರಿಯ ಅಧೀನದಲ್ಲಿರುತ್ತದೆ.
- ರಾಜ್ಯ ಗೃಹಮಂತ್ರಿಯು ಪೊಲೀಸ್ ಆಡಳಿತಕ್ಕೆ ಸಂಬಂಧಪಟ್ಟ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.
- ಗೃಹ ಇಲಾಖೆಯ ಕಾರ್ಯದರ್ಶಿಯು ಇಲಾಖೆಯ ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ.

¤ ಇವರು ಗೃಹಮಂತ್ರಿಗೆ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಲಹೆ ಮತ್ತು ನೆರವು ನೀಡುತ್ತಾರೆ.

ಗೃಹ ಇಲಾಖೆಯು ಪೋಲೀಸ್ ಆಡಳಿತದ ಮೇಲ್ವಿಚಾರಣೆ ಮತ್ತು ಸಂಯೋಜನೆಯ ಕಾರ್ಯವನ್ನು ನಿರ್ವಹಿಸುತ್ತದೆ

# ಜಾಗತಿಕ ಸಂಸ್ಥೆಗಳು

- ವಿಶ್ವಸಂಸ್ಥೆ ಸ್ಥಾಪನೆ –1945, **ಅಕ್ಟೋಬರ್** 24
- ಮೊದಲನೆ ವಿಶ್ವ ಸಮರದ ಬಳಿಕ ಜಾಗತಿಕ ಶಾಂತಿಗಾಗಿ ಸ್ಥಾಪನೆಯಾದ ಸಂಸ್ಥೆ–'**ಲೀಗ್ ಆಫ್ ನೇಶನ್ಸ್**'
- ವಿಶ್ವಸಂಸ್ಥೆ ಶಬ್ದವನ್ನು ಚಾಲ್ತಿಗೆ ತಂದವರು
  **–ಫ್ರಾಂಕ್ಲಿನ್ ರೂಸ್‌ವೆಲ್ಟ್**
- ವಿಶ್ವಸಂಸ್ಥೆ ಕೇಂದ್ರ ಕಛೇರಿ ಇರುವುದು **–ನ್ಯೂಯಾರ್ಕ್**
- ಸಾಮಾನ್ಯ ಸಭೆ ಅಧಿವೇಶನ ನಡೆಯುವದು**–ಸೆಪ್ಟಂಬರ್**
- ವಿಶ್ವಸಂಸ್ಥೆಯ/ಜಾಗತಿಕ ಸಂಸತ್ತು **–ಸಾಮಾನ್ಯ ಸಭೆ**
- ವಿಶ್ವಸಂಸ್ಥೆಯ ಸಚಿವ ಸಂಪುಟ **–ಭದ್ರತಾ ಸಮಿತಿ**
- ಭದ್ರತಾ ಸಮಿತಿ ಸದಸ್ಯರ ಸಂಖ್ಯೆ –೧೫ **(೫ ಖಾಯಂ)**
- ವಿಶ್ವಸಂಸ್ಥೆಯ ಪ್ರಸ್ಥಾವನೆ ಆರಂಭಗೊಳ್ಳುವುದು ಹೇಗೆ?
  **–"ವಿಶ್ವದ ಜನಸಮುದಾಯವೆನಿಸಿದ ನಾವು...**
- ಈಗ ಅಸ್ತಿತ್ವದಲ್ಲಿ ಇಲ್ಲದ ಅಂಗ **–ದತ್ತಿ ಸಮಿತಿ**
- ದತ್ತಿ ಸಮಿತಿ ಈಗ ಅಸ್ತಿತ್ವದಲ್ಲಿಲ್ಲ. ಏಕೆ?
  **–ಈಗ ಯಾವುದೇ ದತ್ತಿ ಇಲ್ಲ.**
- ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾದೀಶರ ಸಂಖ್ಯೆ – **೧೫,ನ್ಯಾಯಾದೀಶರಅಧಿಕಾರಾವಧಿ–೯ ವರ್ಷ**
- ವಿಶ್ವಸಂಸ್ಥೆಯ ಪ್ರಸ್ತುತ ಮಹಾಕಾರ್ಯದರ್ಶಿ
  **–ಆಂಟೋನಿಯೋ ಗುಟೆರಸ್**
- ಶುಭಾಶಯ ಪತ್ರ ಮಾರುವ ಸಂಸ್ಥೆ **–ಯುನಿಸೆಫ್**
- ಯುನಿಸೆಫ್ ಶುಭಾಶಯ ಪತ್ರಗಳನ್ನು ಏಕೆ ಕೊಳ್ಳಬೇಕು?
  **–ಈ ಹಣವನ್ನು ಮಕ್ಕಳ ಯೋಗಕ್ಷೇಮಕ್ಕೆಬಳಸುವರು.**
- ಸಾರ್ಕ್‌ಸಂಸ್ಥೆಯ ಪ್ರಗತಿಗೆ ತೊಡಕಾಗಿರುವ ಅಂಶ
  **–ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳಅವಿರೋಧದ ನೆಲೆಯಲ್ಲೇ ಇರಬೇಕು' ಎಂಬ ಸೂತ್ರ.**

  SAARC:South Asian Association for Regional co–operation

<u>ಮೂರು/ನಾಲ್ಕು ಅಂಕದ ಪ್ರಶ್ನೋತ್ತರಗಳು</u>

1. **ವಿಶ್ವಸಂಸ್ಥೆಯ ಪ್ರಧಾನ ಅಂಗ ಸಂಸ್ಥೆಗಳು ಯಾವುವು?**

- ಸಾಮಾನ್ಯ ಸಭೆ
- ಭದ್ರತಾ ಸಮಿತಿ
- ಆರ್ಥಿಕ ಹಾಗೂ ಸಾಮಾಜಿಕ ಸಮಿತಿ
- ದತ್ತಿ ಸಮಿತಿ
- ಅಂತರರಾಷ್ಟ್ರೀಯ ನ್ಯಾಯಾಲಯ
- ಸಚಿವಾಲಯ

2. **ವಿಶ್ವ ಸಂಸ್ಥೆಯ ಧ್ಯೇಯೋದ್ದೇಶಗಳು ಯಾವುವು?**

- ಅಂತರರಾಷ್ಟ್ರೀಯ ಶಾಂತಿ, ಸುಭದ್ರತೆ ಕಾಪಾಡುವುದು.
- ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.
- ಮೂಲಭೂತ ಹಕ್ಕುಗಳ ಬಗ್ಗೆ ನಂಬುಗೆ ಹೆಚ್ಚಿಸುವುದು.
- ರಾಷ್ಟ್ರಗಳ ಮಧ್ಯೆ ಸೌಹಾರ್ದತೆಯ ಕೇಂದ್ರವಾಗಿದೆ.
- ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹಾರ ಕೈಗೊಳ್ಳುವುದು.
- ಅಂತರರಾಷ್ಟ್ರೀಯ ನ್ಯಾಯ, ಒಡಂಬಡಿಕೆಗಳಿಗೆ ಮನ್ನಣೆ ಒದಗಿಸುವುದು.

3. **ಭದ್ರತಾ ಸಮಿತಿಯ ರಚನೆ, ಕಾರ್ಯಗಳನ್ನು ತಿಳಿಸಿ.**

**<u>ಭದ್ರತಾ ಸಮಿತಿಯ ರಚನೆ</u>**

- ಇದರಲ್ಲಿ 15 ಮಂದಿ ಸದಸ್ಯರಿರುತ್ತಾರೆ.
- ೫ ಖಾಯಂ ಸದಸ್ಯರು, ೧೦ ಹಂಗಾಮಿ ಸದಸ್ಯರು.
- ಅಮೆರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್, ಚೈನಾ ಖಾಯಂ ಸದಸ್ಯರು.
- 10 ಹಂಗಾಮಿ ಸದಸ್ಯರನ್ನು 2 ವರ್ಷಗಳಿಗೆ ಸಾಮಾನ್ಯ ಸಭೆ ಆರಿಸುತ್ತದೆ.

**<u>ಭದ್ರತಾ ಸಮಿತಿಯ ಕಾರ್ಯಗಳು</u>**

- ವಿಟೋ ಅಧಿಕಾರವನ್ನು ಹೊಂದಿದೆ.
- ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಯತ್ನಿಸುತ್ತದೆ.
- ಅಂತರರಾಷ್ಟ್ರೀಯ ಶಾಂತಿ ಹಾಗೂ ಸುವ್ಯವಸ್ಥೆಗೆ ಶಾಂತಿಪಾಲನಾ ಪಡೆಯನ್ನು ನಿಯೋಜಿಸುತ್ತದೆ.
- ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ನೇಮಕ.
- ಮಹಾಕಾರ್ಯದರ್ಶಿ ಆಯ್ಕೆಗೆ ಹೆಸರು ಸೂಚಿಸುವದು

4. **ಆರ್ಥಿಕ, ಸಾಮಾಜಿಕ ಸಮಿತಿಯ ಕಾರ್ಯಗಳೇನು?**

- ಅಂತರರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ವಿಷಯಗಳ ಅಧ್ಯಯನ ಹಾಗೂ ವರದಿ.
- ನಿರಾಶ್ರಿತರು, ಮಹಿಳೆಯರ, ವಸತಿ ಸಮಸ್ಯೆ ನಿವಾರಣೆ
- ಮಾನವ ಹಕ್ಕುಗಳ ಬಗ್ಗೆ ಶಿಫಾರಸ್ಸು ಮಾಡುತ್ತದೆ.
- ಮೂಲಭೂತ ಸ್ವಾತಂತ್ರ್ಯಗಳ ಬಗೆಗೆ ಶಿಫಾರಸ್ಸು.
- ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣಗಳ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನ ಸಂಘಟಿಸುವುದು.
- ವಿಶೇಷ ಅಂಗಸಂಸ್ಥೆಗಳ ಕಾರ್ಯಗಳ ಸಮನ್ವಯ.

5. **ವಿಶ್ವದ ಆರೋಗ್ಯ ಸುಧಾರಣೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಪಾತ್ರವನ್ನು ವಿವರಿಸಿ.**

- ಮಾನವರ ಆರೋಗ್ಯ ಸುಧಾರಿಸಲು ಸ್ಥಾಪನೆಯಾಗಿದೆ.
- ಸಿಡುಬು ರೋಗ ನಿವಾರಿಸುವಲ್ಲಿ ಯಶಸ್ಸು ಕಂಡಿದೆ.
- ಜನಸಂಖ್ಯಾ ಸ್ಫೋಟ ಹೋಗಲಾಡಿಸಲು ಪ್ರಯತ್ನ.
- ಹಸಿವು, ಅಪೌಷ್ಟಿಕತೆಯ ಹೋಗಲಾಡಿಸಲು ಪ್ರಯತ್ನ.

- ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ಮುಂತಾದ ರೋಗಗಳನ್ನು ತೊಡೆದು ಹಾಕಲು ಯತ್ನಿಸುತ್ತಿದೆ.
- ಏಡ್ಸ್, ಕ್ಯಾನ್ಸರ್‌ನಂತಹ ರೋಗಗಳ ಮುಕ್ತಿಗೆ ಪ್ರಯತ್ನ.

6. **ವಿಶ್ವಸಂಸ್ಥೆ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದ ಸಾಧನೆಗಳಾವುವು?**

- ಸುಂಕ & ವ್ಯಾಪಾರದ ಸಾಮಾನ್ಯ ಒಪ್ಪಂದ ಜಾರಿಗೆ
- ವಿಶ್ವಬ್ಯಾಂಕ್, ಐ.ಎಮ್.ಎಫ್ ನಂತಹ ಸಂಸ್ಥೆಗಳ ಸ್ಥಾಪನೆ
- ವಿಶ್ವ ಆರೋಗ್ಯ ಸಂಸ್ಥೆ, ಯುನೆಸ್ಕೋ, ಯುನಿಸೆಫ್ ಸ್ಥಾಪನೆ
- 1948ರಲ್ಲಿ ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ
- ವರ್ಣಭೇದ ನೀತಿ ಅಳಿಸುವಲ್ಲಿ ಪ್ರಮುಖ ಪಾತ್ರ.
- ಸಾಮ್ರಾಜ್ಯಶಾಹಿತ್ವವನ್ನು ಇಲ್ಲವಾಗಿಸಿದೆ.
- ವಸಾಹತುಶಾಹಿತ್ವವನ್ನು ಇಲ್ಲವಾಗಿಸಿದೆ.

7. **ವಿಶ್ವಸಂಸ್ಥೆಯಆಶ್ರಯದವಿವಿಧಸಂಸ್ಥೆಗಳಾವುವು?**

| | |
|---|---|
| ಆಹಾರ ಮತ್ತು ಕೃಷಿ ಸಂಸ್ಥೆ | ವಿಶ್ವ ಆರೋಗ್ಯ ಸಂಸ್ಥೆ |
| ಯುನೆಸ್ಕೋ | ಯುನಿಸೆಫ್ |
| ಐ.ಎಮ್.ಎಫ್ | ಐ.ಬಿ.ಆರ್.ಡಿ |
| ಕಾರ್ಮಿಕ ಸಂಘ | ವಿಶ್ವ ವ್ಯಾಪಾರ ಸಂಘ |
| ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ | |

8. **ಜಾಗತಿಕ ಶಾಂತಿಸ್ಥಾಪನೆಯಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾದುದು. ಸಮರ್ಥಿಸಿ.(ಶಾಂತಿ ಕಾರ್ಯಗಳು)**

- ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ.
- ಸುಯೆಜ್ ಕಾಲುವೆ ಬಿಕ್ಕಟ್ಟು, ಕಾಶ್ಮೀರ ಸಮಸ್ಯೆ, ಕೊರಿಯಾ ಬಿಕ್ಕಟ್ಟು ಇತ್ಯಾದಿ ವಿವಾದಗಳ ಪರಿಹಾರಕ್ಕಾಗಿ ಶ್ರಮಿಸಿದೆ.
- ಮೂರನೆಯ ಮಹಾಯುದ್ಧ ನಡೆಯದಂತೆ ತಡೆದಿದೆ.
- ಅಣ್ವಸ್ತ್ರ ಹಾಗೂ ನಿಶ್ಯಸ್ತ್ರೀಕರಕ್ಕೆ ಪ್ರಯತ್ನ ಮಾಡುತ್ತಿದೆ.
- ವಿಶ್ವ ಶಾಂತಿಯ ನೆಲೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದೆ.

9. **ವಿಶ್ವಸಂಸ್ಥೆಯ ಸಾಧನೆಗಳನ್ನು ವಿವರಿಸಿ.**

- ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ.
- ನಿಶ್ಯಸ್ತ್ರೀಕರಣದ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಮಾಡುತ್ತಿದೆ.
- ರಾಷ್ಟ್ರಗಳ ನಡುವಿನ ವಿವಾದಗಳ ಪರಿಹಾರಕ್ಕೆ ಶ್ರಮಿಸಿದೆ.
- ಸಾಮಾಜಿಕ ಪ್ರಗತಿಗೆ ಯತ್ನಿಸುತ್ತಿದೆ.
- ಉತ್ತಮ ಜೀವನ ಮಟ್ಟಕ್ಕೆ ಯತ್ನಿಸುತ್ತಿದೆ.
- ವಿಶ್ವಸಂಸ್ಥೆಯ ಪ್ರಗತಿ ಯೋಜನೆ ರೂಪಿಸಿದೆ.
- 1948ರಲ್ಲಿ ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ.
- ವರ್ಣಭೇದ ನೀತಿ ಅಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.
- ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವಗಳನ್ನು ನಿವಾರಿಸಿದೆ

10. **ಆಹಾರ ಮತ್ತು ಕೃಷಿ ಸಂಸ್ಥೆಯಉದ್ದೇಶಗಳಾವುವು?**

- ಕೃಷಿ ಕ್ಷೇತ್ರದ ಅಭಿವೃದ್ಧಿ.
- ಪೌಷ್ಟಿಕ ಆಹಾರ ಒದಗಿಸುವದು.
- ಹಸಿವೆಯಿಂದ ಜಾಗತಿಕ ಜನಸಮುದಾಯದ ವಿಮುಕ್ತಿ.
- ಗ್ರಾಮಾಂತರ ಪ್ರದೇಶದ ಜನರ ಜೀವನ ಮಟ್ಟ ಸುಧಾರಣೆ

11. **ಜಗತ್ತಿನ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಐ.ಎಂ.ಎಫ್.ನ ಪಾತ್ರವನ್ನು ವಿಶ್ಲೇಷಿಸಿ. (ವಾ-೨೦೨೩)**

- ಅಂತಾರಾಷ್ಟ್ರೀಯ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನ
- ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ.
- ಆರ್ಥಿಕ ಸ್ಥಿರತೆಗೆಸಹಕರಿಸುತ್ತದೆ.
- ಉತ್ತಮ ವಿದೇಶೀ ಪಾವತಿ ಸಮತೋಲನ ಕಾಯ್ದುಕೊಳ್ಳಲು ಸಹಕರಿಸುತ್ತದೆ.
- ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಕೇಂದ್ರ ಬ್ಯಾಂಕು ಆಗಿದೆ.
- ಮುಂದುವರಿದ ಹಾಗೂ ಹಿಂದುಳಿದ ರಾಷ್ಟ್ರಗಳ ಪರಸ್ಪರ ಸಂಬಂಧವನ್ನು ಬೆಸೆಯುವಲ್ಲಿ ಪೂರಕ ಪಾತ್ರ ವಹಿಸುತ್ತದೆ

12. **ಅಂತರರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯಗಳೇನು?**

- ಕಾರ್ಮಿಕ ವರ್ಗದ ಸಾಮಾಜಿಕ ಭದ್ರತೆ
- ಆರೋಗ್ಯ ಸಂರಕ್ಷಣೆ, ಉತ್ತಮ ಜೀವನ ಮಟ್ಟ
- ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯ
- ಕನಿಷ್ಠ ವೇತನ ಜಾರಿ
- ವಸತಿ ನಿರ್ಮಾಣ
- ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡುವುದು.

13. **ಕಾಮನ್‌ವೆಲ್ತ್ ರಾಷ್ಟ್ರಸಂಘದ ಉದ್ದೇಶಗಳಾವುವು?**

- ಪ್ರಜಾತಂತ್ರವನ್ನು ಎತ್ತಿ ಹಿಡಿಯುವುದು
- ಸ್ವಾತಂತ್ರ್ಯದ ಸಂರಕ್ಷಣೆ
- ಬಡತನ ನಿರ್ಮೂಲನ
- ವಿಶ್ವಶಾಂತಿ ನೆಲೆಗೊಳಿಸುವಿಕೆ
- ಕ್ರೀಡೆ, ವಿಜ್ಞಾನ, ಹಾಗೂ ಕಲೆಯ ಬೆಳವಣಿಗೆಗೆ
- ಪರಸ್ಪರ ಸದಸ್ಯರಾಷ್ಟ್ರಗಳ ಮೈತ್ರಿಯನ್ನು ಬಲಪಡಿಸುವುದು.

14. **ಯುನೆಸ್ಕೋದ ಕಾರ್ಯಗಳಾವುವು?**

- ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ, ಸಂಸ್ಕೃತಿಗೆ ಪ್ರೋತ್ಸಾಹ
- ತಾಂತ್ರಿಕ ಶಿಕ್ಷಣ, ಮಾಧ್ಯಮ ತಂತ್ರಗಾರಿಕೆ,
- ರಚನಾತ್ಮಕ ಚಿಂತನೆ, ಸಾಂಸ್ಕೃತಿಕ ವಿಚಾರಗಳು
- ಪರಿಸರ ವಿಜ್ಞಾನದ ಬಗೆಗೆ ಇದು ಕಾರ್ಯೋನ್ಮುಖ
- ಪ್ರಪಂಚದಾದ್ಯಂತ ಶಿಕ್ಷಣ ಹಾಗೂ ಜ್ಞಾನ ಪ್ರಸಾರ
- ಸರ್ಕಾರ, ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯ.

15. **ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರಗಳಾವುವು?**

- ಅಮೆರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್, ಚೈನಾ ಖಾಯಂ

16. **ಸಾರ್ಕ್‌ಸದಸ್ಯ ರಾಷ್ಟ್ರಗಳು ಯಾವುವು?**

- ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಮಾಲ್‌ಡೀವ್ಸ್, ಭೂತಾನ್, ಅಫಘಾನಿಸ್ತಾನ

# ಸಾಮಾಜಿಕ ಸ್ತರ ವಿನ್ಯಾಸ

**ಪ್ರಶ್ನೆ 1 ಮಾನವಕುಲ ತಾನೊಂದೇ ವಲಂ ಎಂದು ಹೇಳಿದವರು. ಅಥವಾ ಮಾನವಕುಲ ತಾನೊಂದೇ ವಲಂ ಈ ವಾಕ್ಯ ವ್ಯಕ್ತ ಪಡಿಸಿದವರು.**

ಪಂಪ

**ಪ್ರಶ್ನೆ 2 ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದವರು**

ಮಹಾತ್ಮಾ ಗಾಂಧಿಜಿ

**ಪ್ರಶ್ನೆ 3 ಸಂವಿಧಾನದ ಯಾವ ವಿಧಿ ಅಸ್ಪೃಶ್ಯತಾ ಆಚರಣೆ ಒಂದು ಶಿಕ್ಷಾರ್ಹ ಅಪರಾಧ ಎಂದಿದೆ?**

17ನೇ ವಿಧಿ

**ಪ್ರಶ್ನೆ 3 ಅಸ್ಪೃಶ್ಯತಾ ಅಪರಾಧ ಕಾಯ್ದೆ ಜಾರಿಗೆ ಬಂದ ವರ್ಷ**

1955

ಪ್ರಶ್ನೆ 4 ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ

1976

**ಪ್ರಶ್ನೆ 5 ಅಸ್ಪೃಶ್ಯತಾ ಅಪರಾಧ ಕಾಯ್ದೆಯನ್ನು 1976 ರಲ್ಲಿ ಅಗತ್ಯ ಬದಲಾವಣೆಗಳೊಂದಿಗೆ ಈ ಹೆಸರಿನೊಂದಿಗೆ ಜಾರಿಗೆ ತರಲಾಗಿದೆ,**

*ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ

**ಪ್ರಶ್ನೆ 6 ಸಾಮಾಜಿಕ ಸ್ತರ ವಿನ್ಯಾಸ ಎಂದರೇನು** ?

*ಜನರನ್ನು ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ ,ಉದ್ಯೋಗ, ಬುದ್ಧಿಶಕ್ತಿ ಮೊದಲಾದವುಗಳ ಆಧಾರದ ಮೇಲೆ ಮೇಲು ಕೀಳು ಎಂದು ವಿಂಗಡಿಸುವದು.

**ಪ್ರಶ್ನೆ 7 ಪೂರ್ವಾಗ್ರಹ ಎಂದರೇನು**?

*ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೊಂದಿರಬಹುದಾದ ಪೂರ್ವನಿರ್ಧಾರಿತ ಮನೋಭಾವಣೆ.

**ಪ್ರಶ್ನೆ 8 ಮಹಾತ್ಮಾ ಗಾಂಧಿಜಿಯವರು ಅಸ್ಪೃಶ್ಯತೆಯನ್ನು ಏನೆಂದು ಹೇಳಿದ್ದಾರೆ** ?

*ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ

**ಪ್ರಶ್ನೆ 9 ಭಾರತ ಸಂವಿಧಾನದ 17 ನೇ ವಿಧಿಯ ಮಹತ್ವ**

*ಅಸ್ಪೃಶ್ಯತಾ ಆಚರಣೆ ಒಂದು ಶಿಕ್ಷಾರ್ಹ ಅಪರಾಧ ಎಂದಿದೆ.

**ಪ್ರಶ್ನೆ 10 ಸಾಮಾಜಿಕ ಸ್ತರ ವಿನ್ಯಾಸಕ್ಕೆ ಕಾರಣಗಳೇನು? ಅಥವಾ ಸಾಮಾಜಿಕ ಸ್ತರ ವಿನ್ಯಾಸ ಹೇಗೆ ಉಂಟಾಗುತ್ತದೆ**?

*ಆದಾಯ * ಶಿಕ್ಷಣ * ಜಾತಿ * ಬಣ್ಣ *ಲಿಂಗ * ಉದ್ಯೋಗ * ಬುದ್ಧಿಶಕ್ತಿ.

**ಪ್ರಶ್ನೆ 11 ಪೂರ್ವಾಗ್ರಹಕ್ಕೆ ಕಾರಣಗಳೇನು**?

*ಜಾತಿ ತಾರತಮ್ಯ *ಲಿಂಗ ತಾರತಮ್ಯ *ಪ್ರಾದೇಶಿಕ ತಾರತಮ್ಯ * ಬಡವ-ಬಲ್ಲಿದ

**ಪ್ರಶ್ನೆ 12 ಪೂರ್ವಾಗ್ರಹ ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗಿದೆ ಹೇಗೆ**?

*ಅಸಹನೆ *ತಿರಸ್ಕಾರ *ಅಗೌರವ *ದ್ವೇಷ

**ಪ್ರಶ್ನೆ 13 ಅಸ್ಪೃಶ್ಯತೆ ಹೋಗಲಾಡಿಸಲು ಪ್ರಯತ್ನಿಸಿದ ಸಮಾಜ ಸುಧಾರಕರನ್ನು ಹೆಸರಿಸಿ**

*ಜ್ಯೋತಿಭಾ ಫುಲೆ *ಸ್ವಾಮಿ ವಿವೇಕಾನಂದ *ಡಾ॥ ಬಿ.ಆರ್. ಅಂಬೇಡ್ಕರ.

**ಪ್ರಶ್ನೆ 14 ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಅಥವಾ ಅಸ್ಪೃಶ್ಯತೆ ನಮ್ಮ ಸಮಾಜದ ಅಮಾನುಷ ಆಚರಣೆ. ಸಮರ್ಥಿಸಿ**

- ಅಸ್ಪೃಶ್ಯರನ್ನು ಸಮಾಜವು ಕಡೆಯ ಹಂತದವರೆAದು ಪರಿಗಣಿಸಿತು
- ಸಮಾಜದ ಅಮಾನುಷ ಆಚರಣೆಆಗಿದೆ.
- ಸಮಾಜದ ಅವಕಾಶಗಳಿಂದ ದೂರ ಇಡಲಾಗಿತ್ತು
- ಸಾಂಸ್ಕೃತಿಕ ಅವಕಾಶಗಳಿಂದ ದೂರ ಇಡಲಾಗಿತ್ತು
- ಧಾರ್ಮಿಕ ಅವಕಾಶಗಳಿಂದ ದೂರ ಇಡಲಾಗಿತ್ತು
- ಶೈಕ್ಷಣಿಕ ಅವಕಾಶಗಳಿಂದ ದೂರ ಇಡಲಾಗಿತ್ತು.
- ರಾಜಕೀಯ ಅವಕಾಶಗಳಿಂದ ದೂರ ಇಡಲಾಗಿತ್ತು

**ಪ್ರಶ್ನೆ 15 ಅಸ್ಪೃಶ್ಯತೆ ಹೋಗಲಾಡಿಸಲು ಇರುವ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳೇನು? ಅಥವಾ ಭಾರತದಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು? ಅಥವಾ ಭಾರತದಲ್ಲಿ ಅಸ್ಪೃಶ್ಯತೆಯ ಆಚರಣೆಯು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಕಾರಣಗಳನ್ನು ಕೊಡಿ/ ಸಮರ್ಥಿಸಿ.**

- 17 ನೇ ವಿಧಿ ಅಸ್ಪೃಶ್ಯತಾ ಆಚರಣೆ ನಿಷೇಧಿಸಿದೆ.
- 1955 ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿಗೊಳಿಸಿದೆ.
- 1976 ರಲ್ಲಿನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಜಾರಿಗೊಳಿಸಿದೆ.
- ಸಾರ್ವತ್ರಿಕ ಮತದಾನದ ಹಕ್ಕು ಜಾರಿಗೊಳಿಸಿದೆ.
- ಸಮಾನತೆಯ ಹಕ್ಕು ಜಾರಿಗೊಳಿಸಿದೆ.
- ರಾಜಕೀಯ ಮೀಸಲಾತಿ ಜಾರಿಗೊಳಿಸಿದೆ.
- ಉದ್ಯೋಗದಲ್ಲಿ ಮೀಸಲಾತಿ
- 1989 ರ ಶಾಸನ ರಾಜ್ಯಗಳಿಗೆ ವಿಶೇಷ ಜವಾಬ್ದಾರಿ ನೀಡಿದೆ.

**ಪ್ರಶ್ನೆ 16 ಅಸ್ಪೃಶ್ಯತೆ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ಹೋಗಲಾಡಿಸಲು ನಿಮ್ಮ ಸಲಹೆಗಳೇನು**?

- ಶಿಕ್ಷಣದ ಮೂಲಕ ಮಕ್ಕಳಲ್ಲಿ ಯುವಜನರಲ್ಲಿ ಅರಿವು ಮೂಡಿಸುವುದು.
- ಸಮೂಹ ಮಾಧ್ಯಮಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.
- ಕಾನೂನುಗಳನ್ನು ಮತ್ತಷ್ಟು ಕಠಿಣ ಗೊಳಿಸುವದು
- ಅಸ್ಪೃಶ್ಯರಿಗೆ ಇನ್ನೂ ಹೆಚ್ಚಿನ ಸೌಲಭ್ಯ ಕೊಟ್ಟು ಸಮಾಜದ ಮುಖ್ಯ ವಾಹಿನಿಗೆ ತರುವುದು.
- ಸಾಮಾಜಿಕ ಮತ್ತು ಧಾರ್ಮಿಕ ಮುಖಂಡರು ಈ ಆಚರಣೆ ನಿವಾರಣೆಗೆ ಹೆಚ್ಚಿನ ಕಾಳಜಿ ವಹಿಸುವುದು.

# ದುಡಿಮೆ ಮತ್ತು ಆರ್ಥಿಕ ಜೀವನ

**ಪ್ರಶ್ನೆ 1 ದುಡಿಮೆಯಲ್ಲಿನ ಭೇದ ಬಾವ ತೊಡೆದು ಹಾಕಲು ಭಾರತ ಸರ್ಕಾರವು ಜಾರಿಗೆ ತಂದಿರುವ ಕಾಯ್ದೆ**

- ಸಮಾನ ವೇತನ ಕಾಯ್ದೆ

**ಪ್ರಶ್ನೆ 2 ಸಮಾನ ವೇತನ ಕಾಯ್ದೆ ಏಕೆ ಜಾರಿಗೆ ತರಲಾಗಿದೆ**?

- ದುಡಿಮೆಯಲ್ಲಿನ ಭೇದ ಬಾವ ತೊಡೆದು ಹಾಕಲು

**ಪ್ರಶ್ನೆ 3 ಸಮಾನ ವೇತನ ಕಾಯ್ದೆ ಯಾವಾಗ ಜಾರಿಗೆ ತರಲಾಗಿದೆ**?

- 1976

**ಪ್ರಶ್ನೆ 4 ದುಡಿಮೆ ಎಂದರೇನು?**

- ವ್ಯಕ್ತಿಯೋರ್ವ ಶಕ್ತಿಯ ವ್ಯಯದಿಂದ ಅಥವಾ ಪರಿಶ್ರಮದಿಂದ ಆತನಿಗೆ ಆರ್ಥಿಕ ಅಥವಾ ವಸ್ತುರೂಪದ ಪ್ರತಿಫಲ ಸಿಗುವದಿದ್ದರೆ.

**ಪ್ರಶ್ನೆ 5 ಶ್ರಮ ವಿಭಜನೆ ಎಂದರೇನು ?**

- ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ ,ಅಭಿರುಚಿ,ಸಾಮರ್ಥ್ಯ, ವಯಸ್ಸು, ವಿಶೇಷ ಪರಿಣತಿ,ಕೌಶಲ್ಯ ಹಾಗೂ ಲಿಂಗ ಬೇಧಗಳ ಆಧಾರದ ಮೇಲೆ ಹಂಚಿಕೊAಡು ಮಾಡುವುದು.

**ಪ್ರಶ್ನೆ 6 ಶ್ರಮ ವಿಭಜನೆ ಯಾವುದಕ್ಕೆ ಕಾರಣವಾಗಿದೆ. ?**

- ವಿಶೇಷ ಪರಿಣತಿ

**ಪ್ರಶ್ನೆ 7 ವಿಶೇಷ ಪರಿಣತಿ ಎಂದರೇನು ?**

- ಯಾವುದಾದರು ನಿರ್ದಿಷ್ಟ ಕ್ಷೇತ್ರ ಒಂದರಲ್ಲಿ ಸಾಕಷ್ಟು ಆಳವಾದ ಪರಿಣತಿ, ತರಬೇತಿ, ಅಥವಾ ಕೌಶಲ್ಯ ಪಡೆಯುವುದು.

**ಪ್ರಶ್ನೆ 8 ಆಧುನಿಕ ಕಾಲದಲ್ಲಿ ವರ್ಗವ್ಯವಸ್ಥೆ ಉಂಟಾಗಿರಲು ಕಾರಣವೇನು?**

- ಕೈಗಾರೀಕರಣ

**ಪ್ರಶ್ನೆ 09 ಕೂಲಿ ಸಹಿತ ದುಡಿಮೆ ಎಂದರೇನು?**

- ಕೂಲಿ,ಸಂಬಳ ಅಥವಾ ಇನ್ನಾವುದೇ ಭೌತಿಕ ರೂಪದ ಪ್ರತಿಫಲ ನೀಡುವ ಚಟುವಟಿಕೆ

**ಪ್ರಶ್ನೆ 10 ಕೂಲಿ ಸಹಿತ ದುಡಿಮೆ ಉದಾಹರಣೆ ಕೊಡಿ**

- ಶಿಕ್ಷಕ, ಪೊಲೀಸ, ಕಟ್ಟಡ ಕಾರ್ಮಿಕ, ವಾಹನ ರಿಪೇರಿ ಇತ್ಯಾದಿ

**ಪ್ರಶ್ನೆ 11 ಕೂಲಿ ರಹಿತ ದುಡಿಮೆ ಎಂದರೇನು?**

- ಕೂಲಿ, ಸಂಬಳ ಅಥವಾ ಇನ್ನಾವುದೇ ಭೌತಿಕ ರೂ¥ದ ಪ್ರತಿಫಲ ನೀಡದ ಚಟುವಟಿಕೆ

**ಪ್ರಶ್ನೆ 12 ಕೂಲಿ ರಹಿತ ದುಡಿಮೆ ಉದಾಹಣೆ ಕೊಡಿ**

- ಗೃಹಿಣಿ, ಆತ್ಮ ಸಂತೋಷಕ್ಕಾಗಿ ಚಿತ್ರ ಬಿಡಿಸುವದು,

**ಪ್ರಶ್ನೆ 13 ದುಡಿಮೆಯ ತಾರತಮ್ಯ / ಭೇದ ಭಾವ ಎಂದರೇನು?**

- ದುಡಿಮೆ ಮತ್ತು ಕೂಲಿ ಹಂಚಿಕೆಯಲ್ಲಿ ಕಂಡು ಬರುವ ಅಸಮಾನತೆ

**ಪ್ರಶ್ನೆ 14 ದುಡಿಮೆಯ ತಾರತಮ್ಯ / ಭೇದ ಭಾವ ಯಾವ ವಲಯದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ?**

- ಅಸಂಘಟಿತ ವಲಯ

**ಪ್ರಶ್ನೆ 15 ನಿರುದ್ಯೋಗ ಎಂದರೇನು ?**

- ದುಡಿಯುವ ವಯಸ್ಸು ಸಾಮರ್ಥ್ಯ, ಆಸಕ್ತಿ ,ಅರ್ಹತೆ ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿ

**ಪ್ರಶ್ನೆ 16 ನಿರುದ್ಯೋಗಿ ಎಂದರೆ ಯಾರು ?**

- ಕೆಲಸ ಮಾಡಲು ಇಷ್ಟ ಇದ್ದು, ದುಡಿಯುವ ವಯಸ್ಸಿನಲ್ಲಿರುವ ಪುರುಷ ಹಾಗೂ ಸ್ತ್ರೀಯರು ಉದ್ಯೋಗ ಪಡೆಯುವಲ್ಲಿ ವಂಚಿತರಾದವರು

**ಪ್ರಶ್ನೆ 17 ಸಂಘಟಿತ ಕೆಲಸಗಾರರು ಎಂದರೆಯಾರು?**

- ಕಾಯ್ದೆ ಕಾನೂನುಗಳಿಗೆ ಬದ್ಧವಾಗಿ ಕೆಲಸ ಮಾಡುವವರು

**ಪ್ರಶ್ನೆ 18 ಸಂಘಟಿತ ಕೆಲಸಗಾರರಿಗೆ ಉದಾಹರಣೆ ಕೊಡಿ**

- ಶಿಕ್ಷಕರು, ಉಪನ್ಯಾಸಕರು ಸೈನಿಕರು ಪೊಲೀಸರು, ಇತ್ಯಾದಿ

**ಪ್ರಶ್ನೆ 19 ಅಸಂಘಟಿತ ಕೆಲಸಗಾರರು ಎಂದರೆಯಾರು?**

- ಕಾಯ್ದೆ ಕಾನೂನುಗಳಿಗೆ ಬದ್ಧರಾಗದೇ ಜೀವನ ನಿರ್ವಹಣೆಗೆ ಕೆಲಸ ಮಾಡುವವರು

**ಪ್ರಶ್ನೆ 20 ಅಸಂಘಟಿತ ಕೆಲಸಗಾರರಿಗೆ ಉದಾಹರಣೆ ಕೊಡಿ**

- ಮನೆ ಕೆಲಸಗಾರರು, ಕೂಲಿಕಾರರು, ಕೃಷಿಕರು.ರಸ್ತೆಬದಿ ವ್ಯಾಪಾರಿಗಳು.

**ಪ್ರಶ್ನೆ 21 ನಿರುದ್ಯೋಗಕ್ಕೆ ಕಾರಣಗಳೇನು ?**

- ಜನಸಂಖ್ಯೆ *ಯಾಂತ್ರೀಕರಣ* ಅತಿಯಾದ ಶ್ರಮ ವಿಭಜನೆ* ಸಾಮಾಜಿಕ ಅಸಮಾನತೆ
- ಬಂಡವಾಳ ಕೊರತೆ* ಅನಕ್ಷರತೆ

**ಪ್ರಶ್ನೆ 22 ನಿರುದ್ಯೋಗದ ಪರಿಣಾಮಗಳೇನು? ಅಥವಾ ನಿರುದ್ಯೋಗ ಒಂದು ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ ವಿವರಿಸಿ**

- ಬಡತನ * ಅನಾರೋಗ್ಯ* ಬ್ರಷ್ಟಾಚಾರ * ಕೌಟುಂಬಿಕ ವಿಘಟನೆ * ಮೋಸ * ವಂಚನೆ* ಕಳ್ಳತನ * ವ್ಯಭಿಚಾರ

**ಪ್ರಶ್ನೆ 23 ನಿರುದ್ಯೋಗ ಸಮಸ್ಯೆಗೆ ಪರಿಹಾರ ಕ್ರಮಗಳನ್ನು ತಿಳಿಸಿ/ ಸರ್ಕಾರ ಕೈಗೊಂಡಕ್ರಮಗಳೇನು ?**

- * ಜನಸಂಖ್ಯೆ ನಿಯಂತ್ರಣ ಕ್ರಮ * ಗುಡಿ ಕೈಗಾರಿಕೆಗಳಿಗೆಪ್ರೋತ್ಸಾಹ
- * ಕೃಷಿ ಕ್ಷೇತ್ರದ ಅಭಿವೃದ್ಧಿ* ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ
- ಶೈಕ್ಷಣಿಕ ಸುಧಾರಣಾಯೋಜನೆಗಳು
- ಪಂಚವಾರ್ಷಿಕ ಯೋಜನೆಗಳು* ವೃತ್ತಿ ಪರ ಶಿಕ್ಷಣಕ್ಕೆ ಪ್ರೋತ್ಸಾಹ
- ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗಖಾತ್ರಿ ಯೋಜನೆಗಳು

**ಪ್ರಶ್ನೆ 24 ಶ್ರಮ ವಿಭಜನೆ ಅನುಕೂಲಗಳೇನು? / ಶ್ರಮ ವಿಭಜನೆ ಮಹತ್ವ ವಿವರಿಸಿ?/**

- ಶ್ರಮ ವಿಭಜನೆ ಅತ್ಯಂತ ಉಪಯುಕ್ತವಾದುದು ಹೇಗೆ?
- ವಿಶೇಷ ಪರಿಣತಿಗೆಕಾರಣವಾಗಿದೆ
- *ಆರ್ಥಿಕ ಲಾಭ ಪಡೆಯಲು ಸಹಾಯಕಾರಿಯಾಗಿದೆ.
- ವರ್ಗವ್ಯವಸ್ಥೆಗೆ ಕಾರಣ ವಾಗಿದೆ,
- ಕೈಗಾರಿಕೋದ್ಯಮಗಳು ಹೆಚ್ಚುಬೆಳವಣಿಗೆ ಹೊಂದಿವೆ
- * ವ್ಯಾಪಾರ ವಾಣಿಜ್ಯೋದ್ಯಮಗಳು ವಿಸ್ತರಿಸಿವೆ

**ಪ್ರಶ್ನೆ 25 ಭಾರತದ ದುಡಿಮೆಯೊಳಗಿರುವ ಅಸಮಾನತೆಗಳನ್ನು ವಿವರಿಸಿ. ಅಥವಾ ದುಡಿಮೆಯ ತಾರತಮ್ಯ / ಭೇದ ಭಾವದ ಸ್ವರೂಪವನ್ನು ವಿವರಿಸಿ.**

- ದುಡಿಮೆ ಮತ್ತು ಕೂಲಿ ಹಂಚಿಕೆಯಲ್ಲಿನ ಅಸಮನತೆಯೇ ದುಡಿಮೆಯ ತಾರತಮ್ಯ
- ಸ್ತ್ರೀ ಪುರುಷರ ಉದ್ಯೋಗಗಳು ಒಂದೇ ರೀತಿಯಾಗಿಲ್ಲ
- ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗ ನೀಡಲಾಗುತ್ತದೆ.
- ಪುರುಷರಿಗೆ ಹೆಚ್ಚಿನಹೊಣೆಗಾರಿಕೆ ಮತ್ತು ಸಂಬಳವನ್ನು ನೀಡಲಾಗುತ್ತದೆ.

* ಇದು ಅಸಂಘಟಿತ ಕ್ಷೇತ್ರದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.
* ಕೃಷಿಕ ಸಮಾಜದಲ್ಲಿ ಕೆಲಸ ಕಾರ್ಯಗಳ ಹಂಚಿಕೆ ಮತ್ತು ಕೂಲಿ ನಿಡುವುದರಲ್ಲಿ ಭೇದ ಭಾವವಿದೆ

**ಪ್ರಶ್ನೆ 26 ಅಸಂಘಟಿತ ಕೆಲಸಗಾರರ ಸಮಸ್ಯೆಗಳಾವವು ? ಅಥವಾ ಅಸಂಘಟಿತ ಕಾರ್ಮಿಕರ ಸವಾಲುಗಳೇನು?**

* ನಿಗದಿತ ನಿಯಮ, ಕಾಯ್ದೆಗಳ ನಿಯಂತ್ರಣವಿಲ್ಲ.*ಕಡಿಮೆ ಕೂಲಿ ನೀಡಲಾಗುತ್ತದೆ.
* ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ
* ಕೆಲಸದ ಭದ್ರತೆ ಇರುವುದಿಲ್ಲ * ನಿಗದಿತ ವೇತನ ಇರುವುದಿಲ್ಲ
* ನಿವೃತ್ತಿ ವೇತನ ಇರುವುದಿಲ್ಲ* ಭತ್ಯೆಗಳ ಸೌಲಭ್ಯ ಇರುವುದಿಲ್ಲ
* ಉದ್ಯೋಗ ಪತಿಗಳಿಂದ ಶೋಷಣೆ

**ಪ್ರಶ್ನೆ 27 ಕೂಲಿ ಸಹಿತ ಮತ್ತು ಕೂಲಿ ರಹಿತ ದುಡಿಮೆಗೆ ಇರುವ ವ್ಯತ್ಯಾಸ ಪಟ್ಟಿಮಾಡಿ**

| ಕೂಲಿಸಹಿತ | ಕೂಲಿರಹಿತ |
|---|---|
| ಕೂಲಿ, ಸಂಬಳ ಅಥವಾ ಇನ್ನಾವುದೇ ಭೌತಿಕ ರೂಪದ ಪ್ರತಿಫಲ ನೀಡುವ ಚಟುವಟಿಕೆ.<br>*ಶಿಕ್ಷಕ, ಪೊಲೀಸ, ಕಟ್ಟಡ ಕಾರ್ಮಿಕ, ವಾಹನ ರಿಪೇರಿ ಇತ್ಯಾದಿ<br>*ಸಂಕೀರ್ಣ ಸಮಾಜದ ಬದುಕಿಗೆ ಅನಿವಾರ್ಯವಾಗಿದೆ. | ಕೂಲಿ,ಸಂಬಳ ಅಥವಾ ಇನ್ನಾವುದೇ ಭೌತಿಕ ರೂಪದ ಪ್ರತಿಫಲ ನೀಡದ ಚಟುವಟಿಕೆ<br>*ಗೃಹಿಣಿ, ಆತ್ಮ ಸಂತೋಷಕ್ಕಾಗಿ ಚಿತ್ರ ಬಿಡಿಸುವದು,<br>*ಸಂಕೀರ್ಣ ಸಮಾಜದ ಬದುಕಿಗೆ ಸಹಾಯಕವಾಗಿಲ್ಲ. |

**ಪ್ರಶ್ನೆ 28) ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸ ಪಟ್ಟಿಮಾಡಿ. / ಸಂಘಟಿತ ವಲಯದ ಕೆಲಸಗಾರರು ಅಸಂಘಟಿತ ವಲಯದ ಕೆಲಸಗಾರರಿಗಿಂತ ಹೇಗೆ ಭಿನ್ನವಾಗಿದ್ದಾರೆ /ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ಲಕ್ಷಣಗಳನ್ನು ಪಟ್ಟಿ ಮಾಡಿ.**

| **ಸಂಘಟಿತ** | **ಅಸಂಘಟಿತ** |
|---|---|
| *ಕಾಯ್ದೆ ಕಾನೂನಿಗೆ ಒಳಪಡುತ್ತಾರೆ<br>*ನಿಶ್ಚಿತ ನಿಯಮಗಳಿವೆ<br>*ಏಣಿ ಶ್ರೇಣಿ ವ್ಯವಸ್ಥೆ ಇದೆ.<br>*ನಿಗದಿತ ವೇತನವಿದೆ<br>*ವೈದ್ಯಕೀಯ ಸೌಲಭ್ಯವಿದೆ.<br>*ರಜಾ ಸೌಲಭ್ಯವಿದೆ<br>*ನಿವೃತ್ತಿ ವೇತನವಿದೆ.<br>*ಶಿಕ್ಷಕರು, ಉಪನ್ಯಾಸಕರು ಸೈನಿಕರು ಪೊಲೀಸರು, ಇತ್ಯಾದಿ | *ಕಾಯ್ದೆ ಕಾನೂನಿಗೆ ಒಳಪಡುವುದಿಲ್ಲ<br>*ನಿಶ್ಚಿತ ನಿಯಮಗಳಿಲ್ಲ<br>*ಏಣಿ ಶ್ರೇಣಿ ವ್ಯವಸ್ಥೆ ಇಲ್ಲ<br>*ನಿಗದಿತ ವೇತನವಿಲ್ಲ<br>*ವೈದ್ಯಕೀಯ ಸೌಲಭ್ಯವಿಲ್ಲ.<br>*ರಜಾ ಸೌಲಭ್ಯವಿಲ್ಲ<br>*ನಿವೃತ್ತಿ ವೇತನವಿಲ್ಲ.<br>*ಮನೆ ಕೆಲಸಗಾರರು, ಕೂಲಿಕಾರರು, ಕೃಷಿಕರು.ರಸ್ತೆಬದಿ ವ್ಯಾಪಾರಿಗಳು. |

# ಸಾಮಾಜಿಕ ಸವಾಲುಗಳು

**ಈ ಕೆಳಗಿನ ಪದಗಳ ಅರ್ಥ ಬರೆಯಿರಿ.**

**1. ಬಾಲ ಕಾರ್ಮಿಕ ಪದ್ಧತಿ**

ಅಪ್ರಾಪ್ತ ವಯಸ್ಸಿನ ಮಕ್ಕಳ ದುಡಿಮೆ /ಅಥವಾ ಭಾರತ ಸಂವಿಧಾನದ ಪ್ರಕಾರ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ದೇಶದಿಂದ ದುಡಿಮೆ ಮಾಡುತ್ತಿದ್ದರೆ ಅದು ಬಾಲಕಾರ್ಮಿಕ ಪದ್ಧತಿ

**2. ಬಾಲ್ಯ ವಿವಾಹ**

18 ವರ್ಷದೊಳಗಿನ ಹುಡುಗಿಗೆ ಅಥವಾ ಬಾಲಕಿಗೆ ಅಥವಾ 21 ವರ್ಷದೊಳಗಿನ ಹುಡುಗನಿಗೆ ಅಥವಾ ಬಾಲಕನಿಗೆ ಮದುವೆ ಮಾಡಿದರೆ ಅದು ಬಾಲ್ಯ ವಿವಾಹ.

**3. ವರದಕ್ಷಿಣೆ**

ಮದುವೆಯ ಸಮಯದಲ್ಲಿ ವಧುವಿನ ಕಡೆಯವರು ವರುಣ ಕಡೆಯವರಿಗೆ ನೀಡುವ ಬಳುವಳಿ / ಉಡುಗೊರೆಯನ್ನು ವರದಕ್ಷಿಣೆ ಎನ್ನುತ್ತಾರೆ

**4. ಹೆಣ್ಣು ಭ್ರೂಣ ಹತ್ಯೆ**

ಗರ್ಭದಲ್ಲಿರುವ ಬ್ರೂಣವು ಹೆಣ್ಣಾಗಿದ್ದು ಅದು ತಂದೆ ತಾಯಿಗೆ ಬೇಡವಾದರೆ ಆ ಬ್ರೂಣವನ್ನು ಗರ್ಭದಲ್ಲಿಯೇ ಕೊಂದು ಹಾಕುವುದನ್ನು ಹೆಣ್ಣು ಬ್ರೂಣ ಹತ್ಯೆ ಎನ್ನುವರು

**5. ಹೆಣ್ಣು ಶಿಶು ಹತ್ಯೆ**

ಜನನವಾದ ನಂತರದಲ್ಲಿ ಹೆಣ್ಣು ಮಗುವನ್ನು ಅದು ಬೇಡವೆಂದು ಹತ್ಯೆ ಮಾಡುವುದು ಹೆಣ್ಣು ಶಿಶು ಹತ್ಯೆ.

**ಪ್ರಮುಖ ಕಾಯಿದೆಗಳು ಮತ್ತು ಅವುಗಳ ಇಸ್ವಿಗಳು**

1. ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ –1986
2. ಬಾಲಶ್ರಮ ನಿರ್ಮೂಲನೆ ಮತ್ತು ಪುನರ್ವಸೀಕರಣ ಕಾಯ್ದೆ – 2006
3. ವರದಕ್ಷಿಣೆ ನಿಷೇಧ ಕಾಯ್ದೆ – 1961
4. ವರದಕ್ಷಿಣೆ ನಿಷೇಧ ತಿದ್ದುಪಡಿ ಕಾಯ್ದೆ – 1986
5. ಬಾಲ್ಯ ವಿವಾಹ ನಿಷೇಧ ಕಾಯ್ದೆ – 2006
6. ಮಕ್ಕಳ ಹಕ್ಕುಗಳ ಒಡಂಬಡಿಕೆ – 1992 ಡಿಸೆಂಬರ್ 11

**ಪ್ರಮುಖ ವಿಧಿ**

24ನೇ ವಿಧಿ –

ಬಾಲಕಾರ್ಮಿಕ ಪದ್ಧತಿ ನಿಷೇಧಿಸುವ ವಿಧಿ

**ಪ್ರಮುಖ ಸಹಾಯವಾಣಿ**

1098 – ಮಕ್ಕಳ ಸಹಾಯ ವಾಣಿ

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. **ಬಾಲ ಕಾರ್ಮಿಕ ವಿರೋಧಿ ಕಾಯ್ದೆ ಉಲ್ಲಂಘಿಸಿದ ಉದ್ಯೋಗಪತಿಗಳು ಕಡ್ಡಾಯವಾಗಿ ಭರಿಸಬೇಕಾದದ್ದು ಏನು?**

ಉತ್ತರ –20000/– ರೂ ಗಳನ್ನು ಬಾಲಕಾರ್ಮಿಕ ಪುನರ್ವಸತಿ ಕಲ್ಯಾಣ ನಿಧಿಗೆ ಭರಿಸಬೇಕು.

**2. ಭಾರತ ಸರ್ಕಾರವು ಬಾಲಕಾರ್ಮಿಕರ ಪುನರ್ವಸತಿ ಕಲ್ಯಾಣ ನಿಧಿಯನ್ನು ಏಕೆ ಸ್ಥಾಪಿಸಿದೆ?**

ಉತ್ತರ – ಬಾಲಕಾರ್ಮಿಕರ ಶೈಕ್ಷಣಿಕ ವೈದ್ಯಕೀಯ ಮೂಲಭೂತ ಅಗತ್ಯತೆಗಳನ್ನು ಪೂರೈಸಲು

**3. ಸರ್ವ ಶಿಕ್ಷಣ ಅಭಿಯಾನವು ಬಾಲಕಾರ್ಮಿಕ ಪದ್ಧತಿ ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೇಗೆ?**

ಉತ್ತರ – ಸರ್ವ ಶಿಕ್ಷಣ ಅಭಿಯಾನವು ಕೂಲಿಯಿಂದ ಶಾಲೆಗೆ ಎಂಬ ಕಾರ್ಯಕ್ರಮದ ಮೂಲಕ ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತಂದು ಉಚಿತ ಶಿಕ್ಷಣವನ್ನು ನೀಡುತ್ತಿದೆ.

4. ಕರ್ನಾಟಕದಲ್ಲಿ ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆ ತರಲು ರೂಪಿಸಿದ ಕಾರ್ಯಕ್ರಮ ಯಾವುದು?

**ಉತ್ತರ – ಕೂಲಿಯಿಂದ ಶಾಲೆಗೆ**

**5. ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು ಯಾರು ಯಾರು?**

- ಸರ್ಕಾರಿ ಶಾಲೆಗಳ ಮುಖ್ಯ ಶಿಕ್ಷಕರು
- ಗ್ರಾಮ ಲೆಕ್ಕಿಗ
- ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು
- ಆರೋಗ್ಯ ನಿರೀಕ್ಷಕರು
- ಪೊಲೀಸ್ ಠಾಣಾಧಿಕಾರಿಗಳು
- ತಾಲೂಕು ಮತ್ತು ಜಿಲ್ಲಾ ಹಂತದ ಅಧಿಕಾರಿಗಳು

**ದೀರ್ಘ ಉತ್ತರ ಬಯಸುವ ಪ್ರಶ್ನೆಗಳು**

**1. ಬಾಲಕಾರ್ಮಿಕ ಪದ್ಧತಿಯ ಸಮಸ್ಯೆ ಹೆಚ್ಚುತ್ತಲೇ ಇದೆ. ಇದಕ್ಕೆ ಕಾರಣಗಳೇನು?**

- ಕಡುಬಡತನ
- ಕೌಟುಂಬಿಕ ಕಲಹ
- ವಿಚ್ಛೇದನ
- ಕೌಟುಂಬಿಕ ಹಿಂಸೆ
- ಪೋಷಕರ ಅತಿಯಾದ ನಿಯಂತ್ರಣ
- ಉದ್ಯಮಿಗಳ ಲಾಭಕೋರುತನ
- ಅನಕ್ಷರತೆ
- ಮಕ್ಕಳ ಅಪಹರಣ
- ಜೀತ ಪದ್ಧತಿ

**2 ಬಾಲಕಾರ್ಮಿಕ ಪದ್ಧತಿಯ ದುಷ್ಪರಿಣಾಮಗಳು ಯಾವುವು?**

- ಸಾಮಾಜಿಕ ವ್ಯವಸ್ಥೆಯ ಗಂಭೀರ ಪಿಡುಗು
- ಮಕ್ಕಳ ಮಾನಸಿಕ ಭಾವನಾತ್ಮಕ ಶೈಕ್ಷಣಿಕ ವೈದ್ಯಕೀಯ ಅಗತ್ಯತೆಗಳ ಕಾಳಜಿ ಇರುವುದಿಲ್ಲ.
- ದೈಹಿಕ, ಮಾನಸಿಕ ಹಿಂಸೆ
- ಅನಾರೋಗ್ಯ
- ಪೌಷ್ಟಿಕಾಂಶದ ಕೊರತೆ
- ಆರ್ಥಿಕ ಮತ್ತು ಸಾಮಾಜಿಕ ಶೋಷಣೆ

**3 ಬಾಲಕಾರ್ಮಿಕ ಪದ್ಧತಿ ನಿರ್ಮೂಲನ ಕಾರ್ಯಕ್ರಮಗಳು ಯಾವುವು?**

- 24 ನೇ ವಿಧಿ – 14 ವರ್ಷದೊಳಗಿನ ಮಕ್ಕಳ ದುಡಿಮೆ ಶಿಕ್ಷಾರ್ಹ ಅಪರಾಧ
- 1986 ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ
- 1987 ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ರಾಷ್ಟ್ರೀಯ ನೀತಿ
- 1988 ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ
- 2006 ಬಾಲಾಶ್ರಮ ನಿರ್ಮೂಲನ ಮತ್ತು ಪುನರ್ವಸತೀಕರಣ ಕಾಯ್ದೆ
- 2009 ಶಿಕ್ಷಣ ಹಕ್ಕು ಕಾಯ್ದೆ
- ಕೂಲಿಯಿಂದ ಶಾಲೆಗೆ

**4 ಬಾಲ್ಯ ವಿವಾಹಕ್ಕೆ ಕಾರಣಗಳೇನು?**

- ಲಿಂಗ ತಾರತಮ್ಯ
- ಶಿಕ್ಷಣ ಇಲ್ಲದಿರುವಿಕೆ
- ಬಾಲಕಾರ್ಮಿಕತೆ,
- ಮಕ್ಕಳ ಸಾಗಾಣಿಕೆ ಮತ್ತು ಮಾರಾಟ
- ಕಾನೂನಿನ ಕನಿಷ್ಠ ಮಟ್ಟದ ಅನುಷ್ಠಾನ ಮತ್ತು ಬಳಕೆಯ ಕೊರತೆ
- ಸಾರ್ವಜನಿಕ ಸಹಕಾರ
- ಮಕ್ಕಳ ಹಕ್ಕುಗಳು ಅಭಿವೃದ್ಧಿ ಕಾರ್ಯಕ್ರಮಗಳ ದೋಷಪೂರಿತ ಅನುಷ್ಠಾನ

**5 ಬಾಲ್ಯ ವಿವಾಹದ ದುಷ್ಪರಿಣಾಮಗಳನ್ನು ವಿವರಿಸಿ?**

- ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಕುಂಠಿತ.
- ದೌರ್ಜನ್ಯ, ಹಿಂಸೆ, ಶೋಷಣೆ, ಲೈಂಗಿಕ ದೌರ್ಜನ್ಯ
- ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ
- ಅಪೌಷ್ಟಿಕತೆ, ರಕ್ತ ಹೀನತೆ,ಅನಾರೋಗ್ಯ ಗರ್ಭಪಾತ
- ಶಿಶುಮರಣ, ತಾಯಿ ಮರಣ
- ಚಿಕ್ಕ ವಯಸ್ಸಿನಲ್ಲಿ ವಿಧವೆ

**6 ಬಾಲ್ಯ ವಿವಾಹವನ್ನು ನಿಯಂತ್ರಿಸಲು ಇರುವ ಕಾರ್ಯಕ್ರಮಗಳು ಯಾವುವು?**

- 18 ವರ್ಷ ಶಾಲೆ ಕಾಲೇಜು ಬಿಡದಂತೆ ಶೇಕಡಾ 100 ರಷ್ಟು ದಾಖಲೆ
- ಶೇಕಡ 100ರಷ್ಟು ಕಡ್ಡಾಯ ಜನನ ನೊಂದಣಿ
- ಮಕ್ಕಳ ಸಹಾಯವಾಣಿ 1098
- ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ನೇಮಕ
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತು
- ಬಾಲಕಿಯರ ಬಲವರ್ಧನೆ ಮತ್ತು ಸಬಲೀಕರಣ
- ದೂರು ನೀಡುವುದು
- ಬಾಲ್ಯ ವಿವಾಹ ನಿಷೇಧ ಕಾಯ್ದೆ 2006ರ ಸರಿಯಾದ ಅನುಷ್ಠಾನ

**7 ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು ಏಕೆ? ಅಥವಾ ವರದಕ್ಷಿಣೆ ಬಿಡುವಿನಿಂದ ಆಗುವ ಕೆಟ್ಟ ಪರಿಣಾಮಗಳು ಯಾವುವು?**

- ಸ್ತ್ರೀಯರ ಸ್ವಾಭಿಮಾನ, ಗೌರವ, ಸ್ಥಾನಮಾನ ಕುಗ್ಗುವುದು
- ಕೌಟುಂಬಿಕ ಕಲಹ
- ಅನೈತಿಕತೆ, ಕ್ರೌರ್ಯ ಹೆಚ್ಚಳ
- ಹೆಣ್ಣುಭ್ರೂಣ ಹತ್ಯೆ
- ಹೆಣ್ಣು ಶಿಶು ಹತ್ಯೆ
- ವಿವಾಹ ವಿಚ್ಛೇದನ ಪ್ರಕರಣಗಳ ಸಂಖ್ಯೆ ಹೆಚ್ಚಳ

**8 ವರದಕ್ಷಿಣೆ ಸಮಸ್ಯೆ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು?**

- ವರದಕ್ಷಿಣೆ ನಿಷೇಧ ಕಾಯ್ದೆ 1961
- ವರದಕ್ಷಿಣೆ ಸಾವು ಪ್ರಕರಣಗಳನ್ನು ಭಾರತ ದಂಡ ಸಂಹಿತೆ ಮತ್ತು ಭಾರತ ಅಪರಾಧ ವಿಚಾರಣಾ ಸಂಹಿತೆಗೆ ಸೇರ್ಪಡೆಗೊಳಿಸಲಾಗಿದೆ
- ಜನಜಾಗೃತಿ
- ಅಂತರ್ಜಾತಿ ವಿವಾಹ
- ಆಧುನಿಕ ಪ್ರಚಾರ ಮಾಧ್ಯಮಗಳು
- ಸ್ವಯಂಸೇವಾ ಸಂಘಟನೆಗಳು, ಮಹಿಳಾ ಸಂಘಟನೆಗಳು

**9 ಹೆಣ್ಣು ಭ್ರೂಣ ಹತ್ಯೆಗೆ ಕಾರಣಗಳು ಯಾವುವು?**

- ಬಡತನ
- ವರದಕ್ಷಿಣೆ ಭೀತಿ
- ಅನಕ್ಷರತೆ
- ಅಜ್ಞಾನ
- ಸ್ತ್ರೀವಿರೋಧಿ ನಿಲುವು
- ಗಂಡು ಮಗುವಿನ ಬಯಕೆ

**10 ಹೆಣ್ಣು ಭ್ರೂಣ ಹತ್ಯೆಯ ದುಷ್ಪರಿಣಾಮಗಳು ಯಾವುವು?**

- ಸ್ತ್ರೀ ಪುರುಷ ಲಿಂಗಾನುಪಾತದಲ್ಲಿ ಏರುಪೇರು
- ಲಿಂಗ ತಾರತಮ್ಯ
- ಹೆಣ್ಣಿನ ಅಪಮೌಲೀಕರಣ

# ಭಾರತದ ಅರಣ್ಯಗಳು

**ಒಂದು ಅಂಕದ ಪ್ರಮುಖಾಂಶಗಳು**

 ಒಂದು ಪ್ರದೇಶದಲ್ಲಿ ಪ್ರಕೃತಿದತ್ತವಾಗಿಬೆಳೆದಿರುವ ಎಲ್ಲ ಬಗೆಯ ಸಸ್ಯ ಸಮೂಹವನ್ನು ಅರಣ್ಯಗಳು ಅಥವಾ ಸ್ವಾಭಾವಿಕ ಸಸ್ಯವರ್ಗ ಎಂದು ಕರೆಯುವರು.

 ಸಸ್ಯವರ್ಗವು ವರ್ಷವೆಲ್ಲಾ ಹಸಿರಾಗಿರುವುದರಿಂದಲೇ ಇವುಗಳನ್ನು ನಿತ್ಯ ಹರಿದ್ವರ್ಣ ಅಥವಾ ಸದಾ ಹಸಿರಾಗಿರುವ ಅರಣ್ಯವೆಂದು ಕರೆಯುವರು.

 ವರ್ಷದ ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ ಎಲೆಉದುರಿಸುವುದನ್ನು ರೂಢಿಸಿ ಕೊಂಡಿರುವುದರಿದ ಇವುಗಳನ್ನು ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳೆಂದು ಕರೆಯುವರು.

 ಗಂಗಾ ನದಿಯ ಮುಖಜಭೂಮಿಯಲ್ಲಿ ಸುಂದರಿಮರಗಳು ಹೇರಳವಾಗಿರುವುದರಿಂದ ಈ ಪ್ರದೇಶವನ್ನು ಸುಂದರಬನ್ ಎನ್ನುವರು.

 ಅರಣ್ಯಗಳನ್ನು ಮಾನವ ಪ್ರಾಣಿಗಳಿಂದ ನೈಸರ್ಗಿಕ ವಿಪತ್ತುಗಳಿಂದ ಕಾಪಾಡುವುದನ್ನೆ ಅರಣ್ಯ ಸಂರಕ್ಷಣೆ ಎನ್ನುತ್ತಾರೆ.

 ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ – ಉತ್ತಾಂಚಲದ ಜಿಮ್ ಕಾರ್ಬೆಟ್

 ನೀಲಗಿರಿ ಸಂರಕ್ಷಣಾ ವಲಯವು ದೇಶದ ಪ್ರಥಮ ಜೈವಿಕ ಸಂರಕ್ಷಣಾ ವಲಯವಾಗಿದೆ.

 ದೇಶದಲ್ಲಿ ಅತೀ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ರಾಜ್ಯ – ಮದ್ಯಪ್ರದೇಶ

 ದೇಶದಲ್ಲಿ ಅತೀ ಕಡಿಮೆ ಅರಣ್ಯ ಪ್ರದೇಶ ಹೊಂದಿರುವ ರಾಜ್ಯ – HARYANA

 ಭಾರತದಲ್ಲಿ ಅತೀ ಹೆಚ್ಚು ವಿಸ್ತಾರವಾಗಿ ಅರಣ್ಯ ಎಲೆಯುದರಿಸುವ ಮಾನ್ಸೂನ್ ಅರಣ್ಯಗಳು

 ತೀರ ಪ್ರದೇಶಗಳ ತಗ್ಗುವಲಯಗಳು ಸಮುದ್ರದ ಉಬ್ಬರದ ಕಾಲದಲ್ಲಿ ನೀರಿನಿಂದ ಆವರಿಸಲ್ಪಟ್ಟಂತಹ ನದು ಮುಖಜ ಭೂಮಿಗಳು ಮತ್ತು ನದಿ ಅಳಿವೆಗಳ ತಗ್ಗು ಪ್ರದೇಶಗಳಲ್ಲಿ ಕಂಡುಬರುತ್ತವೆ.

 ವನ್ಯಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳನ್ನು ವನ್ಯಜೀವಿಧಾಮಗಳೆಂದು ಕರೆಯುವರು.

 ಉಷ್ಣವಲಯದ ಹುಲ್ಲುಗಾವಲು ಪ್ರದೇಶದಲ್ಲಿ ಎತ್ತರವಾದ ಹುಲ್ಲು ಮತ್ತು ವಿರಳವಾದ ಅಲ್ಲಲ್ಲಿ ಕುರುಚಲ ಜಾತಿ ಸಸ್ಯವರ್ಗಗಳನ್ನು ಕಾಣಬಹುದು. ಉದಾ–ಬಬೂಲ್, ಶಿಷಮ್, ಸಭಾಯ್

 ಹಿಮಾಲಯದ ಅಲ್ಪೈನ್ ಅರಣ್ಯಗಳಲ್ಲಿ ಸಾಲ್, ಬೈರಾ, ಟೂನ್ , ಸಿಲ್ವರ್, ಲಾರೆಲ್ ಎಲೆ ಮೊನಚಾದ ಅರಣ್ಯಗಳು ಪ್ರಧಾನ ವಾಗಿ ಕಂಡುಬರುತ್ತವೆ.

**ದೀರ್ಘ ಉತ್ತರ ಬಯಸುವ ಪ್ರಶ್ನೆಗಳು**

**1.ಭಾರತದಲ್ಲಿ ಕಂಡುಬರುವ ಪ್ರಮುಖ ಅರಣ್ಯದ ಪ್ರಕಾರಗಳು ಯಾವುವು ?**

 ನಿತ್ಯ ಹರಿದ್ವರ್ಣ ಅರಣ್ಯಗಳು

 ಎಲೆ ಉದುರಿಸುವ ಅರಣ್ಯಗಳು

 ಉಷ್ಣವಲಯದ ಮಾನ್ಸೂನ್ ಅರಣ್ಯಗಳು

 ಮ್ಯಾಂಗ್ರೋವ್ ಅರಣ್ಯಗಳು

 ಮರಭೂಮಿ ಅರಣ್ಯಗಳು

 ಹಿಮಾಲಯದ ಅಲ್ಪೆöÊನ್ ಅರಣ್ಯಗಳು

**2.ಅರಣ್ಯ ನಾಶಕ್ಕೆ ಕಾರಣಗಳು ಯಾವುವು ?**

 ವ್ಯವಸಾಯದ ವಿಸ್ತರಣೆ

 ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ

 ನೀರಾವರಿ ಯೋಜನೆಗಳ ನಿರ್ಮಾಣ

 ಕಾಡ್ಗಿಚ್ಚು

 ಗಣಿಗಾರಿಕೆ

**3.ಭಾರತದಲ್ಲಿ ಅರಣ್ಯ ಸಂರಕ್ಷಣಾ ಕ್ರಮಗಳನ್ನು ತಿಳಿಸಿ**

- ಕಾಡ್ಗಿಚ್ಚು ನಿಯಂತ್ರಣ
- ಸಸಿಗಳನ್ನು ನೆಡುವುದು
- ಬೀಜಗಳನ್ನು ಹರಡುವುದು
- ಪ್ರಾಣೀಗಳ ಅಥಿಯಾಗಿ ಮೆಯಿಸುವಿಕೆ ನಿಯಂತ್ರಣ
- ಕಾನೂನು ಬಾಹಿರ ಮರ ಕಡಿಯುವಿಕೆ ನಿಯಂತ್ರಣ
- ಮರಗಳಿಗೆ ತಗಲುವ ರೋಗ ನಿಯಂತ್ರಣ

**4.ಭಾರತದಲ್ಲಿ ಕಂಡುಬರುವ ಪ್ರಮುಖ ರಾಷ್ಟ್ರೀಯ ಉದ್ಯಾನವನಗಳು ಯಾವುವು** ?

- ಕಾಂಜಿರಂಗ ನ್ಯಾಷನಲ್ ಪಾರ್ಕ ಸಿಬಸಾಗರ ಅಸ್ಸಾಮ
- ಸುಂದರಬನ 24 ಪರಗಣ ಪಶ್ಚಿಮ ಬಂಗಾಳ
- ಹಜಾರಿಬಾಗ್ ನ್ಯಾಷನಲ್ ಪಾರ್ಕ ಬಿಹಾರ
- ಗಿರ್ ನ್ಯಾಷನಲ್ ಪಾರ್ಕ ಗುಜರಾತ್
- ಕನ್ಹಾ ರಾಷ್ಟ್ರೀಯ ಉದ್ಯಾನವನ ಮದ್ಯಪ್ರದೇಶ
- ತಾಂಡೋಬಾ ರಾಷ್ಟ್ರೀಯ ಉದ್ಯಾನವನ ಮಹಾರಾಷ್ಟ್ರ

**5.ಭಾರತದಲ್ಲಿ ಕಂಡುಬರುವ ಪ್ರಮುಖ ಜೈವಿಕ ಸಂರಕ್ಷಣಾ ವಲಯಗಳು ಯಾವುವು** ?

- ನೀಲಗಿರಿ
- ನಂದಾದೇವಿ
- ನೋಕ್ರೆಕ್
- ಗ್ರೇಟ್ ನಿಕೋಬಾರ್
- ಮನ್ನಾರ್ ಅಖಾತ , ಸುಂದರಬನ್ , ಸಿಮಿಲಿಪಾಲ್ , ಕಾಂಚನಗಂಗಾ

**6.ಅರಣ್ಯಗಳ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು** ?

- ಉಷ್ಣಾಂಶ
- ಮಳೆ
- ಭೂಸ್ವರೂಪ
- ಮಣ್ಣುಗಳು

**7.ಭಾರತದಲ್ಲಿ ಕಂಡುಬರುವ ಪ್ರಮುಖ ವನ್ಯ ಜೀವಿಧಾಮಗಳು ಯಾವುವು** ?

- ತಮಿಳುನಾಡು – ಅಣ್ಣಾಮಲೈ , ನೀಲಗಿರಿ
- ಪಶ್ಚಿಮ ಬಂಗಾಳ –ಮದಾರಿಹಾತ್ , ಜಾಲ್ದಪುರ
- ರಾಜಸ್ತಾನ –ಭರತಪುರ , ಕಿವೋಲ ಡಿವೋ
- ಹರಿಯಾಣ – ಸುಲ್ತಾನಪುರ , ಗುರುಗಾಂವ
- ಪಂಜಾಬ –ಬೀರ್ ಮೊತಿಬಾಗ್ , ಪಟಿಯಾಲ
- ಆಂದ್ರ ಪ್ರದೇಶ – ಗುಂಟೂರು , ನಾಗಾರ್ಜುನ ಸಾಗರ

# ಭಾರತದ ಮಣ್ಣುಗಳು

**ಒಂದು ಅಂಕದ ಪ್ರಮುಖಾಂಶಗಳು**

- ಭೂ ಮೇಲ್ಮೈಯಲ್ಲಿ ಕಂಡುಬರುವ ಸಡಿಲವಾದ ಪದರವು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆಯನ್ನೆ ಮಣ್ಣಿನ ಸವೆತ ಅಥವಾ

  ಭೂ ಸವೆತ ಎಂದು ಕರೆಯುತ್ತಾರೆ.
- ಮಣ್ಣಿನ ಸವೆತವನ್ನು ತಡೆಗಟ್ಟುವುದು ಹಾಗೂ ಅದರ ಫಲವತ್ತತೆಯನ್ನು ಕಾಪಾಡುವುದೇ ಮಣ್ಣಿನ ಸಂರಕ್ಷಣೆ ಎನ್ನುವರು.

**1 ಮಣ್ಣಿನ ಸವೆತಕ್ಕೆ ಕಾರಣಗಳು ಯಾವುವು**

- ಅರಣ್ಯಗಳ ನಾಶ
- ಅತಿಯಾಗಿ ಮೇಯಿಸುವಿಕೆ
- ಅವೈಜ್ಞಾನಿಕ ಬೇಸಾಯ
- ಅಧಿಕ ನೀರಾವರಿ ಬಳಕೆ
- ಇಟ್ಟಿಗೆ,ಹಂಚು ತಯಾರಿಸಲು ಮಣ್ಣು ಬಳಕೆ ಮಾಡುವುದು

**2 ಮಣ್ಣಿನ ಸವೆತದ ಪರಿಣಾಮಗಳು ಯಾವುವು** ?

1 ನದಿಗಳಲ್ಲಿ ಹೂಳು ತುಂಬುವಿಕೆ

2 ಪ್ರವಾಹ ಉಂಟಾಗುವಿಕೆ

3 ನದಿಗಳ ಪಾತ್ರ ಬದಲಾವಣೆ

4 ನೀರಿನ ಸಂಗ್ರಹ ಸಾಮರ್ಥ್ಯ ಕಡಿಮೆ

5 ನೀರಿನ ಇಂಗುವಿಕೆ ಪ್ರಮಾಣ ಕಡಿಮೆ

6 ಸ್ವಾಭಾವಿಕ ಚಿಲುಮೆಗಳು ಬತ್ತುತ್ತವೆ

**3 ಮಣ್ಣಿನ ಸಂರಕ್ಷಣಾ ಕ್ರಮಗಳನ್ನು ತಿಳಿಸಿ**

- ಅಡ್ಡ ಬದುಗಳ ನಿರ್ಮಾಣ
- ಚೆಕ್ ಡ್ಯಾಮ್ ಗಳ ನಿರ್ಮಾಣ
- ನೀರಿನ ಯೋಜಿತ ಬಳಕೆ
- ಅತಿಯಾಗಿ ಮೇಯಿಸುವಿಕೆ ನಿಯಂತ್ರಣ
- ಅರಣ್ಯ ನಾಶ ನಿಯಂತ್ರಣ
- ಮರು ಅರಣ್ಯೀಕರಣ
- ಇಳಿಜಾರಿಗೆ ಅಡ್ಡಲಾಗಿ ಉಳುಮೆ

**4 ಭಾರತದಲ್ಲಿ ಕಂಡುಬರುವ ಪ್ರಮುಖ ಮಣ್ಣಿನ ಪ್ರಕಾರಗಳು ಯಾವುವು** ?

1 ಮೆಕ್ಕಲು ಮಣ್ಣು

2 ಕಪ್ಪು ಮಣ್ಣು

3 ಪರ್ವತ ಮಣ್ಣು

4 ಮರಭೂಮಿ ಮಣ್ಣು

5 ಕೆಂಪು ಮಣ್ಣು

6 ಜಂಬಟ್ಟಗೆ ಮಣ್ಣು

## ವ್ಯತ್ಯಾಸ ತಿಳಿಸಿ

| ಕಪ್ಪು ಮಣ್ಣು | ಕೆಂಪು ಮಣ್ಣು |
|---|---|
| ಅಗ್ನಿ ಶಿಲೆಗಳ ಶಿಥಲೀಕರಣದಿಂದ ಉತ್ಪತ್ತಿ | ಪರ್ಯಾಯ ಪ್ರಸ್ಥಭೂಮಿಯಲ್ಲಿ ಹೆಚ್ಚು ಹರಡಿದೆ |
| ರೆಗೂರ್ ಅಥವಾ ಕಪ್ಪು ಹತ್ತಿ ಮಣ್ಣು ಎನ್ನುವರು | 5.18 ಲಕ್ಷಕೀ ಮಿ ಪ್ರದೇಶದಲ್ಲಿ ಹರಡಿದೆ |
| ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿರುವುದರಿಂದತೇವಾಂಶ ಬಹಳ ಸಮಯ ಹಿಡಿದಿಟ್ಟುಕೊಳ್ಳುತ್ತದೆ | ಬೆಳೆಗಳು ರಾಗಿ ಹೊಗೆಸೊಪ್ಪು ಎಣ್ಣೆಕಾಳುಗಳು |
| | ಕಚ್ ನಿಂದ ರಾಜಮಹಲ್ ಬೆಟ್ಟದವರೆಗೆ ವ್ಯಾಪಿಸಿದೆ |
| ಹತ್ತಿ , ಜೋಳ ಗೋಧಿ ಬೆಳೆಯುವ ಬೆಳೆಗಳು | |

| ಮೆಕ್ಕಲು ಮಣ್ಣು | ಮರಭೂಮಿ ಮಣ್ಣು |
|---|---|
| ನದಿಗಳು ಪರ್ವತದಿಂದ ಹೊತ್ತು ತಂದ ಸಂಚಯಿಸಿರುವ ಮಣ್ಣು | ಅತೀ ಕಡಿಮೆ ಮಳೆ ಮತ್ತು ಹೆಚ್ಚು ಉಷ್ಣಾಂಶ ದಲ್ಲಿ ಮರಳು ನಿರ್ಮಾಣ |
| ಭಾರತದಲ್ಲಿ ವ್ಯಾಪಕವಾಗಿ ಹರಡಿದೆ | ಕೆಂಪು ಮತ್ತು ಕಂದು ಬಣ್ಣ ಹೊಂದಿದೆ |
| 7.7 ದಶಲಕ್ಷ ಚ ಕೀ ಮಿ ಪ್ರದೇಶ ವ್ಯಾಪಿಸಿದೆ | 1.4 ದಶಲಕ್ಷ ಚ ಕೀ ಮಿ ಪ್ರದೇಶ ವ್ಯಾಪಿಸಿದೆ |
| ಗೋಧಿ ಭತ್ತ ಕಬ್ಬು ಬೆಳೆಯುವ ಬೆಳೆಗಳು | ಕಣಗಳ ನಡುವೆ ಅಧಿಕ ರಂಧ್ರತೆ ಇರುತ್ತದೆ<br>ಸಜ್ಜೆ ಖರ್ಜೂರ ಬೆಳೆಯುವ ಬೆಳೆಗಳು |

| ಜಂಬಟ್ಟಿಗೆ ಮಣ್ಣು | ಪರ್ವತ ಮಣ್ಣು |
|---|---|
| 200 ಸೆ ಮಿ ಗಿಂತ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ನಿರ್ಮಾಣ | ಸಾರಜನಕ ಸಾವಯವ ಜೈವಿಕಾಂಶಗಳು ಅಧಿಕ ಪ್ರಮಾಣ |
| ಆಧಿಕ ಮಳೆಯಿಂದ ನೀರಿನಲ್ಲಿ ಲವಣಗಳು ಕರಗಿ ಕೇವಲ ಕಬ್ಬಿಣ ಡೈ ಆಕ್ಸೈಡ್ ಮತ್ತು ಅಲ್ಯುಮಿನಿಯಂ ಇರುವುದರಿಂದ ಕೆಂಪು ಬಣ್ಣ ಹೊಂದಿದೆ | ಜಮ್ಮು ಕಾಶ್ಮೀರ ,ಹಿಮಾಚಲ ಪ್ರದೇಶ ,ಬಿಹಾರ ,ಉತ್ತರಖಂಡವ್ಯಾಪಕವಾಗಿ ಹರಡಿದೆ |
| ಪಶ್ಚಿಮ ಘಟ್ಟಗಳು,ಸಾತ್ಪುರ,ರಾಜಮಹಲ್ ಬೆಟ್ಟಗಳಲ್ಲಿ ವ್ಯಾಪಕವಾಗಿ ಹರಡಿದೆ | ಕಾಫಿ ಚಹ,ಸಾಂಬಾರ ಪದಾರ್ಥಗಳು , ಹಣ್ಣುಗಳು ಬೆಳೆಯುವ ಬೆಳೆಗಳು |
| ಕಾಫಿ ಚಹ ಬೆಳೆಯುವ ಬೆಳೆಗಳು | |

# ಭಾರತದ ಭೂ ಬಳಕೆ ಹಾಗೂ ಕೃಷಿ

## ಒಂದು ಅಂಕದ ಪ್ರಶ್ನೋತ್ತರಗಳು.

**1.ಭೂ ಬಳಕೆ ಎಂದರೇನು?**

* ಭೂಮಿ ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಅತಿ ಮುಖ್ಯವಾದುದು. ಇದನ್ನು ಸಾಗುವಳಿ, ಅರಣ್ಯ, ಹುಲ್ಲುಗಾಲು, ಬೀಳುಭೂಮಿ, ವ್ಯವಸಾಯೇತರ ಬಳಕೆ ಹೀಗೆ ವಿವಿಧ ಉದ್ದೇಶಗಳಿಗೆ ಬಳಸುವದನ್ನೇ 'ಭೂ ಬಳಕೆ' ಎನ್ನುವರು.

**2.ಪ್ರಪಂಚದಲ್ಲಿ ಅತೀ ಹೆಚ್ಚು ಸಾಗುವಳಿ ಕ್ಷೇತ್ರವನ್ನು ಹೊಂದಿರುವ ದೇಶ ಯಾವುದು?**

* ಅಮೇರಿಕಾ

**3.1950–51ರ ಅರಣ್ಯ ನೀತಿಯ ಪ್ರಕಾರ ಪ್ರತಿಶತ ಎಷ್ಟು ಅರಣ್ಯವಿರಬೇಕು?**

* ಒಟ್ಟು ವಿಸ್ತೀರ್ಣದಲ್ಲಿ ಪ್ರತಿಶತ 33ರಷ್ಟು

**4.ಭಾರತದ ಭೂಪ್ರದೇಶದಲ್ಲಿ ಪ್ರತಿಶತ ಎಷ್ಟು ಅರಣ್ಯ ಪ್ರದೇಶವಿದೆ?**

* ಪ್ರತಿಶತ 21.3ರಷ್ಟು

**5.ಬೀಳುಭೂಮಿಯನ್ನು ಹೇಗೆ ವ್ಯವಸಾಯಕ್ಕೆ ಒಳಪಡಿಸಬಹುದು?**

* ತಾಂತ್ರಿಕತೆಯನ್ನು ಅಳವಡಿಕೊಳ್ಳುವ ಮೂಲಕ ಬೀಳುಭೂಮಿಯನ್ನು ವ್ಯವಸಾಯಕ್ಕೆ ಒಳಪಡಿಸಬಹುದು.

**6.ಬಳಕೆಯಾಗದ ವ್ಯವಸಾಯ ಯೋಗ್ಯಭೂಮಿ ಹೆಚ್ಚುತ್ತಿರಲು ಕಾರಣವೇನು?**

* ಮಣ್ಣಿನ ರಾಸಾಯನಿಕ ಸಂಯೋಜನೆಯ ಬದಲಾವಣೆಗಳಿಂದಾಗಿ ಬಳಕೆಯಾಗದ ವ್ಯವಸಾಯ ಯೋಗ್ಯಭೂಮಿ ಹೆಚ್ಚುತ್ತಿದೆ.

**7.ಭಾರತದಲ್ಲಿ ಅತೀ ಹೆಚ್ಚು ಹುಲ್ಲುಗಾವಲು ಪ್ರದೇಶ ಹೊಂದಿರುವ ರಾಜ್ಯ ಯಾವುದು?**

* ಹಿಮಾಚಲ ಪ್ರದೇಶ

**8.ವ್ಯವಸಾಯ ಎಂದರೇನು?**

* ಭೂಮಿಯನ್ನು ಉಳುಮೆ ಮಾಡಿ ಸಸ್ಯಗಳನ್ನು ಪೋಷಿಸಿ ಆದರಿಂದ ಮಾನವ ಮತ್ತು ಪ್ರಾಣಿಗಳಿಗೆ ಉಪಯೋಗವನ್ನು ಪಡೆಯುವುದನ್ನೇ ವ್ಯವಸಾಯ ಅಥವಾ ಕೃಷಿ ಎಂದು ಕರೆಯುವರು

**9.ಸಾಂದ್ರ ಬೇಸಾಯ ಎಂದರೇನು?**

*. ಒಂದು ವರ್ಷದಲ್ಲಿ ಒಂದೇ ವ್ಯವಸಾಯ ಕ್ಷೇತ್ರದಿಂದ 2–3 ಬೆಳೆಗಳನ್ನು ಬೆಳೆಯುವುದಕ್ಕೆ ಸಾಂದ್ರ ಬೇಸಾಯ ಎಂದು ಕರೆಯುವರು.

**10.ಜೀವನಾಧಾರ ಬೇಸಾಯ ಎಂದರೇನು?**

* ರೈತರು ತಮ್ಮ ಜೀವನಕ್ಕೆ ಅವಶ್ಯಕವಿರುವ ಹುಟ್ಟುವಳಿಗಳನ್ನು ಬೆಳೆಯುವದಕ್ಕೆ ಜೀವನಾಧಾರದ ಬೇಸಾಯ ಎಂದು ಕರೆಯುವರು.

**11.ಜೀವನಾಧಾರ ಬೇಸಾಯದ ಎರಡು ಪ್ರಕಾರಗಳಾವುವು?**

* ಸ್ಥಿರ ಬೇಸಾಯ ಮತ್ತು ಸ್ಥಳಾಂತರ ಬೇಸಾಯ

**12.ಸ್ಥಿರ ಬೇಸಾಯ ಎಂದರೇನು?**

* ಒಂದು ಪ್ರದೇಶದಲ್ಲಿ ಜನರು ಶಾಶ್ವತವಾಗಿ ನೆಲೆಸಿ ಬೇಸಾಯ ವನ್ನು ಮಾಡುವುದಕ್ಕೆ ಸ್ಥಿರ ಬೇಸಾಯ ಎಂದು ಕರೆಯುವರು.

**13.ಸ್ಥಳಾಂತರ ಬೇಸಾಯ ಎಂದರೇನು?**

* ಒಂದೆರಡು ವರ್ಷ ಬೇಸಾಯ ಮಾಡಿ ಅಲ್ಲಿನ ಮಣ್ಣಿನ ಫಲವತ್ತತೆ ಕಡಿಮೆಯಾದ ನಂತರ ಬೇರೆ ಪ್ರದೇಶಗಳಿಗೆ ಹೋಗಿ ಬೇಸಾಯ ಮಾಡುವರು. ಇಂತಹ ಬೇಸಾಯವನ್ನು ಸ್ಥಳಾಂತರ ಬೇಸಾಯ ಎಂದು ಕರೆಯುವರು.

**14.ವಾಣಿಜ್ಯ ಬೇಸಾಯ ಎಂದರೇನು?**

* ವ್ಯಾಪಾರದ ಉದ್ದೇಶದ ಸಲುವಾಗಿ ಕೈಗೊಳ್ಳುವ ಬೇಸಾಯವನ್ನು ವಾಣಿಜ್ಯ ಬೇಸಾಯ' ಎಂದು ಕರೆಯುವರು

**15.ಮಿಶ್ರ ಬೇಸಾಯ ಎಂದರೇನು?**

* ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕಷ್ಟೇ ಅಲ್ಲದೆ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಲಾಗುವದು, ಇದಕ್ಕೆ 'ಮಿಶ್ರ ಬೇಸಾಯ' ಎಂದು ಕರೆಯುವರು.

**16.ತೋಟಗಾರಿಕೆ ಬೇಸಾಯ ಎಂದರೇನು?**

* ವಿಸ್ತಾರವಾದ ಕೃಷಿ ಭೂಮಿಯಲ್ಲಿ ಬಹುವಾರ್ಷಿಕವಾದ ಒಂದೇ ಬೆಳೆಯನ್ನು ಬೆಳೆಯುವುದಕ್ಕೆ ತೋಟಗಾರಿಕೆ ಬೇಸಾಯ ಎನ್ನುವರು.

**17.ಬೆಳೆ ಮಾದರಿ ಎಂದರೇನು?**

* ಯಾವುದೇ ಒಂದು ಪ್ರದೇಶವು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಹಲವಾರು ಬೆಳೆಗಳಿಂದ ಆವರಿಸಿದ್ದು, ಇವುಗಳ ಅನುಪಾತವನ್ನು ಬೆಳೆ ಮಾದರಿ ಎಂದು ಕರೆಯುವರು.

**18.ಬೇಸಿಗೆಯ ಅಥವಾ ಜೇಡ್ ಬೇಸಾಯ ಎಂದರೇನು?**

* ಬೇಸಿಗೆಯ ಕಾಲದಲ್ಲಿ ಮಾಡುವ ಬೇಸಾಯವನ್ನು ಜೇಡ್ ಬೇಸಾಯ ಎನ್ನುವರು.

**19.ಪ್ರಪಂಚದಲ್ಲಿ ಅತಿ ಹೆಚ್ಚು ಭತ್ತದ ಕ್ಷೇತ್ರ ಹೊಂದಿದ ದೇಶ ಯಾವುದು?**

* ಭಾರತ

**20.ಭಾರತದಲ್ಲಿ ಅತಿ ಹೆಚ್ಚು ಭತ್ತ ಬೆಳೆಯುವ ರಾಜ್ಯ ಯಾವುದು?**

* ಪಶ್ಚಿಮ ಬಂಗಾಳ

**21.ಭಾರತದ ಗೋಧಿಯ ಕಣಜ ಯಾವುದು?**

* ಪಂಜಾಬ್

**22.ಭಾರತದಲ್ಲಿ ಗೋಧಿಯ ಉತ್ಪಾದನೆಯಲ್ಲಿ ಪ್ರಥಮ ಸ್ಥಾನ ಪಡೆದ ರಾಜ್ಯ ಯಾವುದು?**

* ಉತ್ತರಪ್ರದೇಶ

**23.ಭಾರತದ ಪ್ರಮುಖ ನಾರಿನ ಬೆಳೆಗಳನ್ನು ಹೆಸರಿಸಿ.**

* ಹತ್ತಿ ಮತ್ತು ಸೆಣಬು.

**24. ಚಹಾದ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊದಲ ಸ್ಥಾನ ಪಡೆದ ದೇಶ ಯಾವುದು?**

* ಭಾರತ

**25.ಸುವರ್ಣ ಕ್ರಾಂತಿ ಎಂದರೇನು?**

* ತೋಟಗಾರಿಕೆ ಬೇಸಾಯದ ಪ್ರಗತಿಯನ್ನು ಸುವರ್ಣ ಕ್ರಾಂತಿ ಎನ್ನುವರು.

**26.ಫ್ಲೋರಿಕಲ್ಚರ್ ಎಂದರೇನು?**

* ವಾಣಿಜ್ಯ ಮಾದರಿಯ ಪುಷ್ಪ (ಹೂವು) ಕೃಷಿ ಅಥವಾ ಬೇಸಾಯವನ್ನು 'ಫ್ಲೋರಿಕಲ್ಚರ್' ಎಂದು ಕರೆಯುವರು.

**27.ಭಾರತದ ಪ್ರಮುಖ ಖಾರೀಫ್ ಬೆಳೆ ಯಾವುದು?**

* ಭತ್ತ

**28.ಭಾರತದ ಪ್ರಮುಖ ರಬಿ ಬೆಳೆ ಯಾವುದು?**

* ಗೋಧಿ

**29.ಅಧಿಕ ಜನಸಂಖ್ಯೆ ಇರುವ ಫಲವತ್ತಾದ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬೇಸಾಯ ಪದ್ದತಿ ಯಾವುದು?**

* ಸಾಂದ್ರ ಬೇಸಾಯ

**30.ಅರಣ್ಯ ನಾಶಕ್ಕೆ ಕಾರಣವಾದ ಯಾವ ಪ್ರಕಾರದ ಬೇಸಾಯವನ್ನು ನಿಷೇಧಿಸಲಾಗಿದೆ?**

* ಸ್ಥಳಾಂತರ ಬೇಸಾಯ

**31.ಭಾರತದಲ್ಲಿ ರೈತರು ಜೂನ್-ಜುಲೈನಲ್ಲಿ ಬಿತ್ತನೆ ಮಾಡಿ, ಅಕ್ಟೋಬರ್‌ನಲ್ಲಿ ಇಳುವರಿ ಪಡೆಯುತ್ತಾರೆ. ಏಕೆ?**

* ಈ ಅವಧಿಯಲ್ಲಿ ಭಾರತದಲ್ಲಿ ನೈಋತ್ಯ ಮಾನ್ಸೂನ್ ಮಾರುತಗಳು ದೇಶಾದ್ಯಂತ ಹೆಚ್ಚಿನ ಮಳೆಯನ್ನು ಸುರಿಸುತ್ತವೆ.

**32.ವಾಯವ್ಯ ಭಾರತದಲ್ಲಿ ಗೋಧಿ ಅತಿ ಮುಖ್ಯ ಹಿಂಗಾರು ಬೆಳೆಯಾಗಿದೆ. ಏಕೆ?**

* ಇಲ್ಲಿ ಚಳಿಗಾಲದಲ್ಲಿ ತಂಪಾದ ಸಮಶೀತೋಷ್ಣವಾದ ತುಂತುರು ಮಳೆಯಿಂದ ಕೂಡಿರುವ ವಾಯುಗುಣವಿರುವುದು.

**33.ಜೇಡ್ ಬೇಸಾಯದ ಅವಧಿಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳಾವುವು?**

* ಉದ್ದು, ಹೆಸರು, ಎಣ್ಣೆಕಾಳುಗಳು, ತರಕಾರಿ

**34.ಕರ್ನಾಟಕ ನಿಪ್ಪಾಣಿ, ಬೆಳಗಾವಿ ಯಾವ ಬೆಳೆಗೆ ಪ್ರಮುಖ ಮಾರುಕಟ್ಟೆ ಕೇಂದ್ರಗಳಾಗಿವೆ?**

* ಹೊಗೆಸೊಪ್ಪು/ತಂಬಾಕು

**2/3/4 ಅಂಕದ ಪ್ರಶ್ನೋತ್ತರಗಳು**

**ಪ್ರಶ್ನೆ 1.ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು?**

- ಭೂ ಸ್ವರೂಪಗಳು
- ವಾಯುಗುಣ
- ಮಣ್ಣಿನ ಲಕ್ಷಣಗಳು
- ಭೂ ಹಿಡುವಳಿ
- ಜನಸಂಖ್ಯೆ
- ವ್ಯವಸಾಯೋತ್ಪನ್ನಗಳ ಬೇಡಿಕೆ
- ಉದ್ಯೋಗ

- ಜನರ ಮನೋಭಾವ
- ಸಾಮಾಜಿಕ ಪರಿಸ್ಥಿತಿ
- ಮಾರುಕಟ್ಟೆ
- ತಾಂತ್ರಿಕತೆ, ನೀರಾವರಿ ಸೌಲಭ್ಯ
- ಮಾನವನ ಸಾಮರ್ಥ್ಯ
- ಭೂ ಒಡೆತನ ಮೊದಲಾದವು

**ಪ್ರಶ್ನೆ 2 ಭಾರತದ ಭೂ ಬಳಕೆಯ ಪ್ರಕಾರಗಳನ್ನು ಹೆಸರಿಸಿ**

- ನಿವ್ವಳ ಸಾಗುವಳಿ ಕ್ಷೇತ್ರ
- ಅರಣ್ಯ ಭೂಮಿ
- ವ್ಯವಸಾಯೇತರ ಭೂ ಬಳಕೆ
- ಬೀಳು ಭೂಮಿ
- ಹುಲ್ಲುಗಾವಲು
- ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ ಇತ್ಯಾದಿ,

**ಪ್ರಶ್ನೆ 3. ವ್ಯವಸಾಯದ ಪ್ರಾಮುಖ್ಯತೆ ತಿಳಿಸಿ**

- ವ್ಯವಸಾಯವು ಭಾರತೀಯರ ಮುಖ್ಯ ಉದ್ಯೋಗವಾಗಿದೆ.
- ಆಹಾರ ಧಾನ್ಯಗಳನ್ನು ಪೂರೈಸುತ್ತದೆ.
- ದನಕರುಗಳಿಗೆ ಮೇವನ್ನು ಪೂರೈಸುತ್ತದೆ
- ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ನೀಡಿದೆ.
- ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಪೂರೈಸುತ್ತದೆ
- ಪರೋಕ್ಷವಾಗಿ ಹಲವಾರು ಕೈಗಾರಿಕೆಗಳನ್ನು ಪೋಷಿಸುತ್ತದೆ
- ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸಿದೆ.

**ಪ್ರಶ್ನೆ 4. ವ್ಯವಸಾಯದ ವಿಧಗಳನ್ನು ಹೆಸರಿಸಿ**

- ಸಾಂದ್ರ ಬೇಸಾಯ
- ಜೀವನಾಧಾರ ಬೇಸಾಯ (ಸ್ಥಿರ ಮತ್ತು ಸ್ಥಳಾಂತರ ಬೇಸಾಯ)
- ವಾಣಿಜ್ಯ ಬೇಸಾಯ
- ಮಿಶ್ರ ಬೇಸಾಯ
- ತೋಟಗಾರಿಕೆ ಬೇಸಾಯ

**ಪ್ರಶ್ನೆ 5. ಬೆಳೆಯ ಮಾದರಿ ನಿರ್ಧರಿಸುವ ಅಂಶಗಳು ಯಾವುವು?**

- ಭೂಸ್ವರೂಪ
- ವಾಯುಗುಣ
- ಮಳೆಯ ಪ್ರಮಾಣ
- ಸಂಪ್ರದಾಯ, ಮೂಢನಂಬಿಕೆ, ಅನಕ್ಷರತೆ
- ರೈತರ ಮನೋಭಾವ
- ನೀರಿನ ಪೂರೈಕೆ
- ಸಾರಿಗೆ ಸೌಲಭ್ಯ
- ಮಾರುಕಟ್ಟೆ
- ಸುಧಾರಿತ ತಳಿಯ ಬೀಜಗಳು
- ರಾಸಾಯನಿಕ ಗೊಬ್ಬರ

**ಪ್ರಶ್ನೆ 6. ಭಾರತದ ವ್ಯವಸಾಯದ ಬೆಳೆಯ ಋತುಗಳು ಅಥವಾ ವ್ಯವಸಾಯದ ಅವಧಿಗಳನ್ನು ಹೆಸರಿಸಿ (Crop seasons) :**

- ಮುಂಗಾರು ಅಥವಾ ಖಾರೀಫ್ ಬೇಸಾಯ
- ಹಿಂಗಾರು ಅಥವಾ ರಬಿ ಬೇಸಾಯ
- ಬೇಸಿಗೆ ಅಥವಾ ಜೇಡ್ ಬೇಸಾಯ,

**ಪ್ರಶ್ನೆ 7. ಮುಂಗಾರು ಮತ್ತು ಹಿಂಗಾರು ಬೇಸಾಯದ ನಡುವಿನ ವ್ಯತ್ಯಾಸ ತಿಳಿಸಿ**

<u>ಮುಂಗಾರು ಅಥವಾ ಖಾರೀಫ್ ಬೇಸಾಯ :</u>

- ನೈಋತ್ಯ ಮನ್ಸೂನ್ ಮಾರುತಗಳ ಅವಧಿಯ ಬೇಸಾಯವನ್ನೇ 'ಮುಂಗಾರು ಬೇಸಾಯ' ಅಥವಾ 'ಖಾರೀಫ್ ಬೇಸಾಯ' ಎಂದು ಕರೆಯುವರು.
- ಜೂನ್ ಅಥವಾ ಜುಲೈ ತಿಂಗಳಿನಲ್ಲಿ ಬಿತ್ತನೆ ಮಾಡಿ ಸೆಪ್ಟೆಂಬರ್ ಮತ್ತು ಆಕ್ಟೋಬರ್ ತಿಂಗಳಲ್ಲಿ ಕಟಾವು ಮಾಡುವರು,
- ದೇಶದ ಹೆಚ್ಚು ಭಾಗವು ಈ ಅವಧಿಯಲ್ಲಿ ಸಾಗುವಳಿಗೆ ಒಳಪಟ್ಟಿರುವುದು,
- ಭತ್ತ, ರಾಗಿ, ಹತ್ತಿ, ಜೋಳ, ಮೆಕ್ಕೆಜೋಳ, ಎಣ್ಣೆಕಾಳುಗಳು ಈ ಅವಧಿಯ ಮುಖ್ಯ ಬೆಳೆಗಳಾಗಿವೆ.

<u>ಹಿಂಗಾರು ಅಥವಾ ಚಳಿಗಾಲದ ಅಥವಾ ರಬಿ ಬೇಸಾಯ :</u>

- ಇದು ಚಳಿಗಾಲದಲ್ಲಿ ಮಳೆ ಪಡೆಯುವ ಪ್ರದೇಶಗಳ ಮುಖ್ಯ ಸಾಗುವಳಿಯ ಅವಧಿಯಾಗಿದೆ.
- ಅಕ್ಟೋಬರ~ನವಂಬರನಲ್ಲಿ ಬಿತ್ತನೆ ಮಾಡಿ ಫೆಬ್ರುವರಿ–ಮಾರ್ಚ್ ಅವಧಿಯಲ್ಲಿ ಕಟಾವು ಮಾಡುವರು.
- ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ಹಾಗೂ ಆಂಧ್ರಪ್ರದೇಶ ಮತ್ತು ತಮಿಳುನಾಡು ಈ ಅವಧಿಯ ಬೇಸಾಯಕ್ಕೆ ಒಳಪಟ್ಟಿವೆ.
- ವಾಯವ್ಯ ಭಾರತದಲ್ಲಿ ಗೋಧಿ ಅತಿ ಮುಖ್ಯ ರಬಿ ಬೆಳೆಯಾಗಿದೆ.

**ಪ್ರಶ್ನೆ 8. ಭತ್ತದ ಬೆಳೆಗೆ ಬೇಕಾದ ಭೌಗೋಳಿಕ/ಪೂರಕ ಅಂಶಗಳು ಯಾವುವು?**

- 25 ಸೆಲ್ಸಿಯಸ್ ಉಷ್ಣಾಂಶ
- 100 ರಿಂದ 200 ಸೆಂ.ಮೀ ವಾರ್ಷಿಕ ಮಳೆ
- ಫಲವತ್ತಾದ ಮೆಕ್ಕಲು ಮಣ್ಣು, ಜೇಡಿ ಮಣ್ಣು
- ಸಮತಟ್ಟಾದ ಭೂಮಿ
- ಕಡಿಮೆ ಮಳೆ ಬೀಳುವ ಕಡೆಗಳಲ್ಲಿ ನೀರಾವರಿ ಅವಶ್ಯಕ.

**ಪ್ರಶ್ನೆ9.ಗೋಧಿಯ ಬೆಳೆಯ ಭೌಗೋಳಿಕ/ಪೂರಕ ಅಂಶಗಳು ಯಾವುವು?**

- 10° ಯಿಂದ 15° ಸೆಲ್ಸಿಯಸ್ ಉಷ್ಣಾಂಶ
- 50 ರಿಂದ 70 ಸೆಂ ಮೀ ವಾರ್ಷಿಕ ಮಳೆ
- ಮರಳು ಮಿಶ್ರಿತ ಜೇಡಿಮಣ್ಣು ಮತ್ತು ಕಪ್ಪು ಮಣ್ಣು

**ಪ್ರಶ್ನೆ 10. ಕಬ್ಬು ಬೆಳೆಗೆ ಬೇಕಾದ ಭೌಗೋಳಿಕ/ಪೂರಕ ಅಂಶಗಳು ಯಾವುವು?**

- ಹೆಚ್ಚು ಉಷ್ಣಂಶ ಮತ್ತು ತೇವಾಂಶ ಹೊಂದಿರುವ ವಾಯುಗುಣ

- 21 ರಿಂದ 26 ಸೆಲ್ಸಿಯಸ್ ಉಷ್ಣಾಂಶ
- 100 ರಿಂದ 150 ಸೆಂ.ಮೀ. ವಾರ್ಷಿಕ ಮಳೆ
- ಮೆಕ್ಕಲು ಮತ್ತು ಕಪ್ಪು ಮಣ್ಣು
- ನೀರಾವರಿ ಸೌಲಭ್ಯ

**ಪ್ರಶ್ನೆ 12. ಹೊಗೆಸೊಪ್ಪು ಬೆಳೆಗೆ ಬೇಕಾದ ಭೌಗೋಳಿಕ/ಪೂರಕ ಅಂಶಗಳು ಯಾವುವು?**

- 21 ರಿಂದ 27 ಸೆಲ್ಸಿಯಸ್ ಉಷ್ಣಾಂಶ
- ಸಾಧಾರಣ ಮಳೆ
- ಸರಾಸರಿ 50 ಸೆಂ.ಮೀ. ಮಳೆ
- ಮರಳು ಮಿಶ್ರಿತ ಮಣ್ಣು
- ರಾಸಾಯನಿಕ ಗೊಬ್ಬರ ಅವಶ್ಯಕ.

**ಪ್ರಶ್ನೆ 13. ಹತ್ತಿ ಬೆಳೆಗೆ ಬೇಕಾದ ಭೌಗೋಳಿಕ/ಪೂರಕ ಅಂಶಗಳು ಯಾವುವು?**

- 20 ರಿಂದ 25° ಸೆಲ್ಸಿಯಸ್ ಉಷ್ಣಾಂಶ
- 75 ರಿಂದ 150 ಸೆಂ.ಮೀ ಗಿಂತ ಹೆಚ್ಚು ಮಳೆ
- ಕಪ್ಪು ಮಣ್ಣು, ಮೆಕ್ಕಲು ಮಣ್ಣು
- ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಮಣ್ಣು

**ಪ್ರಶ್ನೆ 14. ಹತ್ತಿ ಬೆಳೆಗೆ ಬೇಕಾದ ಭೌಗೋಳಿಕ/ಪೂರಕ ಅಂಶಗಳು ಯಾವುವು?**

- 21 ಸೆಲ್ಸಿಯಸ್ ಉಷ್ಣಾಂಶ
- 150-200 ಸೆಂ.ಮೀ. ಮಳೆ
- ಮರಳು ಮಿಶ್ರಿತ ಜೇಡಿ
- ಎತ್ತರವುಳ್ಳ ಇಳಿಜಾರು

**ಪ್ರಶ್ನೆ 15. ಭಾರತದಲ್ಲಿ ತೋಟಗಾರಿಕೆ ಬೇಸಾಯದ ಪ್ರಗತಿಗೆ ಪೂರಕವಾದ ಅಂಶಗಳು ಯವುವು?**

- ವೈವಿಧ್ಯಮಯ ಭೂಸ್ವರೂಪ
- ವಾಯುಗುಣ
- ಮಣ್ಣು
- ನೀರಾವರಿ ಸೌಲಭ್ಯ
- ಕಾರ್ಮಿಕರು
- ಮಾರುಕಟ್ಟೆ
- ಸರಕಾರದ ಉತ್ತೇಜನ
- ಸಂಶೋಧನಾ ಸಂಸ್ಥೆಗಳ ಪಾತ್ರ

# ಭಾರತದ ಸಾರಿಗೆ ಹಾಗೂ ಸಂಪರ್ಕ

**ಒಂದು ಅಂಕದ ಪ್ರಶ್ನೆಗಳು**

**1 ಬೆಂಗಳೂರಿನ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು................**

- ಉತ್ತರ :- ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ

**2 ಹಳ್ಳಿಗಳು ಮತ್ತು ಕೃಷಿ ಅಭಿವೃದ್ಧಿಗೆ .........**ಅವಶ್ಯಕವಾಗಿದೆ.

- ಉತ್ತರ :- ಸಾರಿಗೆ ವ್ಯವಸ್ಥೆ

**3 ಭಾರತದ ಹೆಬ್ಬಾಗಿಲು ಎಂದು ....... ಕರೆಯುತ್ತಾರೆ**

- ಉತ್ತರ :- ಮುಂಬೈ ಬಂದರನ್ನು

**4 ಭಾರತದ ಚಹದ ಬಂದರು..........**

- ಉತ್ತರ :- ಕೊಲ್ಕತ್ತಾ

**5 ಭೌಗೋಳಿಕ ಮಾಹಿತಿ ವ್ಯವಸ್ಥೆ (GIS) ಯು 1960 ರಲ್ಲಿ ......... ದೇಶದಲ್ಲಿ ಆರಂಭಿಗೊಂಡಿತು.**

- ಉತ್ತರ :-ಕೆನಡಾ

**6.ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂದೇಶ ರವಾನೆಗಾಗಿ.........ಎಂದು ಕರೆಯುತ್ತಾರೆ.**

- ಉತ್ತರ :- ಸಂಪರ್ಕ

**7 ಭೂಮಿಯ ಮೇಲ್ಮೈ ಮೇಲೆ ದತ್ತಾಂಶಗಳನ್ನು ಕೂಡ ಸಂಗ್ರಹಿಸಿ ಅರ್ಥೈಸುವುದಕ್ಕೆ........ ಎನ್ನುತ್ತೇವೆ.**

- ಉತರ :- ಭೌಗೋಳಿಕ ಮಾಹಿತಿ ವ್ಯವಸ್ಥೆ

**8 ವಸ್ತುಗಳನ್ನು ಬೌದ್ಧಿಕವಾಗಿ ಸ್ಪರ್ಶಿಸದೆ ದೂರದಿಂದಲೇ ಅವುಗಳಿಂದ ಸಂಬಂಧಿಸಿದ ಮಾಹಿತಿ ಸಂಗ್ರಹಣೆಯನ್ನು.......**

- ಉತ್ತರ :-ದೂರ ಸಂವೇದಿ ತಂತ್ರಜ್ಞಾನ

**II ಎರಡು ಅಂಕದ ಪ್ರಶ್ನೆಗಳು**

**1] ಭಾರತದಲ್ಲಿರುವ ನಾಲ್ಕು ಪ್ರಕಾರದ ಮುಖ್ಯರಸ್ತೆಗಳು ಯಾವುವು?**

1 ರಸ್ತೆ ಸಾರಿಗೆ 2 ರೈಲು ಸಾರಿಗೆ 3 ವಾಯು ಸಾರಿಗೆ 4 ಜಲ ಸಾರಿಗೆ

**2] ರಸ್ತೆ ಸಾರಿಗೆಯಿಂದ ಆಗುವ ಪ್ರಯೋಜನಗಳು ಯಾವುವು?**

1 ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಾರಿಗೆ ಪಾತ್ರ ಮಹತ್ವದ್ದಾಗಿದೆ.

2 ವ್ಯವಸಾಯ, ಕೈಗಾರಿಕೆ, ಗಣಿಗಾರಿಕೆ, ಅರಣ್ಯ ಗಾರಿಕೆ ಮೀನುಗಾರಿಕೆ ಮೊದಲಾದವುಗಳನ್ನು ಮಾರುಕಟ್ಟೆಯೊಂದಿಗೆ ಸಂಪರ್ಕಿಸುವುದು ಸಾರಿಗೆಯಾಗಿದೆ.

3 ಸಾರಿಗೆಯು ಸರಕು ಮತ್ತು ಸೇವೆಗಳನ್ನು ಉತ್ಪಾದಿತ ಪ್ರದೇಶಗಳಿಂದ ಬೇಡಿಕೆ ಇರುವಡೆ ಸಮಯಕ್ಕೆ ಸರಿಯಾಗಿ ಸಾಗಿಸಲು ಸಾಧ್ಯವಾಗುತ್ತದೆ.

**3] ಭಾರತದಲ್ಲಿರುವ ಪ್ರಮುಖ ಬಂದರುಗಳ ಪಟ್ಟಿ ಮಾಡಿರಿ.**

A ಪಶ್ಚಿಮ ತೀರದ ಬಂದರುಗಳು:-ಕಾಂಡ್ಲಾ ,ಮುಂಬೈ, ಮರ್ಮ ಗೋವಾ,ನವಮಂಗಳೂರು,ಕೊಚ್ಚಿ

B.ಪೂರ್ವತೀರದ ಬಂದರುಗಳು :-ತೂತುಕುಡಿ ಚೆನ್ನೈ ವಿಶಾಖಪಟ್ಟಣ,ಪಾರಾದೀಪ ,ಹಾಲ್ ದಿಯಾ

**III ಮೂರು ಅಂಕದ ಪ್ರಶ್ನೆಗಳು**

1] ರಸ್ತೆ ಸಾರಿಗೆಯ ಅನಾನುಕೂಲತೆಗಳು ಯಾವುವು?

- A] ಅನೇಕ ಗ್ರಾಮೀಣ ಹಾಗೂ ಜಿಲ್ಲಾ ರಸ್ತೆಗಳು ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಕೆಲವು ಬಾರಿ ಅನುಪಯುಕ್ತವಾಗುತ್ತದೆ.
- B] ರಸ್ತೆ ಸಾರಿಗೆಯು ಪರಿಸರ ಮಾಲಿನ್ಯ ವಾಹನಗಳ ದಟ್ಟನೆ ಹಾಗೂ ಅಪಘಾತಗಳಿಗೂ ಕಾರಣವಾಗುತ್ತದೆ

- C ರಸ್ತೆಯು ಮಳೆ ಪ್ರವಾಹ ಹಾಗೂ ಚಂಡಮಾರುತಗಳಿಂದ ಆಗಾಗ ಹಾಳಾಗುತ್ತಿದ್ದು ದುರಸ್ತಿ ಮಾಡಿಸುವ ಅವಶ್ಯಕತೆ ಇರುತ್ತದೆ
- D ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ನಿರ್ಮಾಣ ಹಾಗೂ ನಿರ್ವಹಣೆ ಅಸಮರ್ಪಕವಾಗಿದೆ
- E ರಸ್ತೆ ಬದಿಯಲ್ಲಿ ಬೇಕಾಗಿರುವ ಅಗತ್ಯತೆಗಳ ಕೊರತೆಗಳನ್ನು ನಾವು ದೇಶಾದ್ಯಂತ ಕಾಣಬಹುದು.

**2 ] ಭೌಗೋಳಿಕ ಮಾಹಿತಿ ವ್ಯವಸ್ಥೆಯ ಉಪಯೋಗಗಳು ಯಾವುವು?**

- A ]ಜಿಐಎಸ್ ತಂತ್ರಜ್ಞಾನ ಆಧಾರಿತ ನಕ್ಷೆಗಳು ಹೆಚ್ಚು ಆಕರ್ಷಕ ಹಾಗೂ ಮಾಹಿತಿಯನ್ನು ಸ್ಪಷ್ಟವಾಗಿ ನೀಡುತ್ತವೆ.
- B ವಿವಿಧ ಬಗೆಯ ಭೌಗೋಳಿಕ ಸಾಮಾಜಿಕ ಆರ್ಥಿಕ ಭೂ ಮೇಲ್ಮೈ ಮಾಹಿತಿಯನ್ನು ಸುಲಭವಾಗಿ ವಿಶ್ಲೇಷಿಸಬಹುದು, ಮಾದರಿಯನ್ನು ರಚಿಸಬಹುದು.
- C ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಜಿಐಎಸ್ ತಂತ್ರಜ್ಞಾನದ ಪ್ರಾಮುಖ್ಯತೆ ಹೆಚ್ಚು ಕಂಡು ಬರುತ್ತದೆ.
- D ಕಂಪ್ಯೂಟರ್ ಆಧಾರಿತ ವಿಶ್ಲೇಷಣೆಯಾಗಿದ್ದು ನಕ್ಷೆಗಳನ್ನು ಅತಿ ಶೀಘ್ರವಾಗಿ ಅಗತ್ಯಕ್ಕೆ ತಕ್ಕಂತೆ ನಕ್ಷಶಾಸ್ತ್ರ ನೆರವಿಲ್ಲದೆ ಅತಿ ಕಡಿಮೆ ಅವಧಿಯಲ್ಲಿ ಪಡೆಯಬಹುದು ಹಾಗೂ ನಕ್ಷೆಗಳನ್ನು ಮಾರ್ಪಡಿಸಬಹುದು.
- E ಪ್ರಸ್ತುತ ಬಳಕೆಯಾಗುತ್ತಿರುವ ಭೌಗೋಳಿಕ ಮಾಹಿತಿ ವ್ಯವಸ್ಥೆ ಹಾಗೂ ನಕ್ಷೆಗಳ ರಚನೆ ತಂತ್ರಾಂಶದಲ್ಲಿ ಆಪಲ್ ಆರ್ಕ್ ಇನ್ಫೋ ಆಟೋ ಕ್ಯಾಡ್ ಮ್ಯಾಪ್ ಇನ್ ಪೋ ಆಕ ವ್ಯೂಮೊದಲಾದವು ಅತಿ ಮುಖ್ಯವಾಗಿವೆ.

**3] ದೂರ ಸಂವೇದಿ ತಂತ್ರಜ್ಞಾನದ ಉಪಯೋಗಗಳು ಯಾವವು?**

- A ದೂರಸವೇದಿ ತಂತ್ರಜ್ಞಾನದ ಚಿತ್ರಗಳಿಂದ ಆ ಕಾಲದ ಅವಧಿಯಲ್ಲಿನ ಹಾಗೂ ನಂಬಲು ಅರ್ಹವಾದ ಸ್ಪಷ್ಟ ಮಾಹಿತಿ ದೊರೆಯುವುದು.
- B ಇದು ಭೂ ಮೇಲ್ಮೈನೆ ಸರ್ವೇಕ್ಷಣೆಗಿಂತ ಅತಿ ಶೀಘ್ರ ಅಲ್ಪಾವಧಿ ಹಾಗೂ ಕಡಿಮೆ ವೆಚ್ಚದ ಮಾಹಿತಿ ಸಂಗ್ರಹಣೆಯ ವಿಧಾನವಾಗಿದೆ.
- C ಇದರಿಂದ ಪಡೆಯುವ ಮಾಹಿತಿಯನ್ನು ಸುಲಭವಾಗಿ ಕಂಪ್ಯೂಟರ್ಗಳಿಂದ ವಿಶ್ಲೇಷಿಸಬಹುದು.
- D ಹವಾಮಾನದ ವೈಪರಿತ್ಯ ಹಾಗೂ ಭೂ ಮೇಲ್ಮೈ ಆಡಚಣೆಗಳಿದ್ದರೂ ದೂರ ಸಂವೇದಿ ಚಿತ್ರಗಳನ್ನು ಉಪಗ್ರಹಗಳಿಂದ ಪಡೆಯಬಹುದು..
- E ಚಂಡು ಮಾರುತ ಬಿರುಗಾಳಿ ಪ್ರವಾಹ ಬರಗಾಲ ಮೊದಲಾದ ನೈಸರ್ಗಿಕ ಪ್ರಕೋಪಗಳ ಪ್ರಭಾವದ ಪ್ರದೇಶ ಹಾಗೂ ಅವುಗಳ ಅನಾಹುತಗಳ ತೀವ್ರತೆಯ ಅಧ್ಯಯನಗಳಿಗೆ ದೂರ ಸಂವೇದಿ ಚಿತ್ರಗಳು ಅತ್ಯಂತ ಉಪಯುಕ್ತವಾಗಿವೆ.
- F ಉಪಗ್ರಹ ಚಿತ್ರಗಳು ಭೂಬಳಿಕೆ ಅರಣ್ಯ ಪ್ರದೇಶ ಜಲರಾಶಿಗಳು ವಸತಿ ಪ್ರದೇಶಗಳು ಬೆಳೆಗಳ ಹಂಚಿಕೆ ಭೂ ಸವೆತ ಖನಿಜ ನಿಕ್ಷೇಪಗಳು

ಹೀಗೆ ವಿವಿಧ ಬಗೆಯ ಪ್ರಾಕೃತಿಕ ಸಂಪನ್ಮೂಲಗಳ ವಿಶ್ಲೇಷಣೆಯಲ್ಲಿ ಅತ್ಯಂತ ಮಹತ್ತರವಾದದ್ದು.

# ಭಾರತದ ಪ್ರಮುಖ ಕೈಗಾರಿಕೆಗಳು

## ಒಂದೇ ವಾಕ್ಯದಲ್ಲಿ ಉತ್ತರಿಸಿರಿ

1. ಕೈಗಾರಿಕೆ ಎಂದರೇನು

ಕಚ್ಚಾ ವಸ್ತುಗಳನ್ನು ಸಿದ್ಧ ವಸ್ತುಗಳನ್ನಾಗಿ ಪರಿವರ್ತಿಸುವ ಮಾನವನ ಎಲ್ಲ ಚಟುವಟಿಕೆಗಳು.

2. ಕೈಗಾರಿಕಾ ಪ್ರದೇಶ ಅಥವಾ ವಲಯ ಎಂದರೇನು.

ದೇಶದ ಕೆಲವು ಭಾಗಗಳಲ್ಲಿ ಹೆಚ್ಚು ಕೈಗಾರಿಕೆಗಳು ಕೇಂದ್ರೀಕೃತವಾಗಿವೆ ಇವೆ ಕೈಗಾರಿಕಾ ಪ್ರದೇಶಗಳು

3. ಭಾರತದ ಮೊದಲ ಕಬ್ಬಿನ ಮತ್ತು ಉಕ್ಕಿನ ಕೈಗಾರಿಕೆ ಸ್ಥಾಪನೆಯಾಗಿದ್ದು ಎಲ್ಲಿ ?

ಪಶ್ಚಿಮ್ ಬಂಗಾಳದ ಕುಲ್ಟಿ ಎಂಬಲ್ಲಿ.

4. ಭಾರತದ ಮೊದಲ ಕಾಗದ ಕೈಗಾರಿಕೆ ಯಾವುದು?.

ಉತ್ತರ. ಸೆಹರಾಂಪುರ.

5. ಭಾರತದ ಕಾಟನೋ ಪೊಲೀಸ್ ಅಥವಾ ಮಂಚೆಸ್ಟರ್ ಯಾವುದು?

ಉತ್ತರ. ಮುಂಬೈ ನಗರ

6. ಭಾರತದ ಸಿಲಿಕಾನ್ ಸಿಟಿ ಯಾವುದು?

ಉತ್ತರ. ಬೆಂಗಳೂರು

7. ಬೆಂಗಳೂರಿಗೆ ಸಿಲಿಕಾನ್ ಸಿಟಿ ಎಂದು ಹೆಸರು ಬರಲು ಕಾರಣವೇನು.?

ಉತ್ತರ. ಬೆಂಗಳೂರು ನಗರದಲ್ಲಿ ಸಾಫ್ಟ್ವೇರ್ ಕೈಗಾರಿಕೆಗಳು ಹೆಚ್ಚು ಕೇಂದ್ರೀಕೃತಗೊಂಡಿವೆ...

8. ಜ್ಞಾನಾಧಾರಿತ ಕೈಗಾರಿಕೆ ಎಂದರೇನು?

ಉತ್ತರ. ಅತಿ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಮಾಹಿತಿ ತಂತ್ರಜ್ಞಾನವನ್ನು ಜ್ಞಾನಾಧಾರಿತ ಕೈಗಾರಿಕೆ ಎನ್ನುವರು.

,9. ಜವಳಿ ಕೈಗಾರಿಕೆ ಎಂದರೇನು?

ಉತ್ತರ. ವಿವಿಧ ಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವುದಕ್ಕೆ ಜವಳಿ ಕೈಗಾರಿಕೆ ಎನ್ನುವರು.

10. ಇಸ್ರೋದ ಪ್ರಧಾನ ಕಛೇರಿ ಎಲ್ಲಿದೆ?

ಉತ್ತರ. ಬೆಂಗಳೂರು.

11. ಇಸ್ರೋ ಸಂಸ್ಥೆ ಸ್ಥಾಪನೆಯಾಗಿದ್ದು ಯಾವಾಗ?

ಉತ್ತರ. 1969 ಆಗಸ್ಟ್ 15.

- 12. ಇಸ್ರೋದ ಪ್ರಥಮ ಅಧ್ಯಕ್ಷರು ಯಾರು?
- ಉತ್ತರ. ಡಾಕ್ಟರ್ ವಿಕ್ರಂ ಸಾರಾಭಾಯಿ.
- ಕೈಗಾರಿಕಾ ವಲಯಗಳನ್ನು ಪಟ್ಟಿ ಮಾಡಿರಿ?
- ಹೂಗ್ಲಿ– ಕಲ್ಕತ್ತಾ ಪ್ರದೇಶ.
- ಮುಂಬೈ –ಪೂನಾ ಪ್ರದೇಶ
- ಅಹಮದಾಬಾದ್ ವಡೋದರ ಪ್ರದೇಶ
- ದಾಮೋದರ ಕಣಿವೆ ಪ್ರದೇಶ
- ವಿಶಾಖಪಟ್ಟಣ ಗುಂಟೂರ್ ಪ್ರದೇಶ
- ಕೊಲ್ಲಂ ತಿರುವನಂತಪುರಂ ಪ್ರದೇಶ
- ನ್ಯಾಷನಲ್ ಕ್ಯಾಪಿಟಲ್ ಪ್ರದೇಶ
- ದಕ್ಷಿಣ ಕೈಗಾರಿಕಾ ಪ್ರದೇಶ.

2.. ಕೈಗಾರಿಕಾ ಸ್ಥಾನಿಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

ಉತ್ತರ. 1. ಕಚ್ಚಾ ವಸ್ತುಗಳು 2. ಶಕ್ತಿ ಸಂಪನ್ಮೂಲಗಳು

3. ಮಾರುಕಟ್ಟೆ ಸೌಲಭ್ಯ 4. ಸಾರಿಗೆ ಮತ್ತು ಸಂಪರ್ಕ

5. ಕಾರ್ಮಿಕರ ಪೂರೈಕೆ 6. ಬಂದರುಗಳ ಸೌಲಭ್ಯ

7. ಸೂಕ್ತವಾಯುಗುಣ 8. ತಾಂತ್ರಿಕತೆ

9. ಸರ್ಕಾರದ ನೀತಿಗಳು..

3. ಸಾರ್ವಜನಿಕ ಮತ್ತು ಖಾಸಗಿ ವಲಯದ ಕಬ್ಬಿನ ಮತ್ತು ಉಕ್ಕಿನ ಕೈಗಾರಿಕೆಗಳನ್ನು ಹೆಸರಿಸಿ..?

ಉತ್ತರ

1. ಟಾಟಾ ಕಬ್ಬಿನ ಮತ್ತು ಉಕ್ಕಿನ ಕೈಗಾರಿಕೆ

2. ಇಂಡಿಯನ್ ಐರನ್ ಮತ್ತು ಸ್ಟೀಲ್ ಕಂಪನಿ

3. ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಕಂಪನಿ

4. ಬಿಲಾಯಿ ಐರನ್ ಮತ್ತು ಸ್ಟೀಲ್ ಕಂಪನಿ

5. ರೂರ್ಕೆಲ್ಲ ಐರನ್ ಮತ್ತು ಸ್ಟೀಲ್ ಕಂಪನಿ

6. ದುರ್ಗಾಪುರ ಐರನ್ ಮತ್ತು ಸ್ಟೀಲ್ ಕಂಪನಿ.

7. ಬೊಕಾರೋ ಐರನ್ ಮತ್ತು ಸ್ಟೀಲ್ ಕಂಪನಿ

8. ಸೇಲಂ ಐರನ್ ಮತ್ತು ಸ್ಟೀಲ್ ಕಂಪನಿ

9 ವಿಶಾಖಪಟ್ಟಣಂ ಐರನ್ ಮತ್ತು ಸ್ಟೀಲ್ ಕಂಪನಿ..

4. ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ ತಿಳಿಸಿ?

ಉತ್ತರ:

1. ವಿದೇಶಿ ವಿನಿಮಯ ಗಳಿಕೆ

2. ಸಾಮಾಜಿಕ ಅಭಿವೃದ್ಧಿಗೆ

3. ಆರ್ಥಿಕ ಬೆಳವಣಿಗೆಗೆ ಸಹಾಯಕ

4. ಉದ್ಯೋಗ ಅವಕಾಶಗಳನ್ನು ಒದಗಿಸುತ್ತದೆ

5. ಕೈಗಾರಿಕೆಗಳ ಅಭಿವೃದ್ಧಿಗೆ

6. ತಾಂತ್ರಿಕ ಮತ್ತು ವೈಜ್ಞಾನಿಕ ಬೆಳವಣಿಗೆಗೆ

ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕೆಗಳು ಮಹತ್ವದ ಪಾತ್ರವನ್ನು ವಹಿಸುತ್ತೇವೆ. ಏಕೆ?

ಉತ್ತರ:

1. ರಾಷ್ಟ್ರೀಯ ಆದಾಯ ಹೆಚ್ಚಾಗುತ್ತದೆ

2. ತಲಾ ಆದಾಯ ಹೆಚ್ಚಾಗುತ್ತದೆ

3. ವಿದೇಶಿ ವಿನಿಮಯ ಗಳಿಕೆ

4. ಉದ್ಯೋಗಾವಕಾಶಗಳ ಹೆಚ್ಚಳ

5. ಜನರ ಜೀವನಮಟ್ಟ ಸುಧಾರಣೆ

6. ಕೃಷಿ ಅಭಿವೃದ್ಧಿ

7. ತೃತೀಯ ವಲಯದ ಅಭಿವೃದ್ಧಿ

ಸಕ್ಕರೆ ಕೈಗಾರಿಕೆಯ ಸ್ಥಾನಿಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

ಉತ್ತರ:

1. ಮೂಲ ಕಚ್ಚಾ ವಸ್ತು ಕಬ್ಬು

2. ನೀರಿನ ಪೂರೈಕೆ

3. ಸಮರ್ಪಕವಾದ ಸಾರಿಗೆ ವ್ಯವಸ್ಥೆ

4. ಸರ್ಕಾರದ ಪ್ರೋತ್ಸಾಹ

5. ವಿದ್ಯುತ್ ಪೂರೈಕೆ

6. ಬಂಡವಾಳ

7. ಮಾರುಕಟ್ಟೆ ಸೌಲಭ್ಯಗಳು

8. ಸಾರಿಗೆ ಸಂಪರ್ಕ

7. ಕಾಗದ ಕೈಗಾರಿಕೆ ಸ್ಥಾಪನೆಗೆ ಬೇಕಾಗಿರುವ ಅಂಶಗಳಾವುವು?

ಉತ್ತರ.

1. ಬಿದಿರು ಮರದ ತಿರುಳು ಮತ್ತು ಇತರೆ ಕಚ್ಚಾ ವಸ್ತುಗಳು

2. ಅಪಾರ ನೀರು

3. ಕಾರ್ಮಿಕರ ಲಭ್ಯತೆ

4. ವಿಶಾಲ ಮಾರುಕಟ್ಟೆ

5. ಸಾರಿಗೆ ಸೌಲಭ್ಯ

6. ರಾಸಾಯನಿಕ ವಸ್ತುಗಳು

7. ವಿದ್ಯುತ್ ಪೂರೈಕೆ...

8. ಮುಂಬೈ ನಗರವನ್ನು ಭಾರತದ ಮ್ಯಾಂಚೆಸ್ಟರ್ ಎಂದು

ಕರೆಯಲು ಕಾರಣವೇನು?

ಉತ್ತರ.

1. ಅತಿ ಹೆಚ್ಚು ಹತ್ತಿ ಗಿರಣಿಗಳಿವೆ

2. ಪ್ರಮುಖ ಜವಳಿ ಉತ್ಪಾದನೆ ಕೇಂದ್ರವಾಗಿದೆ

3. ಮಾರುಕಟ್ಟೆ ಸೌಲಭ್ಯವಿದೆ

4. ನುರಿತ ಕಾರ್ಮಿಕರಿದ್ದಾರೆ

5. ಬಂಡವಾಳ ಕೇಂದ್ರೀಕೃತ ಗೊಂಡಿದೆ.

6. ಶಕ್ತಿ ಸಂಪನ್ಮೂಲಗಳ ಲಭ್ಯತೆ

7. ಕಚ್ಚಾವಸ್ತು ಹತ್ತಿಯ ಪೂರೈಕೆ ಹೆಚ್ಚಾಗಿದೆ.

9. ಜೈವಿಕ ತಂತ್ರಜ್ಞಾನದ ಕೃಷಿ ಕ್ಷೇತ್ರದ ಮೇಲಿನ

ಪರಿಣಾಮಗಳೇನು?

ಉತ್ತರ.

1. ಹೊಸ ಹೊಸ ಬೀಜಗಳ ಅಭಿವೃದ್ಧಿಯಿಂದ ಇಳುವರಿ

ಹೆಚ್ಚಾಯಿತು

2. ಜೈವಿಕ ಗೊಬ್ಬರದ ಬಳಕೆಯಿಂದ ಮಣ್ಣಿನ ಫಲವತ್ತತೆ

ಹೆಚ್ಚಾಯಿತು

3. ಕೀಟನಾಶಕದ ಅಭಿವೃದ್ಧಿ

4. ವ್ಯವಸಾಯದಲ್ಲಿ ದೊಡ್ಡ ಕ್ರಾಂತಿಯಾಯಿತು

5. ಕೃಷಿ ಉತ್ಪನ್ನಗಳಲ್ಲಿ ಹೆಚ್ಚಳವಾಯಿತು

6. ದೇಶದ ಆರ್ಥಿಕ ಅಭಿವೃದ್ಧಿಗೆ ಕೃಷಿಯ

ಪಾಲು ಅಧಿಕವಾಯಿತು..

10. ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಆದ

ಬದಲಾವಣೆಗಳೇನು?

1. ಜಾಗತಿಕ ಆರ್ಥಿಕ ವ್ಯವಸ್ಥೆ ಸುಧಾರಣೆ

2. ಶೈಕ್ಷಣಿಕ ಸುಧಾರಣೆ

3. ಸಾಮಾಜಿಕ ಬದಲಾವಣೆ

4. ಆರ್ಥಿಕ ಅಭಿವೃದ್ಧಿ

5. ಚುನಾವಣೆಗಳಲ್ಲಿ ಅಗಾಧ ಸುಧಾರಣೆ

6. ಸಂಪರ್ಕ ಕ್ಷೇತ್ರದಲ್ಲಿ ಅಗಾದ ಪ್ರಗತಿ

7. ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕ ಆಡಳಿತ

11. ಕಬ್ಬಿನ ಮತ್ತು ಉಕ್ಕಿನ ಕೈಗಾರಿಕೆಯನ್ನು ಮೂಲ ಕೈಗಾರಿಕೆ

ಎಂದು ಕರೆಯಲು ಕಾರಣವೇನು.?

ಉತ್ತರ.

1. ಯಂತ್ರೋಪಕರಣ

2. ರೈಲು ಮತ್ತು ಹಡಗು ನಿರ್ಮಾಣ

3. ವಿದ್ಯುತ್ ಯೋಜನೆ

4. ನೀರಾವರಿ ಯೋಜನೆಗಳು

5. ಕಟ್ಟಡ ನಿರ್ಮಾಣ

6. ಗ್ರಹ ನಿರ್ಮಾಣ...

12. ಇಸ್ರೋದ ಮಹತ್ವದ ಸಾಧನೆಗಳಾವುವು?

1. ಉಪಗ್ರಹ ವ್ಯವಸ್ಥೆಯ ಅಭಿವೃದ್ಧಿ

2. ಚಂದ್ರನ ದಕ್ಷಿಣ ದ್ರುವ ಬಳಿ ಇಳಿದಿದ್ದು

3. ಮೊದಲ ಪ್ರಯತ್ನದಲ್ಲಿ ಮಂಗಳ ಗ್ರಹವನ್ನು ತಲುಪಿದ್ದು

4. ಬೇರೆ ದೇಶದ ಉಪಗ್ರಹಗಳನ್ನು ಯಶಸ್ವಿಯಾಗಿ

ಹಾರಾಟ ಮಾಡಿದ್ದು....

# ಗ್ರಾಮೀಣಾಭಿವೃದ್ಧಿ

**ಒಂದು ಅಂಕದ ಪ್ರಶ್ನೋತ್ತರಗಳು**

**1.'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು ಯಾರು?**

* ಮಹಾತ್ಮ ಗಾಂಧೀಜಿ

**2.2011ರ ಜನಗಣತಿ ಪ್ರಕಾರ ಶೇ. ಎಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ?**

* ಶೇ 68.84

**3. ಕೈಗಾರಿಕೆ ಮತ್ತು ಸೇವಾ ವಲಯಗಳ ವಿಸ್ತರಣೆಗೆ ಕಾರಣವಾದ ಪ್ರಕ್ರಿಯೆಗಳಾವುವು?**

* ಉದಾರೀಕರಣ ಮತ್ತು ಜಾಗತೀಕರಣ

**4.ಗ್ರಾಮೀಣಾಭಿವೃದ್ಧಿ ಎಂದರೇನು?**

* ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಗ್ರಾಮೀಣ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಉನ್ನತೀಕರಿಸುವುದನ್ನು ಗ್ರಾಮೀಣಾಭಿವೃದ್ಧಿ ಎನ್ನುವರು.

**5.ಸಂವಿಧಾನದ ಯಾವ ತಿದ್ದುಪಡಿಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲಾಗಿದೆ?**

* 1993 ರ ಸಂವಿಧಾನದ 73 ನೇ ತಿದ್ದುಪಡಿಯ ಮೂಲಕ

**6.ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.**

* ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ

**7. ಗ್ರಾಮೀಣ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ಜಾರಿಗೆ ಯೋಜನೆ ಯಾವುದು?**

* ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ" (MGNREGI)

**8.ವಸತಿಹೀನರಿಗೆ ಮನೆಗಳನ್ನು ನಿರ್ಮಿಸಲು ಜಾರಿಗೊಳಿಸಲಾದ ವಸತಿ ಯೋಜನೆಗಳಾವುವು?**

* 'ಇಂದಿರಾ ಆವಾಸ್ ಯೋಜನೆ', 'ಅಂಬೇಡ್ಕರ್-ವಾಲ್ಮೀಕಿ ವಸತಿ ಯೋಜನೆ', ಆಶ್ರಯ ಯೋಜನೆ

**8. 'ಸುವರ್ಣ ಗ್ರಾಮೋದಯ ಯೋಜನೆ'ಯನ್ನು ಏಕೆ ಅನುಷ್ಠಾನಗೊಳಿಸಲಾಗಿದೆ?**

* ಗ್ರಾಮೀಣ ಮೂಲಭೂತ ಸೌಕರ್ಯಗಳನ್ನು ಬಲಪಡಿಸಲು.

**9.ಪಂಚಾಯತ್ ರಾಜ್ ಸಂಸ್ಥೆಗಳು ಯಾವ ತತ್ವದಡಿ ಕಾರ್ಯನಿರ್ವಹಿಸುತ್ತವೆ?**

* ಪ್ರಜಾಪ್ರಭುತ್ವ ತತ್ವದಡಿ

**10.ಮಹಿಳೆಯರ ಯಾವ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ?**

* ಮನೆಯಲ್ಲಿ ಮಾಡುವ ಕೂಲಿರಹಿತ ದುಡಿಮೆಯನ್ನು

**11.ವಿಕೇಂದ್ರಿಕರಣ ಎಂದರೇನು?**

* ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನುತ್ತಾರೆ

**<u>2/3/4 ಅಂಕದ ಪ್ರಶ್ನೋತ್ತರಗಳು</u>**

**ಪ್ರಶ್ನೆ.1 ಭಾರತದ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?**

- ಬಹುತೇಕರು ಕೃಷಿಯೊಂದನ್ನೇ ಅವಲಂಬಿಸಿದ್ದಾರೆ.
- ಜನರಲ್ಲಿ ಬಡತನ ಹೆಚ್ಚಾಗಿದೆ.
- ಗ್ರಾಮೀಣ ಗುಡಿಕೈಗಾರಿಕೆಗಳು ನಶಿಸಿಹೋಗಿವೆ.
- ಸುಮಾರು ಶೇ.60 ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದಾರೆ
- ರಾಷ್ಟ್ರೀಯ ಆದಾಯಕ್ಕೆ ಈ ವಲಯದ ಕೊಡುಗೆ ನಿರಂತರವಾಗಿ ಕಡಿಮೆಯಾಗುತ್ತಿದೆ
- ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚುತ್ತಿದೆ.

**ಪ್ರಶ್ನೆ.2 ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ತಿಳಿಸಿ/ ಗ್ರಾಮೀಣಾಭಿವೃದ್ಧಿಯು ದೇಶದ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ?**

- ಗ್ರಾಮೀಣ ಪ್ರದೇಶದಲ್ಲಿ ಅತಿ ಹೆಚ್ಚಿನ ಜನರು ವಾಸಿಸುತ್ತಿದ್ದಾರೆ.
- ಅವರು ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ, ಮೂಲ ಸೌಕರ್ಯಗಳ ಕೊರತೆ ಎದುರಿಸುತ್ತಿದ್ದಾರೆ.
- ಗ್ರಾಮೀಣ ಜನರಿಗೆ ಶಿಕ್ಷಣ, ತರಬೇತಿ, ಆರೋಗ್ಯ, ನೈರ್ಮಲ್ಯ ಮುಂತಾದ ಸೌಲಭ್ಯಗಳನ್ನು ಒದಗಿಸಬೇಕಿದೆ
- ಅವರ ಜ್ಞಾನ, ಕೌಶಲ್ಯ ಮತ್ತು ದುಡಿಯುವ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿದೆ.
- ಗ್ರಾಮೀಣ ಭಾಗದಲ್ಲಿ ಕೃಷಿಯ ಜೊತೆಗೆ ಕೃಷಿ ಸಂಬಂಧಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ
- ಕೃಷಿಯನ್ನು ಒಂದು ಲಾಭದಾಯಕ ಹಾಗೂ ಆಕರ್ಷಕ ಉದ್ಯೋಗವನ್ನಾಗಿ ಅಭಿವೃದ್ಧಿಪಡಿಸಬೇಕಾಗಿದೆ.
- ಗ್ರಾಮೀಣ ಜನರು ನಗರಗಳಿಗೆ ವಲಸೆಹೋಗುವುದನ್ನು ತಪ್ಪಿಸಬಹುದಾಗಿದೆ.
- ಅಗತ್ಯ ಮೂಲ ಸೌಕರ್ಯಗಳನ್ನು ಗ್ರಾಮೀಣ ಜನರಿಗೆ ಒದಗಿಸಿಕೊಟ್ಟು, ಗ್ರಾಮೀಣ ಉತ್ಪಾದಕತೆಯನ್ನು ಹೆಚ್ಚಿಸಬೇಕಾಗಿದೆ.
- ಸಣ್ಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ, ಗ್ರಾಮೀಣ ಅರ್ಥವ್ಯವಸ್ಥೆಯನ್ನು ಬಲಪಡಿಸಬಹುದು

**ಪ್ರಶ್ನೆ.3 ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣ ಹಿನ್ನೆಲೆಯಲ್ಲಿ ತಿಳಿಸಿ.**

- ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರೀಕರಣ ಎನ್ನುತ್ತಾರೆ
- ವಿಕೇಂದ್ರೀಕರಣದಿಂದ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು
- ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು.
- ವಿಕೇಂದ್ರೀಕರಣವು ಎಲ್ಲ ರೀತಿಯ ಶೋಷಣೆಗಳನ್ನು ತಡೆಯುತ್ತದೆ
- ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ.
- ಸಹಾನುಭೂತಿ ಮತ್ತು ಸಹಕಾರದಂತಹ ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ.
- ವಿಕೇಂದ್ರೀಕರಣದ ಜಾರಿಗಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

**ಪ್ರಶ್ನೆ.4 ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ**

- ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು.
- ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ವಯಸ್ಕ ಶಿಕ್ಷಣಕ್ಕೆ ಪ್ರೋತ್ಸಾಹಿಸುವುದು
- ತಾಂತ್ರಿಕ ಹಾಗೂ ವೃತ್ತಿ ತರಬೇತಿಗೆ ಪ್ರೋತ್ಸಾಹ
- ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ
- ಕೆರೆ ಕಟ್ಟೆಗಳ ನಿರ್ಮಾಣ
- ಹೂಳು ತೆಗೆಯುವುದು
- ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ
- ನೀರಾವರಿ ವಿಸ್ತರಣೆ
- ನಿರುದ್ಯೋಗ ಹಾಗೂ ಬಡತನ ನಿರ್ಮೂಲನೆ
- ವಸತಿ ಹೀನರಿಗೆ ಮನೆಗಳನ್ನು ನಿರ್ಮಾಣ
- ಗ್ರಾಮಗಳಲ್ಲಿನ ಪಡಿತರ ವ್ಯವಸ್ಥೆಯನ್ನು ಬಲಪಡಿಸುವುದು
- ಸರ್ಕಾರದ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆ
- ಗ್ರಾಮೀಣ ಸಂಸ್ಕೃತಿ ಶ್ರೀಮಂತಗೊಳಿಸುವಿಕೆ
- ಸಮಾಜ ಕಲ್ಯಾಣ ಕಾರ್ಯಗಳು

**ಪ್ರಶ್ನೆ.5, ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ನಿರ್ಣಾಯಕವಾದುದು. ವಿಶ್ಲೇಷಿಸಿ**

- ಮಹಿಳೆ ಮನೆಯ ಒಳಗೂ/ಹೊರಗೂ ದುಡಿಯುತ್ತದ್ದಾಳೆ
- ಕೃಷಿ, ಪಶುಪಾಲನೆ, ಮೀನುಗಾರಿಕೆ, ರೇಷ್ಮೆಕೃಷಿ, ತೋಟಗಾರಿಕೆ, ಪುಷ್ಪಕೃಷಿ, ಕೋಳಿ ಸಾಕಣೆಯ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಾಗಿ ದುಡಿಯುತ್ತಿದ್ದಾರೆ.
- ಕೃಷಿ ಕಾರ್ಮಿಕರಲ್ಲಿಯೂ ಮಹಿಳೆಯರೇ ಹೆಚ್ಚಾಗಿದ್ದಾರೆ.
- ವಿದ್ಯಾವಂತ ಮಹಿಳೆಯರು ಅರ್ಥವ್ಯವಸ್ಥೆಯ ವಿವಿಧ ಕ್ಷೇತ್ರಗಳಲ್ಲಿ, ನಾನಾರೀತಿಯ ಉದ್ಯೋಗಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ
- ಕಚೇರಿಗಳು, ವ್ಯಾಪಾರಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ವೃದ್ಧಾಶ್ರಮಗಳಲ್ಲಿ ಮಹಿಳೆಯರ ಸೇವೆ ಅಸಾಧಾರಣವಾದುದು. ಅಲ್ಲದೆ
- ವಿದ್ಯಾವಂತ ಮಹಿಳೆ ಜನಸಂಖ್ಯಾ ನಿಯಂತ್ರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾಳೆ.
- ಮಹಿಳೆಯರು ರಾಜಕೀಯ ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸುತ್ತಿದ್ದಾರೆ.

**ಪ್ರಶ್ನೆ.6 ಗ್ರಾಮೀಣ ಮಹಿಳೆಯರನ್ನು ಸಂಘಟಿಸುವಲ್ಲಿ ಮತ್ತು ಆರ್ಥಿಕ ಸ್ವಾವಲಂಬನೆಯಲ್ಲಿ 'ಮಹಿಳಾ ಸ್ವಸಹಾಯ ಸಂಘ'ಗಳ ಪಾತ್ರವೇನು?**

- ಗ್ರಾಮೀಣ ಭಾಗದ ಎಲ್ಲಾ ಹಳ್ಳಿಗಳಲ್ಲಿ 'ಮಹಿಳಾ ಸ್ವಸಹಾಯ ಸಂಘ' (ಸ್ತ್ರೀಶಕ್ತಿ ಸಂಘ)ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.
- ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವಲ್ಲಿ ಮತ್ತು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿವೆ.
- ಮಹಿಳೆಯರು ಇವುಗಳ ಮೂಲಕ ಸುಲಭವಾಗಿ ಸಾಲ ಪಡೆದು ಉತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದಾರೆ.
- ಈ ಸಂಘಗಳು ಉಳಿತಾಯ ಸಂಗ್ರಹದಲ್ಲಿ ಮತ್ತು ಸಾಲ ವಸೂಲಾತಿಯಲ್ಲಿ ಉತ್ತಮ ಸಾಧನೆ ಮಾಡುತ್ತಿವೆ.
- ಸ್ವಚ್ಛ ಹಾಗೂ ಪ್ರಗತಿಪರ ಸಮಾಜವನ್ನು ಕಟ್ಟುವಲ್ಲಿ ನೆರವಾಗಿವೆ
- ಕುಡಿತ, ಜೂಜು ಮುಂತಾದ ದುಶ್ಚಟಗಳ ನಿಯಂತ್ರಣ
- ಬಾಲ್ಯವಿವಾಹ, ವರದಕ್ಷಿಣೆ, ಜಾತಿಪದ್ಧತಿ, ಮೂಢನಂಬಿಕೆ, ಮಹಿಳೆ ಮತ್ತು ಮಕ್ಕಳ ಶೋಷಣೆ ನಿಯಂತ್ರಣ

# ಬ್ಯಾಂಕ ವ್ಯವಹಾರಗಳು

**I ಒಂದು ಅಂಕದ ಪ್ರಶ್ನೆಗಳು**

**1 ಬ್ಯಾಂಕ್ ಎಂಬ ಪದವು ಪ್ರೆಂಚಿನ ......... ಎಂಬ ಶಬ್ದದಿಂದ ಬಂದಿದೆ.**

ಉ: ಬ್ಯಾಂಕ್

**2 ಬ್ಯಾಂಕುಗಳ ಬ್ಯಾಂಕ್/ ಬ್ಯಾಂಕುಗಳ ತಾಯಿ.......... ಆಗಿದೆ.**

ಉ: ಭಾರತೀಯ ರಿಜರ್ವ ಬ್ಯಾಂಕ್

**3 ರಾಷ್ಟ್ರೀಯ ಉಳಿತಾಯ ಪತ್ರಗಳನ್ನು.......... ಇಲಾಖೆ ನೀಡುತ್ತದೆ.**

ಉ: ಭಾರತೀಯ ಅಂಚೆ ಇಲಾಖೆ

**4 ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರು ವ್ಯವಹರಿಸಬಹುದಾದ ಖಾತೆ**

ಉ: ಚಾಲ್ತಿ ಖಾತೆ

**5 ಬ್ಯಾಂಕೊ ಎಂಬುದು ......... ಪದ**

ಉ:ಇಟಾಲಿಯನ್

**II ಎರಡು ಅಂಕದ ಪ್ರಶ್ನೆಗಳು**

**1 ಬ್ಯಾಂಕಿನಲ್ಲಿ ತೆರೆಯಬಹುದಾದ ಖಾತೆಗಳು ಯಾವುವು?**

1ಉಳಿತಾಯ ಖಾತೆ 2 ಚಾಲ್ತಿ ಖಾತೆ 3 ಅವರ್ತ ಠೇವಣಿ ಖಾತೆ 4ನಿಶ್ಚಿತ ಠೇವಣಿ ಖಾತೆ.

**2 ಭಾರತದಲ್ಲಿರುವ ನಾಲ್ಕು ರಾಷ್ಟ್ರೀಕೃತ ಬ್ಯಾಂಕುಗಳು ಯಾವುವು ?**

1 ಭಾರತೀಯ ಸ್ಟೇಟ್ ಬ್ಯಾಂಕ್ 2 ಕೆನರಾ ಬ್ಯಾಂಕ್

3 ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ 4 ಬ್ಯಾಂಕ್ ಆಫ್ ಬರೋಡ

**III ಮೂರು ಅಂಕದ ಪ್ರಶ್ನೆಗಳು**

**1 ಬ್ಯಾಂಕುಗಳ ಗುಣಲಕ್ಷಣಗಳನ್ನು ತಿಳಿಸಿ**

1 ಬ್ಯಾಂಕುಗಳು ಹಣಕಾಸಿನ ಸಂಸ್ಥೆಗಳಾಗಿವೆ.

2 ಬ್ಯಾಂಕಿಂಗ್ ಕಂಪನಿ ಎಂದರೆ ಹಣಕಾಸಿನ ವ್ಯವಹಾರ ಮಾಡುವ ಸಂಸ್ಥೆ.

3 ಬ್ಯಾಂಕುಗಳು ಠೇವಣಿಗಳನ್ನ ಅಂಗೀಕರಿಸುತ್ತವೆ.

4 ಹಣವನ್ನ ಪಾವತಿ ಮಾಡಲು ಹಿಂದಕ್ಕೆ ಪಡೆಯಲು ಅನುಕೂಲ ಮಾಡಿಕೊಡುತ್ತದೆ.

5 ಬ್ಯಾಂಕುಗಳು ವಿವಿಧ ಉದ್ದೇಶಗಳಿಗೆ ಮತ್ತು ಕ್ಷೇತ್ರಗಳಿಗೆ ಸಾಲ ನೀಡುತ್ತದೆ.

6 ಬ್ಯಾಂಕ್ ಒಬ್ಬ ವ್ಯಕ್ತಿ. ಸಂಸ್ಥೆ ಅಥವಾ ಕಂಪನಿ ಆಗಿರಬಹುದು.

**2 ಬ್ಯಾಂಕಿನ ಕಾರ್ಯಗಳು ಯಾವುವು?**

1 ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿಗಳನ್ನು ಅಂಗೀಕರಿಸುವುದು.

2 ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು.

3 ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.

4 ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲಿ ಮಾಡುವುದು.

5 ಹುಂಡಿಗಳನ್ನು ಸೂಡಿ ಮಾಡುವುದು

6 ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.

**3 ಬ್ಯಾಂಕುಗಳು ಸಲ್ಲಿಸುವ ಸೇವೆಗಳು ಯಾವುವು?**

1 ಜಮಾ ಕಾರ್ಡ್ ನೀಡುವುದು

2 ಖಾಸಗಿ ಸಾಲಗಳನ್ನು ನೀಡುವುದು.

3 ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು

4 ಪರಸ್ಪರ ನಿಧಿಗಳನ್ನು ನಿರ್ವಹಿಸುವುದು

5 ವ್ಯಾಪಾರಕ್ಕೆ ಬೇಕಾದ ಸಾಲಗಳನ್ನು ನೀಡುವುದು

6 ಭದ್ರತಾ ಕಪಾಟು ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು

**4 ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದ ಆಗುವ ಅನುಕೂಲಗಳನ್ನು ತಿಳಿಸಿ ?**

1 ಬ್ಯಾಂಕ್ ಖಾತೆಯು ಹಣದ ಭದ್ರತೆಯನ್ನು ಕಾಪಾಡುತ್ತದೆ

2 ಬ್ಯಾಂಕ್ ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.

3 ಬ್ಯಾಂಕ್ ಖಾತೆಯು ಹಣವನ್ನು ವಸೂಲು ಮಾಡಲು ಸಹಾಯಮಾಡುತ್ತದೆ

4 ಖಾತೆಯನ್ನು ಹೊಂದಿದವರು ಸಾಲ ಪಡೆಯಲು ಸಾಧ್ಯವಾಗುತ್ತದೆ.

5 ಬ್ಯಾಂಕ್ ಖಾತೆಯು ವ್ಯವಹಾರಗಳನ್ನು ಸುಲಭವಾಗಿ ನಡೆಸಲು ಸಾಧ್ಯ ಮಾಡುತ್ತದೆ.

6 ಬ್ಯಾಂಕ್ ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು.

**IV –ನಾಲ್ಕು ಅಂಕದ ಪ್ರಶ್ನೆಗಳು**

**1 ಬ್ಯಾಂಕ್ ಖಾತೆಯನ್ನು ತೆರೆಯುವ ವಿಧಾನ ವಿವರಿಸಿ**

1 ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆರೆಯಬೇಕೆಂಬುದನ್ನು ನಿರ್ಧರಿಸುವುದು

2 ನಿಮಗೆ ಅನುಕೂಲವಾದ ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು

3 ಪ್ರಸ್ತಾವನೆ ಅರ್ಜಿ ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬುವುದು

4 ಪರಿಚಿತರ ಉಲ್ಲೇಖವನ್ನು ಕೊಡುವುದು

5 ಬ್ಯಾಂಕ್ ಖಾತೆಯನ್ನು ತೆರೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು .

6 ಅಧಿಕಾರಿಯ ಒಪ್ಪಿಗೆಯನ್ನು ಪಡೆಯುವುದು

7 ಪ್ರಾರಂಭ ಠೇವಣಿಯನ್ನು ಖಾತೆಗೆ ಜಮಾ ಮಾಡುವುದು

**2 ಬ್ಯಾಂಕುಗಳು ಯಾವೆಲ್ಲ ವ್ಯವಹಾರಗಳನ್ನು ನಿರ್ವಹಿಸುತ್ತವೆ?**

1 ಉಳಿತಾಯ ಖಾತೆಗಳನ್ನು ತೆರೆಯುವುದರ ಮೂಲಕ ಗ್ರಾಹಕರಲ್ಲಿ ಉಳಿತಾಯಕ್ಕೆ ಬೆಂಬಲ ನೀಡುತ್ತವೆ

2 ಬ್ಯಾಂಕುಗಳು ಉಳಿತಾಯಗಳನ್ನು ಒಗ್ಗೂಡಿಸಿ ಸಾಲಗಳನ್ನು ನೀಡುತ್ತವೆ

3 ಬ್ಯಾಂಕ್ ಖಾತೆ ಹೊಂದಿದವರ ಹೆಸರಿನ ಕ್ರಾಸ್ ಮಾಡಿದ ಚೆಕ್ ಮತ್ತು ಹುಂಡಿಗಳನ್ನು ಬೇರೆ ಬ್ಯಾಂಕುಗಳಿಂದ ವಸೂಲು ಮಾಡುತ್ತವೆ

4 ಹಣವನ್ನು ಚೆಕ್ಕು ಹಿಂಪಡೆವ ಚೀಟಿ ಅಥವಾ ಎಟಿಎಂ ಮೂಲಕ ಹಿಂಪಡೆಯುವ ಸೌಲಭ್ಯಗಳನ್ನು ನೀಡುತ್ತವೆ

5 ಖಾತೆದಾರರು ಸ್ಥಿರ ಆದೇಶದ ಮೂಲಕ ನಿಯತಕಾಲಿಕವಾಗಿ ಸಂದಾಯಗಳನ್ನು ಮಾಡಲು ಆದೇಶಿಸಿ ವಿವಿಧ ಬಿಲ್ಲುಗಳನ್ನು ತನ್ನ ಖಾತೆಯ ಮೂಲಕ ಪಾವತಿ ಮಾಡಬಹುದು

6 ಖಾತೆದಾರನ ಖಾತೆಗಳಿಗೆ ಬಡ್ಡಿಯನ್ನು ಜಮಾ ಮಾಡಲಾಗುತ್ತದೆ

7 ಬ್ಯಾಂಕ್ ಖಾತೆಗಳನ್ನು ಅದೇ ಬ್ಯಾಂಕಿನ ಇತರ ಖಾತೆಗಳಿಗೆ ಖಾತೆದಾರರ ಆದೇಶದಂತೆ ವರ್ಗಾವಣೆ ಮಾಡುತ್ತದೆ

**ಭಾರತದ ನಕಾಶೆಯಲ್ಲಿ ಕೆಳಗಿನ ಸ್ಥಳಗಳನ್ನು ಗುರುತಿಸಿ ರೂಡಿಸಿಕೊಳ್ಳುವದು**

1) 23.5 ಕರ್ಕಾಟಕ ಸಂಕ್ರಾಂತಿ ವೃತ್ತ
2) 82.5 ಪೂರ್ವ ರೇಖಾಂಶ
3) ಉತ್ಕಲ ಕರಾವಳಿ
4) ಕೊಚ್ಚಿ
5) ಕಾಂಡ್ಲಾ ಬಂದರು
6) ದಿಗ್ಬಾಯಿ
7) ದಾಮೋದರ ನದಿ ಕಣಿವೆ
8) ಭದ್ರಾವತಿ
9) ಬೆಂಗಳೂರು
10) ಇಂದಿರಾಕೋಲ್
11) ಇಂದಿರಾ ಪಾಯಿಂಟ್
12) ಕೊಯ್ನಾ
13) ದೆಹಲಿ
14) ಬಾಂಬೆ ಹೈ
15) ಕಾವೇರಿ ನದಿ
16) ಕೋರಮಂಡಲ ಕರಾವಳಿ
17) ಗೋವಿಂದ ಸಾಗರ
18) ನರ್ಮದಾ ನದಿ
19) ನಾಗಾರ್ಜುನ ಸಾಗರ

20) ಕನ್ಯಾಕುಮಾರಿ

21) ಭಾಕ್ರಾನಂಗಲ್ ಅಣೆಕಟ್ಟು

